# ಕರ್ನಾಟಕ ಸರ್ಕಾರ

## ಶಾಲಾಶಿಕ್ಷಣ ಇಲಾಖೆ (ಪದವಿಪೂರ್ವ)

## ಪ್ರಥಮ ಪಿ.ಯು.ಸಿ ಕನ್ನಡ ಭಾಷಾ ಪ್ರಶ್ನೆಕೋಶ

## ವಿಷಯ ಸಂಕೇತ (01)

# ಪ್ರಥಮ ಪಿಯುಸಿ ಕನ್ನಡ ಭಾಷಾ ಪಠ್ಯದ ಪ್ರಶ್ನೆಕೋಶ ರಚನಾ ಸಮಿತಿ


**ಸಂಯೋಜಕರು**

**ಶ್ರೀ ಕೆಂಪೇಗೌಡ**

ಹಿರಿಯ ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿಪೂರ್ವ ಕಾಲೇಜು
18 ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು– 560012

**ಸದಸ್ಯರು**

**ಶ್ರೀ ಶೇಖರಶೆಟ್ಟಿ ಎಂ.**
ಹಿರಿಯ ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿಪೂರ್ವ ಕಾಲೇಜು
ಪೊಲೀಸ್ ಕಾಲೋನಿ, ದಾಸರಹಳ್ಳಿ
ಬೆಂಗಳೂರು ಉತ್ತರ – 560023

**ಶ್ರೀ ರೋಹಿತ್ ಕೆ.**
ಹಿರಿಯ ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿಪೂರ್ವ ಕಾಲೇಜು
ಆಲೂರು
ಹಾಸನ ಜಿಲ್ಲೆ – 573213

**ಡಾ. ಪ್ರಭು ಬಿ.ಎಸ್.**
ಹಿರಿಯ ಕನ್ನಡ ಉಪನ್ಯಾಸಕರು
ಶ್ರೀ ಕೃಷ್ಣರಾಜೇಂದ್ರ ಬಾಲಕರ ಸರ್ಕಾರಿ
ಪದವಿಪೂರ್ವ ಕಾಲೇಜು, ಕೆ.ಆರ್.ನಗರ
ಮೈಸೂರು ಜಿಲ್ಲೆ – 571602

**ಶ್ರೀ ಲೋಕೇಶ್ ಬಿ.ವಿ.**
ಹಿರಿಯ ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿಪೂರ್ವ ಕಾಲೇಜು
ಬಸರಾಳು ಮಂಡ್ಯ ಜಿಲ್ಲೆ – 571416

# ಪರಿವಿಡಿ

**ಕಾವ್ಯಭಾಗ:**

1. ದುರ್ಯೋಧನ ವಿಲಾಪ – ರನ್ನ
2. ವಚನಗಳು
    ಅ) ಅಲ್ಲಮಪ್ರಭು
    ಆ) ಘಟ್ಟಿವಾಳಯ್ಯ
    ಇ) ಅಕ್ಕಮಹಾದೇವಿ
3. ದೇವನೊಲಿದನ ಕುಲವೇ ಸತ್ಕುಲಂ – ಹರಿಹರ
4. ಹಲುಬಿದಳ್ ಕಲ್ಮರಂ ಕರಗುವಂತೆ – ಲಕ್ಷ್ಮೀಶ
5. ತಲ್ಲಣಿಸದಿರು ಕಂಡ್ಯ ತಾಳುಮನವೇ – ಕನಕದಾಸ
6. ಸಿಸುಮಕ್ಕಳಿಗೊಲಿದ ಮಾದೇವ – ಜನಪದ ಕಾವ್ಯ
7. ಅಖಂಡ ಕರ್ಣಾಟಕ – ಕುವೆಂಪು
8. ಎಂದಿಗೆ – ಬಿ.ಸಿ ರಾಮಚಂದ್ರ ಶರ್ಮ
9. ಮಗು ಮತ್ತು ಹಣ್ಣುಗಳು – ಎಚ್.ಎಸ್. ಶಿವಪ್ರಕಾಶ್
10. ನಾ ಬರಿ ಭ್ರೂಣವಲ್ಲ – ಮಾಲತಿ ಪಟ್ಟಣಶೆಟ್ಟಿ
11. ಮತ್ತೆ ಸೂರ್ಯ ಬರುತ್ತಾನೆ – ಲೋಕೇಶ ಅಗಸನಕಟ್ಟೆ
12. ಸುನಾಮಿ ಹಾಡು – ಎಚ್. ಎಲ್. ಪುಷ್ಪ
13. ಹೊಲಿಗೆ ಯಂತ್ರದ ಅಮ್ಮಿ – ಆರಿಫ್‌ರಾಜಾ
14. ದೇವರಿಗೊಂದು ಅರ್ಜಿ – ಲಕ್ಕೂರು ಸಿ. ಆನಂದ
15. ಜೀವಕೆ ಇಂಧನ – ಬಸವರಾಜ ವಕ್ಕುಂದ

**ಗದ್ಯಭಾಗ**:

1. ಗಾಂಧಿ – ಡಾ.ಬೆಸಗರಹಳ್ಳಿ ರಾಮಣ್ಣ
2. ರಾಗಿಮುದ್ದೆ – ಚ.ಹ.ರಘುನಾಥ
3. ಜ್ಯೋತಿಷ್ಯ ಅರ್ಥಪೂರ್ಣವೋ ಅರ್ಥರಹಿತವೋ – ಡಾ. ಎಚ್ ನರಸಿಂಹಯ್ಯ
4. ಶಾಸ್ತ್ರೀ ಮಾಸ್ತರ ಮತ್ತವರ ಮಕ್ಕಳು – ಡಾ.ಚೆನ್ನಣ್ಣ ವಾಲೀಕಾರ
5. ಬುದ್ಧ ಬಿಸಿಲೂರಿನವನು – ನಾಗತಿಹಳ್ಳಿ ಚಂದ್ರಶೇಖರ್
6. ಮಹಾತ್ಮರ ಗುರು – ಮುಗಳವಳ್ಳಿ ಕೇಶವ ಧರಣಿ
7. ನಿರಾಕರಣೆ – ಡಾ. ವೀಣಾಶಾಂತೇಶ್ವರ
8. ಕೃಷಿಸಂಸ್ಕೃತಿ ಮತ್ತು ಜಾಗತೀಕರಣ – ಸಿ.ಎಚ್ ಹನುಮಂತರಾಯ
9. ಚತುರನ ಚಾತುರ್ಯ – ಯಾದವ ಕವಿ

**ನಾಟಕ:**

ಬೋಳೇಶಂಕರ – ಚಂದ್ರಶೇಖರ ಕಂಬಾರ

# 1. ದುರ್ಯೋಧನ ವಿಲಾಪ – ರನ್ನ

**I.** **ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ದರ್ಯೋಧನ ರಣರಂಗದಲ್ಲಿ ಏನನ್ನು ಮೆಟ್ಟಿ ನಡೆದನು?

ಅ) ಮುರಿದ ರಥಗಳು ಆ) ಚೂರಾದ ಗಧೆಗಳು

ಇ) ಕುದುರೆಗಳ ಮೃತ ದೇಹಗಳು ಈ) ಊದಿಕೊಂಡ ಹೆಣಗಳು

2. ರಣರಂಗದಲ್ಲಿ ನಡೆದು ಹೋಗುವಾಗ ದುರ್ಯೋಧನ ಯಾರ ಹೆಗಲನ್ನು ಆಶ್ರಯಿಸಿದ್ದನು?

ಅ) ಲಕ್ಷ್ಮಣಕುಮಾರ ಆ) ಕುಂಭಸಂಭವ ಇ) ಶಲ್ಯ ಈ) ಸಂಜಯ

3. ಶಿವನನ್ನು ಹೀಗೂ ಕರೆಯುತ್ತಾರೆ.

ಅ) ಮಧುಸೂದನ ಆ) ಪಿನಾಕಪಾಣಿ ಇ) ಇನತನಯ ಈ) ಉರಗಪತಾಕ

4. ಕುಂಭಸಂಭವ ಯಾರು?

ಅ) ದುರ್ಯೋಧನ ಆ) ಕೃಷ್ಣ ಇ) ದ್ರೋಣ ಈ) ಸಂಜಯ

5. ಪೊಕ್ಕು ರಣಾಜಿರದೊಳರಿನೃಪರನ್ನಿಕ್ಕಿದ ನರಸುತ... ಎಂಬ ದುರ್ಯೋಧನನ ಮೆಚ್ಚಿಗೆಯ ಮಾತು ಇವನ ಕುರಿತದ್ದು.

ಅ) ದುಶ್ಯಾಸನ ಆ) ಲಕ್ಷ್ಮಣಕುಮಾರ ಇ) ಕರ್ಣ ಈ) ಅಭಿಮನ್ಯು

6. ಚಕ್ರವ್ಯೂಹ ರಚಿಸಿದವರು ಯಾರು?

ಅ) ಕೃಪಾಚಾರ್ಯ ಆ) ದ್ರೋಣಾಚಾರ್ಯ ಇ) ವಿದುರ ಈ) ಭೀಷ್ಮಾಚಾರ್ಯ

7. ದುರ್ಯೋಧನನ ಮಗನ ಹೆಸರು?

ಅ) ಹೃಷಿಕೇತು ಆ) ಲಕ್ಷ್ಮಣಕುಮಾರ ಇ) ಚಿತ್ರಸೇನ ಈ) ಅಭಿಮನ್ಯು

8. ಜನಕಂಗೆ ಜಲಾಂಜಲಿಯಂ ತನೂಭವಂ ಕುಡುವುದುಚಿತಮ್... ಎಂಬಲ್ಲಿ ದುರ್ಯೋಧನ ಹೇಳುತ್ತಿರುವುದು.

ಅ) ಮಗ ತಂದೆಗೆ ಅಂತಿಮ ಗೌರವ ಸಲ್ಲಿಸುವುದು ಕ್ರಮ

ಆ) ಸಹೋದರ ಅಣ್ಣನಿಗೆ ಅಂತಿಮ ಗೌರವ ಸಲ್ಲಿಸುವುದು ಕ್ರಮ

ಇ) ತಂದೆ ಮಗನಿಗೆ ಅಂತಿಮ ಗೌರವ ಸಲ್ಲಿಸುವುದು ಕ್ರಮ

ಈ) ಯಾರು ಯಾರಿಗೆ ಬೇಕಾದರೂ ಅಂತಿಮ ಗೌರವ ಸಲ್ಲಿಸಬಹುದು.

9. ಆನರಿವೆಂ ಪೃಥೆಯರಿವಳ್ ದಾನವರಿಪು ಅರಿವನ್ ಅರ್ಕನರಿವಂ ಎಂಬ ಸಾಲುಗಳಲ್ಲಿನ ವ್ಯಕ್ತಿಗಳು ಕ್ರಮವಾಗಿ,

ಅ) ಸೂರ್ಯ, ಕೃಷ್ಣ, ಕುಂತಿ, ದುರ್ಯೋಧನ ಆ) ಸೂರ್ಯ, ಕೃಷ್ಣ, ಕುಂತಿ, ದುರ್ಯೋಧನ

ಇ) ದುರ್ಯೋಧನ, ಕುಂತಿ, ಸೂರ್ಯ, ಕೃಷ್ಣ ಈ) ದುರ್ಯೋಧನ, ಕುಂತಿ, ಕೃಷ್ಣ, ಸೂರ್ಯ

10. ಇವನನ್ನು ದಿವ್ಯಜ್ಞಾನಿ ಎಂದು ಕರೆಯಲಾಗಿದೆ.

ಅ) ನಕುಲ ಆ) ಧರ್ಮರಾಯ ಇ) ಭೀಮ ಈ) ಸಹದೇವ

11. ಅಂಗಾಧಿಪತಿ ಯಾರು?

ಅ) ದ್ರೋಣಾಚಾರ್ಯ ಆ) ದುಶ್ಯಾಸನ ಇ) ಕರ್ಣ ಈ) ಅಶ್ವತ್ಥಾಮ

12. ಹರಿಯು ಕರ್ಣನಿಂದ ಏನನ್ನು ದಾನವಾಗಿ ಪಡೆದನು?

ಅ) ಬಿಲ್ಲು ಆ) ಬಾಣ ಇ) ರಥ ಈ) ಕವಚ

**II.** **ಎರಡು –ಮೂರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ಎರಡು ಅಂಕ)**

1. ರಣರಂಗದಲ್ಲಿ ಬಿದ್ದಿದ್ದ ಅಭಿಮನ್ಯುವಿನ ಕಳೇಬರ ಯಾವ ರೀತಿ ಕಾಣುತ್ತಿತ್ತು?

2. ದುರ್ಯೋಧನ ತನ್ನ ಮಗನ ಶವ ಕಂಡು ಹೇಗೆ ವ್ಯಥೆ ಪಡುತ್ತಾನೆ?
3. ದುಶ್ಯಾಸನ ಅಣ್ಣನಿಗೆ ತೋರಿದ್ದ ವಿನಯಶೀಲತೆ ಎಂಥದು?
4. ಕರ್ಣನ ಜನ್ಮರಹಸ್ಯವನ್ನು ಯಾರು-ಯಾರು ಅರಿತಿದ್ದರು?
5. ದುರ್ಯೋಧನ ಕರ್ಣನ ದಾನಗುಣಗಳನ್ನು ಹೇಗೆ ಕೊಂಡಾಡಿದ್ದಾನೆ?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಕಾಲಿಡಲೆಡೆವಡೆಯದೆ ಕುರುಪತಿ ದಡಿಗವೆಣಂಗಳನೆ ಮೆಟ್ಟಿ ಮೆಲ್ಲನೆ ನಡೆದಂ
2. ಗಾಂಡಿವಿಯಲ್ತು ಪಿನಾಕಪಾಣಿಯುಂ ನೆರೆಯನ್
3. ನಿನ್ನೊರೆಗೆ ದೊರೆಗೆ ಗಂಡರುಮೊಳರೇ
4. ನೀಂ ಕ್ರಮವಿಪರ್ಯಯಂ ಮಾಡುವುದೇ
5. ಜನನೀಸ್ತನ್ಯಮನುಂಡೆನಾಂ ಬಳಿಕೆ ನೀಂ
6. ಈಗಳ್ ನೀನುಮಗಲ್ದೆತ್ತವೋದೆಯಂಗಾಧಿಪತೀ
7. ಆನರಿವೆಂ ಪೃಥೆಯರಿವಳ್
8. ಕೊಂತಿ ಬೇಡೆ ಬೆಗಡದೆ ಕೊಟ್ಟಯ್ ಪುರಿಗಣೆಯಂ

**IV. ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ದುರ್ಯೋಧನ ರಣರಂಗದಲ್ಲಿ ನಡೆದು ಬಂದ ಬಗೆಯನ್ನು ಕವಿ ಹೇಗೆ ವರ್ಣಿಸಿದ್ದಾನೆ?
2. ದ್ರೋಣನ ಕಳೇಬರ ಕಂಡು ದುರ್ಯೋಧನ ಹೇಗೆ ದುಃಖಿಸುತ್ತಾನೆ?
3. ಅಭಿಮನ್ಯುವಿನ ಶೌರ್ಯ ಸಾಹಸಗಳನ್ನು ದುರ್ಯೋಧನ ಹೇಗೆ ಹೊಗಳಿದ್ದಾನೆ?
4. ದುರ್ಯೋಧನ ದುಶ್ಯಾಸನನನ್ನು ಕಂಡು ವ್ಯಕ್ತಪಡಿಸಿದ ಭಾವನೆಗಳಾವುವು?
5. ಕರ್ಣನ ಕಳೇಬರದ ಮುಂದೆ ನಿಂತು ಅವನ ಅಗಲಿಕೆ ಕುರಿತು ದುರ್ಯೋಧನ ಆಡುವ ಮಾತುಗಳೇನು?
6. ಕರ್ಣನ ಉದಾತ್ತ ಗುಣಗಳನ್ನು ದುರ್ಯೋಧನ ಹೇಗೆ ಕೊಂಡಾಡಿದ್ದಾನೆ?

*****

# 2. ವಚನಗಳು – ಅಲ್ಲಮಪ್ರಭು

**I.** **ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಅಲ್ಲಮಪ್ರಭುವಿನ ಅಂಕಿತ ಯಾವುದು?

ಅ) ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಆ) ಗುಹೇಶ್ವರ ಇ) ರಾಮನಾಥ ಈ) ಚೆನ್ನಮಲ್ಲಿಕಾರ್ಜುನ

2. ಅಲ್ಲಮನ ವಚನದಲ್ಲಿ ಕಾಲುಗಳನ್ನು ಇವುಗಳಿಗೆ ಹೋಲಿಸಲಾಗಿದೆ.

ಅ) ಮರದ ಕೊಂಬೆಗಳಿಗೆ ಆ) ಕಂಬಗಳಿಗೆ ಇ) ಗಾಲಿಗಳಿಗೆ ಈ) ಬಂಡಿಗಳಿಗೆ

3. ಅಲ್ಲಮನ ವಚನದಲ್ಲಿ ದೇಹವೆಂದರೆ?

ಅ) ಮನೆ ಆ) ಖಾಲಿ ಬಂಡಿ ಇ) ತುಂಬಿದ ಬಂಡಿ ಈ) ಗಾಲಿಗಳಿಲ್ಲದ ಬಂಡಿ

4. ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದಡೇನು? ಎಂದರೆ.

ಅ) ಕೋಳಿಮೊಟ್ಟೆಯ ಕಟ್ಟುವುದು ಆ) ಜೋಳದ ಹಿಟ್ಟಿನ ಉಂಡೆಯನ್ನು ಕಟ್ಟುವುದು

ಇ) ಅನ್ನದ ಉಂಡೆಯನ್ನು ಕಟ್ಟುವುದು ಈ) ಒಗರಾದ/ಕಹಿಯಾದ ಉಂಡೆಯನ್ನು ಕಟ್ಟುವುದು

5. ಇಟ್ಟ ಕಲ್ಲು ಎಲ್ಲಿ ಸಿಕ್ಕರೆ ಲಿಂಗವೆ ಎಂದು ಕೇಳುತ್ತಾನೆ ಅಲ್ಲಮ?

ಅ) ದೇಹದ ಮೇಲೆ ಆ) ಬೆಟ್ಟದ ಮೇಲೆ ಇ) ಬಂಡೆಯ ಮೇಲೆ ಈ) ಮೆಳೆಯ ಮೇಲೆ

6. ಹಸಿದವರಿಗೆ ಇದನ್ನು ನೀಡಬೇಕೆಂದು ಅಲ್ಲಮ ಹೇಳುತ್ತಾನೆ?

ಅ) ಹಣ ಆ) ತುತ್ತು ಅನ್ನ ಇ) ಚಿನ್ನ ಈ) ಭೂಮಿ

**II.** **ಎರಡು ಮೂರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ಎರಡು ಅಂಕ)**

1. ಕಾಲು ಮತ್ತು ದೇಹವನ್ನು ಯಾವುದಕ್ಕೆ ಹೋಲಿಸಲಾಗಿದೆ?
2. ಯಾರನ್ನು ಕಂಡರೆ ಅಲ್ಲಮ ನಾಚುವೆನೆಂದು ಹೇಳುವನು?
3. ಅಲ್ಲಮ ಏನನ್ನು ನೀಡುವುದರಿಂದ ನಾ ದೇವ ಎಂದು ಹೇಳಿದ್ದಾನೆ?

**III.** **ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಬಂಡಿಯ ಹೊಡೆವರೈವರು ಮಾನಿಸರು
2. ಮೆಳೆ ಭಕ್ತನೆ ಇಟ್ಟಾತ ಗುರುವೆ?
3. ನೀ ದೇವನಾದಡೆ ಎನ್ನನೇಕೆ ಸಲಹೆ?

**IV.** **ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ದೇಹವೆಂಬ ಬಂಡಿಯನ್ನು ಹೇಗೆ ನಡೆಸಬೇಕೆಂದು ತಿಳಿಸಲಾಗಿದೆ?
2. ಆಡಂಬರದ ಭಕ್ತಿಯನ್ನು ಅಲ್ಲಮ ಹೇಗೆ ಖಂಡಿಸುತ್ತಾನೆ?
3. ಅಲ್ಲಮಪ್ರಭುವಿನ ವಚನಗಳ ಆಶಯಗಳೇನು?

# 2. ವಚನಗಳು – ಘಟ್ಟಿವಾಳಯ್ಯ

**I.** **ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ದಯೆ ಧರ್ಮದ ಮೊನೆ ಯಾವುದಕ್ಕೆ ಇರುವುದಿಲ್ಲ.

ಅ) ಇರಿಯುವ ಆಯುಧಕ್ಕೆ ಆ) ಬಿಲ್ಲಿಗೆ ಇ) ಬಾಣಕ್ಕೆ ಈ) ಕೊಲ್ಲುವ ಪ್ರಾಣಿಗೆ

2. ತಪವನ್ನು ಘಟ್ಟಿವಾಳಯ್ಯ ಏನೆಂದು ಕರೆದಿದ್ದಾನೆ?

ಅ) ಶ್ರದ್ಧೆ ಆ) ಬಂಧನ ಇ) ಬಿಡುಗಡೆ ಈ) ಬೇಡಿ

3. ನಗೆಗೀಡಾಗುವುದು ಯಾವುದು?

ಅ) ಕಟ್ಟುನಿಟ್ಟು ಬದುಕು ಆ) ಕಟ್ಟಿನ ವ್ರತದ ಭಾಷೆ ಇ)ತಪಸ್ಸು ಈ) ಸೂತಕ

4. ಭಾಷೆಹೀನರ ಕಂಡು ಏನಾಯ್ತೆಂದು ಘಟ್ಟಿವಾಳಯ್ಯ ಹೇಳಿದ್ದಾನೆ?

ಅ) ಅವಮಾನ ಆ) ಗರ್ವ ಇ) ನಾಚಿಕೆ ಈ) ಹೆಮ್ಮೆ

5. ಇದು ಘಟ್ಟಿವಾಳಯ್ಯನ ವಚನಗಳ ಅಂಕಿತ.

ಅ) ಕೂಡಲಸಂಗಮದೇವ ಆ) ಗುಹೇಶ್ವರ

ಇ) ಸೊನ್ನಲಿಗೆ ಸಿದ್ದರಾಮ ಈ) ಚಿಕ್ಕಯ್ಯಪ್ರಿಯ ಸಿದ್ದಲಿಂಗ

6. ಲೇಸ ಮರೆತು ಕಷ್ಟಕ್ಕೆ ಕಡಿದಾಡುವ ಎಂಬ ಮಾತಿನರ್ಥ.

ಅ) ಕೆಡುಕು ಮರೆತು ಒಳಿತು ಬಯಸುವ ಆ) ಒಳಿತು ಮರೆತು ಕೆಡುಕನ್ನೇ ಬಯಸುವ

ಇ) ಒಳಿತು ಕೆಡುಕು ಎರಡನ್ನೂ ಬಯಸುವ ಈ) ಒಳಿತು ಕೆಡುಕುಗಳ ವ್ಯತ್ಯಾಸವನ್ನೇ ಅರಿಯದ

**II. ಎರಡು ಮೂರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ಎರಡು ಅಂಕ)**

1. ಕೈದು ಕಾಳೋರಗಗಳಿಗೆ ಏನೇನು ಇರುವುದಿಲ್ಲ?
2. ತಗಹು ಸೂತಕಗಳು ಯಾವುವು?
3. ತನು ಮನ ಧನಗಳನ್ನು ಮರೆಯಲು ಏನೇನನ್ನು ತೋರುತ್ತಾರೆ?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ವೇಷಧಾರಿಗಳೆಲ್ಲ ನಿಮ್ಮ ಕೂಟಕ್ಕೆ ಹೊರಗು.
2. ಶೀಲವೆಂಬುದು ಸೂತಕ.
3. ಭಾಷೆ ಹೀನರ ಕಂಡು ನಾಚಿಕೆಯಾಯಿತ್ತು.

**IV. ಐದು –ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಘಟ್ಟಿವಾಳಯ್ಯ ವೇಷಧಾರಿಗಳನ್ನು ಕೂಟದಿಂದ ಹೊರಗು ಎನ್ನಲು ಕಾರಣಗಳೇನು?
2. ವ್ರತಗಳನ್ನು ಕುರಿತು ಘಟ್ಟಿವಾಳಯ್ಯನ ನಿಲುವುಗಳೇನು?
3. ಘಟ್ಟಿವಾಳಯ್ಯನ ವಚನಗಳ ಆಶಯವೇನು?

## 2. ವಚನಗಳು – ಅಕ್ಕಮಹಾದೇವಿ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಅಕ್ಕನು ಹೇಳುವ ತೊಡರು ಯಾವುದು?

ಅ) ಚಿನ್ನದ ಬಲೆ ಆ) ರತ್ನದ ಸಂಕೋಲೆ ಇ) ವಜ್ರದ ಸಂಕೋಲೆ ಈ) ಮುತ್ತಿನ ಬಲೆ

2. ಇದು ಲೋಕದ ಚೇಷ್ಟೆಗೆ ಬೀಜವಾಗಿದೆ.

ಅ) ಚಂದ್ರ ಆ) ಗ್ರಹ ಇ) ರವಿ ಈ) ನಕ್ಷತ್ರ

3. ಅಕ್ಕಮಹಾದೇವಿಯ ಪ್ರಕಾರ ಭವ ಕೆಡುವುದು?

ಅ) ಮನ ಪತಿಯಲ್ಲಿ ಸಿಲುಕಿದಾಗ ಆ) ಮನ ಚೆನ್ನಮಲ್ಲಿಕಾರ್ಜುನನಲ್ಲಿ ಸಿಲುಕಿದಾಗ

ಇ) ಮನ ಲೋಕದ ಮೋಹದಲ್ಲಿ ಸಿಲುಕಿದಾಗ ಈ) ಮನ ಸಂಸಾರದಲ್ಲಿ ಸಿಲುಕಿದಾಗ

4. ಸತ್ಯವ ನುಡಿವುದು ಯಾವುದಕ್ಕೆ ಶೃಂಗಾರ?

ಅ) ಕರಕ್ಕೆ ಆ) ಕರಣಕ್ಕೆ ಇ) ವದನಕ್ಕೆ ಈ) ವಚನಕ್ಕೆ

5. ಅಕ್ಕಮಹಾದೇವಿಯ ವಚನಗಳ ಅಂಕಿತವಿದು.

ಆ) ರಾಮನಾಥ ಆ) ಚೆನ್ನಮಲ್ಲಿಕಾರ್ಜುನ ಇ) ಕೂಡಲಸಂಗಮದೇವ ಈ) ಗುಹೇಶ್ವರ

**II. ಎರಡು –ಮೂರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ಎರಡು ಅಂಕ)**

1. ರತ್ನ ಮತ್ತು ಮುತ್ತು ಏನನ್ನು ಸೂಚಿಸುತ್ತವೆ?
2. ಲೋಕ ಹಾಗೂ ಕರಣಗಳ ಚೇಷ್ಟೆಗಳಿಗೆ ಬೀಜ ಯಾವುದು?
3. ಕಣ್ಣು ಹಾಗೂ ಕರ್ಣಗಳಿಗೆ ಶೃಂಗಾರ ಯಾವುದು?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಮುತ್ತಿನ ಬಲೆಯಾದಡೆ ಬಂಧನವಲ್ಲವೇ?
2. ಎನಗೆ ಭವವುಂಟೆ?
3. ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು

**IV. ಐದು –ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಲೋಕದ ಭಜನೆಯಲ್ಲಿ ಸಿಲುಕಿದವರಿಗೆ ಮುಕ್ತಿಯಿಲ್ಲ ಎಂಬುದನ್ನು ಅಕ್ಕ ಹೇಗೆ ನಿರೂಪಿಸಿದ್ದಾಳೆ?
2. ಹುಟ್ಟು ಸಾವನ್ನು ಮೀರುವುದು ಹೇಗೆಂದು ಅಕ್ಕಮಹಾದೇವಿ ತನ್ನ ವಚನದಲ್ಲಿ ಹೇಗೆ ವಿವರಿಸಿದ್ದಾಳೆ?
3. ಬದುಕು ಸಾರ್ಥಕವಾಗಬೇಕಾದರೆ ಯಾವ ಅಂಶಗಳು ಇರಬೇಕೆಂದು ಅಕ್ಕಮಹಾದೇವಿ ಹೇಳುತ್ತಾಳೆ?

*****

# 3. ದೇವನೊಲಿದನ ಕುಲವೇ ಸತ್ಕುಲಂ – ಹರಿಹರ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಚೋಳ ದೇಶವು ಇವರಿಗೆ ನೆಲೆಯಾಗಿತ್ತು.

ಅ) ವಿಷ್ಣು ಭಕ್ತರಿಗೆ ಆ) ಶಿವ ಭಕ್ತರಿಗೆ

ಇ) ದೇವೇಂದ್ರನ ಭಕ್ತರಿಗೆ ಈ) ರಾಜನ ಅನುಯಾಯಿಗಳಿಗೆ

2. ಚೋಳದೇಶವನ್ನು ಆಳುತ್ತಿದ್ದ ದೊರೆ.

ಅ) ರಾಜೇಂದ್ರ ಚೋಳ ಆ) ಕರಿಕಾಲ ಚೋಳ ಇ) ರಾಜರಾಜ ಚೋಳ ಈ) ಕೊಂಗುಣಿ ವರ್ಮ

3. ಚೆನ್ನಯ್ಯನು ಮಾಡುತ್ತಿದ್ದ ಕಾಯಕ ಯಾವುದು?

ಅ) ಅರಮನೆಯ ಕಾವಲು ಆ) ಅರಮನೆಯ ಸೇನಾಧಿಪತಿ

ಇ) ಅರಮನೆಯ ಅಂತಃಪುರದ ಊಳಿಗ ಈ) ಅರಮನೆಗೆ ಕಾಡಿನಿಂದ ಮೇವಿನ ಹುಲ್ಲು ತರುವ

4. ಚೆನ್ನಯ್ಯ ಹುಲ್ಲನ್ನು ಯಾವುದರ ಮೇಲೆ ಹೇರಿಕೊಂಡು ಬರುತ್ತಿದ್ದ?

ಅ) ಎತ್ತಿನ ಆ) ಕುದುರೆಯ ಇ) ಒಂಟೆಯ ಈ) ಆನೆಯ

5. ತಿಲದ ತೈಲದ ತೆರದೆ, ಕಾಷ್ಟದಗ್ನಿಯ ತೆರದೆ

ನೆಲದ ಮರೆಯೊಳಗೆ ತೊಳಗುವ ನಿಧಾನದ ತೆರದೆ.. ಎಂಬಲ್ಲಿ ಚೆನ್ನಯ್ಯನ ಭಕ್ತಿಯನ್ನು ಹೀಗೆ ವರ್ಣಿಸಲಾಗಿದೆ.

ಅ) ಭಕ್ತಿ ಇದೆ ಅದು ಕಾಣುತ್ತಿದೆ ಆ) ಭಕ್ತಿ ಇಲ್ಲ ಹಾಗಾಗಿ ಕಾಣುತ್ತಿಲ್ಲ

ಇ) ಭಕ್ತಿ ಇದೆ ಆದರೆ ಅದು ಹೊರಲೋಕಕ್ಕೆ ಕಣುತ್ತಿಲ್ಲ. ಈ) ಭಕ್ತಿ ಎಂಬುದು ಪ್ರದರ್ಶನದ ವಸ್ತು

6. ಶಿವನು ಯಾರ ಜೊತೆ ಊಟ ಮಾಡಿದನು?

ಅ) ಕರಿಕಾಲ ಚೋಳ ಆ) ಚೆನ್ನಯ್ಯ ಇ) ಚೋಳ ದೇಶದ ಪ್ರಜೆಗಳ ಈ) ಪಾರ್ವತಿಯ

7. ಓಹೋ ವಿಚಾರವಿಲ್ಲದೆ ಇಂತು ಮಾಳ್ಪರೇ

ಆಹಾ ನಿಮ್ಮರಸುತನವೆಮ್ಮಲ್ಲಿ ಮಾಳ್ಪರೇ

ಎಂಬ ಸಾಲುಗಳಲ್ಲಿ ಶಿವ ರಾಜನಿಗೆ ಏನು ಹೇಳುತ್ತಿದ್ದಾನೆ?

ಅ) ಯೋಚಿಸಿಯೇ ಅಧಿಕಾರ ಪ್ರದರ್ಶಿಸಿದೆ ಆ) ಯೋಚಿಸದೆ ಅಧಿಕಾರ ಪ್ರದರ್ಶಿಸುತ್ತಿರುವೆಯ?

ಇ) ರಾಜನ ಅಧಿಕಾರವಿರುವದೇ ಚಲಾಯಿಸಲು ಈ) ಅರಸುತನ ಶಿವನಿಗೂ ಅನ್ವಯಿಸುತ್ತದೆ.

8. ಚೆನ್ನಯ್ಯನನ್ನು ಹುಡುಕಲು ಚೋಳರಾಜ ಯಾರನ್ನು ಕಳುಹಿಸಿದನು?

ಅ) ಮಂತ್ರಿಗಳು ಆ) ಸೇನಾಧಿಪತಿಗಳು ಇ) ದೂತರು ಈ) ರಾಜ ಪರಿವಾರದವರು

9. ಚೋಳರಾಜ ಚೆನ್ನಯ್ಯನನ್ನು ಶಿವಾಲಯಕ್ಕೆ ಹೇಗೆ ಕರೆತಂದನು?

ಅ) ಆನೆಯ ಮೇಲೆ ಕೂರಿಸಿ ಆ) ಪಲ್ಲಕ್ಕಿಯಲ್ಲಿ ಕೂರಿಸಿ

ಇ) ರಥದಲ್ಲಿ ಕೂರಿಸಿ ಈ) ಎತ್ತಿನ ಗಾಡಿಯಲ್ಲಿ ಕೂರಿಸಿ

10. ಇದು ಕೈಲಾಸದಲ್ಲಿ ಚೆನ್ನಯ್ಯನಿಗೆ ಸಿಕ್ಕ ಪದವಿ.

ಅ) ದೇವ ಆ) ಗಣ ಇ) ಭಕ್ತ ಈ) ಭವಿ

**II. ಎರಡು ಮೂರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ಎರಡು ಅಂಕ)**

1. ಕಾವೇರಿ ನದಿಯ ಮಹಿಮೆ ಎಂಥದು?
2. ಚೆನ್ನಯ್ಯನ ಗುಪ್ತ ಭಕ್ತಿ ಯಾವ ಬಗೆಯದು?
3. ಶಿವಲಿಂಗವನ್ನು ಯಾವ ಯಾವ ಹೂಗಳಿಂದ ಚೆನ್ನಯ್ಯ ಸಿಂಗರಿಸುತ್ತಿದ್ದನು?
4. ಚೋಳರಾಜ ಚೆನ್ನಯ್ಯನ ಪಾದಗಳನ್ನು ಹಿಡಿದಾಗ ಅವನ ಪ್ರತಿಕ್ರಿಯೆ ಏನು?

5. ಶಿವನ ಮೇಲೆ ಚೆನ್ನಯ್ಯನು ಮುನಿಸಿಕೊಳ್ಳಲು ಕಾರಣವೇನು?

6. ಶಿವನು ಚೆನ್ನಯ್ಯನನ್ನು ಹೇಗೆ ಸಮಾಧಾನ ಪಡಿಸಿದನು?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಕಾವೇರಿ ಸೋಂಕಿದರೆ ಪಾಪಮಂ ಸೋವೇರಿ.
2. ನೆಲದ ಮರೆಯೊಳಗೆ ತೊಳಗುವ ನಿಧಾನದ ತೆರದೆ.
3. ಸೋಂಪೇರಿ ಚಿತ್ತಜಾರಿಯ ಚಿತ್ತಮಂ ಸೋಂಕಿ.
4. ಉಂಡನಭವಂ ಸ್ವರ್ಗ ಮರ್ತ್ಯಕ್ಕೆ ಪೊಸತಾಗಿ.
5. ಆಹ ನಿಮ್ಮರಸುತನವೆಮ್ಮಲ್ಲಿ ಮಾಳ್ಪರೇ.
6. ನಿಂದು ಚೋಳಂ ಕೌತುಕಂ ಮಿಕ್ಕು ನೋಡುತಂ.
7. ಇಳಿಪಿದಂ ಸರ್ವಾಂಗಮಂ ಚೆನ್ನನಂಘ್ರಿಯೊಳು.
8. ದೇವನೊಲಿದನ ಕುಲವೆ ಸತ್ಕುಲಂ
9. ಮೇದಿನಿಗೆ ಬೀದಿಗರುವಾದುದೆನ್ನಯ ಭಕ್ತಿ.

**IV. ಐದು –ಆರು ವಾಕ್ಯಗಳಲ್ಲಿ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಕಾವೇರಿ ನದಿಯ ಮಹಿಮೆ ಎಂತಹುದು?
2. ಚೆನ್ನಯ್ಯನ ಗುಪ್ತಭಕ್ತಿ ಯಾವ ರೀತಿಯದು?
3. ಶಿವಲಿಂಗವನ್ನು ಯಾವ ಯಾವ ಹೂ ಪತ್ರೆಗಳಿಂದ ಚೆನ್ನಯ್ಯ ಸಿಂಗರಿಸುತ್ತಿದ್ದನು?
4. ಚೋಳರಾಜ ಚೆನ್ನಯ್ಯನ ಪಾದಗಳನ್ನು ಹಿಡಿದಾಗ ಅವನ ಪ್ರತಿಕ್ರಿಯೆ ಏನು?
5. ಶಿವನ ಮೇಲೆ ಚೆನ್ನಯ್ಯನು ಮುನಿಸಿಕೊಳ್ಳಲು ಕಾರಣವೇನು?
6. ಶಿವನು ಚೆನ್ನಯ್ಯನನ್ನು ಹೇಗೆ ಸಮಾಧಾನ ಪಡಿಸಿದನು?

*****

# 4. ಹಲುಬಿದಳ್ ಕಲ್ಮರಂ ಕರಗುವಂತೆ – ಲಕ್ಷ್ಮೀಶ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಸೀತೆಯನ್ನು ಕಾಡಿಗೆ ಕರೆದುಕೊಂಡು ಹೋದವನು.

ಅ) ರಾಮ ಆ) ಲಕ್ಷ್ಮಣ ಇ) ಭರತ ಈ) ಶತ್ರುಘ್ನ

2. ಸೀತೆಯನ್ನು ಕುರಿತ ರಾಮನ ಆಜ್ಞೆ ಏನಾಗಿತ್ತು?

ಅ) ಋಷ್ಯಾಶ್ರಮಕ್ಕೆ ಬಿಟ್ಟು ಬರುವುದು ಆ) ತವರಿಗೆ ಬಿಟ್ಟು ಬರುವುದು

ಇ) ಕಾಡು ತೋರಿಸಿ ಕರೆತರುವುದು ಈ) ಕಾಡಿಗೆ ಬಿಟ್ಟು ಬರುವುದು

3. ಲಕ್ಷ್ಮಣನ ಮಾತು ಕೇಳಿದ ಸೀತೆ ಭೂಮಿಗೆ ಹೀಗೆ ಬಿದ್ದಳು.

ಅ) ಹಣ್ಣು ಬಿಟ್ಟ ಮಾವಿನ ಮರವೊಂದು ಬೀಳುವಂತೆ

ಆ) ಗೊನೆಬಿಟ್ಟ ಬಾಳೆ ಗಿಡವೊಂದು ಬಿರುಗಾಳಿಯ ಹೊಡೆತಕ್ಕೆ ಬೀಳುವಂತೆ

ಇ) ಕಾಯಿ ಬಿಟ್ಟ ತೆಂಗಿನ ಮರವೊಂದು ಬೀಳುವಂತೆ

ಈ) ಬಾಳೆಯ ಗಿಡವೊಂದು ಬೀಳುವಂತೆ

4. ಕಾಡಿನಲ್ಲಿ ತನಗೆ ಯಾರ ನೆರವುಂಟೆಂದು ಸೀತೆ ಹೇಳುತ್ತಾಳೆ?

ಅ) ಕಾಡಿನ ಜನಗಳ ಆ) ಕ್ರೂರ ಮೃಗಗಳ ಇ) ಋಷಿ ಮುನಿಗಳ ಈ) ಕ್ರೂರ ಖಗಗಳ

5. ಸೀತೆ ಇವನಲ್ಲಿ ತಪ್ಪಿಲ್ಲವೆಂದು ಹೇಳುತ್ತಾಳೆ.

ಅ) ಲಕ್ಷ್ಮಣನಲ್ಲಿ ಆ) ಕರುಣಾಳು ರಾಘವನಲ್ಲಿ ಇ) ಭರತನಲ್ಲಿ ಈ) ಹನುಮಂತನಲ್ಲಿ

6. ಸೀತೆ ಲಕ್ಷ್ಮಣನಿಗೆ ಏನೆಂದು ಹಾರೈಸಿ ಬೀಳ್ಕೊಟ್ಟಳು?

ಅ) ನಿನಗೆ ಮಾರ್ಗದಲ್ಲಿ ಹೆಜ್ಜೆ ಹೆಜ್ಜೆಗೂ ಸುಖವೇ ಆಗಲಿ

ಆ) ನಿನಗೆ ಮಾರ್ಗದಲ್ಲಿ ಹೆಜ್ಜೆ ಹೆಜ್ಜೆಗೂ ಕ್ರೂರ ಮೃಗಗಳು ಸಿಗಲಿ

ಇ) ನಿನಗೆ ಮಾರ್ಗದಲ್ಲಿ ಹೆಜ್ಜೆ ಹೆಜ್ಜೆಗೂ ಕ್ರೂರ ವ್ಯಕ್ತಿಗಳೇ ಸಿಗಲಿ

ಈ) ನಿನಗೆ ಮಾರ್ಗದಲ್ಲಿ ತೊಂದರೆ ಒದಗಲಿ

7. ಇವಳನ್ನು ಭೂಜಾತೆ ಎಂದೂ ಕರೆಯುವರು?

ಅ) ಊರ್ಮಿಳೆ ಆ) ಕೌಸಲ್ಯೆ ಇ) ಸೀತೆ ಈ) ಸುಮಿತ್ರೆ

8. ವಾಲ್ಮೀಕಿ ಮುನಿ ಏನನ್ನು ಹುಡುಕುತ್ತಾ ಸೀತೆ ಇದ್ದ ಸ್ಥಳಕ್ಕೆ ಬಂದನು?

ಅ) ದರ್ಬೆಯನ್ನು ಆ) ಪ್ರಾಣಿಯನ್ನು ಇ) ಯೂಪವನ್ನು ಈ) ತುಪ್ಪವನ್ನು

9. ರಾವಣಾರಿ ಎಂದರೆ?

ಅ) ಅಂಗದ ಆ) ಲಕ್ಷ್ಮಣ ಇ) ರಾಮ ಈ) ಸುಗ್ರೀವ

10. ಧರ್ಮದೇವತೆ ಜಗಜ್ಜನನಿ ಜಾಹ್ನವಿ ಎಂದರೆ ಯಾರು?

ಅ) ಗಂಗೆ ಆ) ತುಂಗೆ ಇ) ಸರಯೂ ಈ) ಯಮುನೆ

11. ಸೀತೆಗೆ ಕಾಡಿನಲ್ಲಿ ಆಶ್ರಯ ಕೊಟ್ಟವರು?

ಅ) ವಸಿಷ್ಟ ಮುನಿಗಳು ಆ) ವಿಶ್ವಾಮಿತ್ರ ಮುನಿಗಳು ಇ) ವಾಲ್ಮೀಕಿ ಮುನಿಗಳು ಈ) ಕೌಶಿಕ ಮುನಿಗಳು

12. ದೇವಿ ಬಿಡು ಶೋಕಮಂ ಪುತ್ರಯುಗಮಂ ಪಡೆವೆ ಎಂಬ ವಾಲ್ಮೀಕಿ ಮುನಿಗಳ ಮಾತಿನ ಅರ್ಥ.

ಅ) ದುಃಖವನ್ನು ಬಿಡು ಯುಗ ಪುರುಷ ರಾಜನನ್ನು ಪಡೆವೆ

ಆ) ದುಃಖವನ್ನು ಬಿಡು ಅವಳಿ ಗಂಡು ಮಕ್ಕಳನ್ನು ಪಡೆವೆ

ಇ) ದುಃಖವನ್ನು ಬಿಡು ಯುಗ ಪುರುಷ ಮಗನನ್ನು ಪಡೆವೆ

ಈ) ದುಃಖವನ್ನು ಬಿಡು ಯುಗ ಪ್ರವರ್ತಕ ಮಗನನ್ನು ಪಡೆವೆ

**II. ಎರಡು ಮೂರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ಎರಡು ಅಂಕ)**

1. ಸೀತೆ ಪ್ರವೇಶಿಸಿದ ಕಾಡು ಹೇಗಿತ್ತು?
2. ಲಕ್ಷ್ಮಣ ದುಃಖಿತನಾಗಲು ಕಾರಣವೇನು?
3. ಮೂರ್ಛಿತಳಾದ ಸೀತೆಯನ್ನು ಲಕ್ಷ್ಮಣ ಹೇಗೆ ಉಪಚರಿಸಿದನು?
4. ಸೌಮಿತ್ರಿಗೆ ಸೀತೆಯು ಹಿಂದಿರುಗಿ ಹೋಗೆಂದು ಏಕೆ ಹೇಳಿದಳು?
5. ಸೀತೆಯನ್ನು ಕಾಡು ಪ್ರಾಣಿಗಳು ಹೇಗೆ ಉಪಚರಿಸಿದವು?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಅಹಹ ಎಂದಡಿಗಡಿಗೆ ತಲೆಗೊಡಹುವಂತಿರಲ್
2. ಇಲ್ಲಿಗೇಕೈತಂದೆ ತಂದೆ ಸೌಮಿತ್ರಿ
3. ಮೆಲ್ಲನ್ ಈ ವಿಪಿನಕೆ ಒಡಕೊಂಡು ಬಂದೆಂ
4. ರಾಮನ ಸೇವೆ ಸಂದುದೆ ತನಗೆ
5. ಹರಧನುವ ಮುರಿದೆನ್ನಂ ಮದುವೆಯಾದ
6. ಲೋಕದರಸ ಏಗೈದೊಡಂ ತನ್ನ ಕಿಂಕರರ್ ಬೇಕು ಬೇಡೆಂದು ಪೇಳರೆ
7. ಸಲಹಿಕೊಂಬುದು ತನ್ನ ಮಾತೆಯಂ
8. ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೆ
9. ಹಲುಬಿದಳ್ ಕಲ್ಮರಂ ಕರಗುವಂತೆ
10. ಜನಕಂಗೆ ನಾವನ್ಯರಲ್ಲ

**IV. ಐದು –ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಸೀತೆ ಲಕ್ಷ್ಮಣರು ಮಹಾರಣ್ಯವನ್ನು ಪ್ರವೇಶಿಸಿದ ಸನ್ನಿವೇಶವನ್ನು ವಿವರಿಸಿ.
2. ಕಾಡಿನಲ್ಲಿ ಸೀತೆ ಏನೇನು ಕಾಣಲು ಬಯಸಿದಳು?
3. ಸೀತೆಯನ್ನು ಕಾಡಿನಲ್ಲಿ ಬಿಡಲು ಬಂದ ಲಕ್ಷ್ಮಣನ ಬೇಗುದಿ ಹೇಗಿತ್ತು?
4. ರಾಮನ ಆಜ್ಞೆಯನ್ನು ಲಕ್ಷ್ಮಣ ಸೀತೆಗೆ ಹೇಗೆ ತಿಳಿಸಿದನು?
5. ಸೀತೆ ಹಿಂದಿನ ಘಟನೆಗಳನ್ನು ನೆನಪಿಸಿಕೊಂಡು ಹೇಗೆ ದುಃಖಿಸುತ್ತಾಳೆ?

*****

# 5. ತಲ್ಲಣಿಸದಿರು ಕಂಡ್ಯ ತಾಳುಮನವೇ – ಕನಕದಾಸ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ವೃಕ್ಷವು ಎಲ್ಲಿ ಹುಟ್ಟಿತ್ತು?

ಅ) ಹಳ್ಳದಲ್ಲಿ ಆ) ಬೆಟ್ಟದ ತುದಿಯಲ್ಲಿ ಇ) ಕಣಿವೆಯಲ್ಲಿ ಈ) ಮರುಭೂಮಿಯಲ್ಲಿ

2. ಮೃಗಪಕ್ಷಿಗಳು ಇಲ್ಲಿ ಆಡುತ್ತಿದ್ದವು.

ಅ) ಆಗಸದಲ್ಲಿ ಆ) ಹೊಲದಲ್ಲಿ ಇ) ತೋಟದಲ್ಲಿ ಈ) ಅಡವಿಯಲ್ಲಿ

3. ಯಾವ ತೆರದಿ ಸ್ವಾಮಿ ನಮ್ಮನ್ನು ಬಿಡದೆ ರಕ್ಷಿಸುವನು?

ಅ) ಬಂಧುವಿನ ತೆರದಿ ಆ) ರಾಜನ ತೆರದಿ ಇ) ಪಡೆದ ಜನನಿಯ ತೆರದಿ ಈ) ಸ್ನೇಹಿತನ ತೆರದಿ

4. ಅರಗಿಳಿಗಳಿಗೆ ಈ ಬಣ್ಣವನ್ನು ಬರೆಯಲಾಗಿದೆ.

ಅ) ಬಿಳಿ ಆ) ಕೆಂಪು ಇ) ಹಸುರು ಈ) ನೀಲಿ

5. ಕಪ್ಪೆಗಳು ಎಲ್ಲಿ ಹುಟ್ಟಿ ಕೂಗುತ್ತವೆ?

ಅ) ಮಣ್ಣಿನಲ್ಲಿ ಆ) ನೀರಿನಲ್ಲಿ ಇ) ಮರದಲ್ಲಿ ಈ) ಕಲ್ಲಿನಲ್ಲಿ

**II. ಎರಡು ಮೂರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ಎರಡು ಅಂಕ)**

1. ವೃಕ್ಷವನ್ನು ಆದಿಕೇಶವ ಹೇಗೆ ಸಲಹುತ್ತಾನೆ?
2. ಮೃಗ ಪಕ್ಷಿಗಳನ್ನು ಸ್ವಾಮಿಯು ಹೇಗೆ ರಕ್ಷಿಸುತ್ತಾನೆ?
3. ನವಿಲಿಗೆ ಏನನ್ನು ಬರೆಯಲಾಗಿದೆ? ಹವಳದ ಲತೆಗೆ ಏನನ್ನು ಇಡಲಾಗಿದೆ?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ.
2. ಪವಳದ ತಲೆಗೆ ಕೆಂಪಿಟ್ಟವರು ಯಾರೊ.
3. ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ.

**IV. ಐದು –ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಎಲ್ಲರನು ರಕ್ಷಿಸುವ ದೇವರು ನಮ್ಮನ್ನೂ ರಕ್ಷಿಸುತ್ತಾನೆ ಎಂಬುದನ್ನು ದಾಸರು ಹೇಗೆ ಹೇಳಿದ್ದಾರೆ?
2. ಕನಕದಾಸರು 'ತಲ್ಲಣಿಸದಿರು ಮನವೆ' ಎನ್ನಲು ಕಾರಣವೇನು?

*****

# 6. ಸಿಸುಮಕ್ಕಳಿಗೊಲಿದ ಮಾದೇವ – ಜನಪದ ಕಾವ್ಯ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಮಾದೇವ ಎಲ್ಲಿ ಒರಗಿದ್ದಾನೆ?

ಅ) ಮೂಡಲ ಮಲೆ ಆ) ಪಡುವಲ ಮಲೆ ಇ) ತೆಂಕಣ ಮಲೆ ಈ) ಬಡಗಣ ಮಲೆ

2. ಇವಳ ಮಕ್ಕಳನ್ನು ಮಾದೇವ ದತ್ತುವಾಗಿ ಪಡೆದನು.

ಅ) ದೇವರಮ್ಮ ಆ) ನೀಲಮ್ಮ ಇ) ಸಂಕಮ್ಮ ಈ) ವೆಂಕಮ್ಮ

3. ಶಿಶುಮಕ್ಕಳು ಹೂ ತರಲು ಹೋಗಿದ್ದ ಕಾಡಿನ ಸ್ಥಳ

ಅ) ಕಾಡ ಹಳ್ಳ ಆ) ನೀರ ಹಳ್ಳ ಇ) ಅಡ್ಡ ಹಳ್ಳ ಈ) ಕಡ್ಡೀ ಹಳ್ಳ

4. ಮಾದೇವ ಶಿಶುಮಕ್ಕಳ ಸತ್ಯ ನೋಡಲು ಏನು ಮಾಡಬೇಕೆನ್ನುತ್ತಾನೆ?

ಅ) ಅವರಿಗೆ ಬಹುಮಾನ ಕೊಡಬೇಕು ಆ) ಅವರಿಗೆ ಸತ್ಕಾರ ಮಾಡಬೇಕು

ಇ) ಅವರನ್ನು ತ್ಯಜಿಸಬೇಕು ಈ) ಅವರನ್ನು ಪರೀಕ್ಷಿಸಬೇಕು

5. ಮಳೆಯನ್ನು ಕಳುಹಿಸು ಎಂದು ಮಾದೇವ ಇವನಿಗೆ ಹೇಳುತ್ತಾನೆ.

ಅ) ವಾಸುದೇವ ಆ) ದೇವೇಂದ್ರ ಇ) ಗುಡುಗಾಜಮ್ಮ ಈ) ಬೊಮ್ಮದೇವ

6. ಎಂತಹ ಸುಂಟರಗಾಳಿ ಕಳಿಸಲು ಮಾದೇವ ವಾಯುದೇವನಿಗೆ ಕೇಳುತ್ತಾನೆ?

ಅ) ಕಾಡೆಲ್ಲ ತಿರುಗುವಂತ ಆ) ಊರೆಲ್ಲ ತಿರುಗುವಂತ

ಇ) ಜಗತ್ತೆಲ್ಲ ಬುಗುರಿ ತಿರುಗುವಂತ ಈ) ನಾಡೆಲ್ಲ ತಿರುಗುವಂತ

7. ಈ ಕೆಂಡಗಣ್ಣಯ್ನ ಮಾತೀಗೆ

ನೀವುತ್ರ ಹೇಳಿರೋ ಏನ್ರಪ್ಪ

ಒಪ್ಪುಕೊಂಡೋ ಮಾದೇವ

ನೀವೊಪ್ಪುದಂಗೆ ಮಾಡುತೀವಿ

ಈ ಸಾಲುಗಳಲ್ಲಿ ಬರುವ ಕೆಂಡಗಣ್ಣಯ್ಯ ಮತ್ತು ಅವನ ಮಾತಿಗೆ ಒಪ್ಪಿದವರು ಕ್ರಮವಾಗಿ ಯಾರು?

ಅ) ವಾಸುದೇವ – ದೇವತೆಗಳು ಆ) ಮಾದೇವ – ದೇವತೆಗಳು

ಇ) ಶಿವ – ದೇವತೆಗಳು ಈ) ಬೇಡರ ಕನ್ನಯ್ಯ – ದೇವತೆಗಳು

8. ಮಾದೇವ ಮಳೆ, ಗಾಳಿ, ಗುಡುಗು ಮತ್ತು ಸಿಡಿಲುಗಳನ್ನು ಕಳಿಸಲು ಕ್ರಮವಾಗಿ ಇವರುಗಳಿಗೆ ಹೇಳಿದ.

ಅ) ದೇವೇಂದ್ರ, ಬೊಮ್ಮದೇವ, ವಾಸುದೇವ, ಗುಡುಗಾಜಮ್ಮ

ಆ) ದೇವೇಂದ್ರ, ವಾಸುದೇವ, ಬೊಮ್ಮದೇವ, ಗುಡುಗಾಜಮ್ಮ

ಇ) ದೇವೇಂದ್ರ, ವಾಸುದೇವ, ಗುಡುಗಾಜಮ್ಮ, ಬೊಮ್ಮದೇವ

ಈ) ದೇವೇಂದ್ರ, ಗುಡುಗಾಜಮ್ಮ, ವಾಸುದೇವ, ಬೊಮ್ಮದೇವ

9. ಜೋರು ಮಳೆಯಲ್ಲಿ ನೀರ ಹನಿಗಳು ಹೇಗಿದ್ದವು?

ಅ) ಚೆಂಡಿನ ಗಾತ್ರ ಆ) ಕಾಯಿಯ ಗಾತ್ರ ಇ) ಹೆಬ್ಬೆಟ್ಟಿನ ಗಾತ್ರ ಈ) ನಿಂಬೆಯ ಗಾತ್ರ

10. ಗಂಗೆ ಸುರಿಯುವ ರಭಸ ಹೀಗಿತ್ತು.

ಅ) ಊರು ಕಾಡು ಒಂದಾದಂತೆ ಆ) ಭೂಮಿ ಆಕಾಶ ಒಂದಾದಂತೆ

ಇ) ಹಳ್ಳ ಕೊಳ್ಳ ಒಂದಾದಂತೆ ಈ) ಕಾಡು ಮೇಡು ಒಂದಾದಂತೆ

11. ಗಂಗಮ್ಮ ಏನನ್ನು ಹೊತ್ತುಕೊಂಡು ಹೋದಳು?

ಅ) ಆನೆ ಹಿಂಡನ್ನು ಆ) ಮದ್ದಾನೆ ಹಿಂಡನ್ನು ಇ) ಮದ್ದಾನೆಯನ್ನು ಈ) ಆನೆಯನ್ನು

12. ನೀರಿನ ಸುಳಿಗೆ ಸಿಕ್ಕಿ ಗರಗರನೆ ತಿರುಗಿದ್ದು ಯಾರು?

ಅ) ಕಾರಯ್ಯ  ಆ) ಬಿಲ್ಲಯ್ಯ  ಇ) ಮಾದೇವ  ಈ) ಬ್ಯಾಡರ ಕನ್ನಯ್ಯ

13. ಮಾದೇವ ಯಾವುದಕ್ಕೆ ಒಲಿದನು?

ಅ) ಸಿಸುಮಕ್ಕಳ ಸ್ನೇಹಕ್ಕೆ  ಆ) ಸಿಸುಮಕ್ಕಳ ವಿನಯಕ್ಕೆ

ಇ) ಸಿಸುಮಕ್ಕಳ ಭಯಕ್ಕೆ  ಈ) ಸಿಸುಮಕ್ಕಳ ಪ್ರೇಮಕ್ಕೆ

14. ನಂಬಿದವರ ಮನದಲ್ಲಿ ಮಾದೇವ ಹೀಗಿರುತ್ತಾನೆ.

ಅ) ಅಸ್ಥಿರವಾಗಿ  ಆ) ಸ್ಥಿರವಾಗಿ  ಇ) ತುಂಬಿ ತುಳುಕಾಡುತ  ಈ) ಚಂಚಲವಾಗಿ

**II. ಎರಡು ಮೂರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ಎರಡು ಅಂಕ)**

**1**. ಮಾದೇವನ ಶಿಶುಮಕ್ಕಳ ಹೆಸರೇನು?

2. ಸಿಡಿಲು ಗುಡುಗುಗಳನ್ನು ಕಳುಹಿಸು ಎಂದು ಮಾದೇವ ಯಾರನ್ನು ಕೇಳುತ್ತಾನೆ?

3. ಮಳೆಯನ್ನು ನೋಡಿ ಕನ್ನಯ್ಯ ತನ್ನೊಳಗೆ ಏನೆಂದುಕೊಳ್ಳುತ್ತಾನೆ?

4. ಶಿಶುಮಕ್ಕಳು ಬಾಯಿ ಬಾಯಿ ಬಡಿದುಕೊಳ್ಳುವುದೇಕೆ?

5. ಬಲಿಯ ಕಲ್ಲನ್ನು ಕನ್ನಯ್ಯ ಬಲವಾಗಿ ಹಿಡಿದುಕೊಳ್ಳುವುದೇಕೆ?

6. ಶಿಶುಮಕ್ಕಳು ತಾವು ಸತ್ತರೂ ಚಿಂತಿಲ್ಲ ಎನ್ನಲು ಕಾರಣವೇನು?

7. ಮಾದೇವ ತನ್ನ ಶಿಶುಮಕ್ಕಳಿಗೆ ಏನೇನು ನೀಡಿ ಸಲಹಿದನು?

8. ಶಿಶುಮಕ್ಕಳ ಪ್ರೇಮಕ್ಕೆ ಮಾದಪ್ಪ ಹೇಗೆ ಬಂದನು?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

**1**. ಮಾಯಾದ ಮಳೆಯ ಕಳುಗಪ್ಪ

2. ನೀವೊಪ್ಪುದಂಗೆ ಮಾಡುತೀವಿ

3. ಒನೊನ್ ಚಂಡುನ ಗಾತ್ರದ ಹನಿಗಳು

4. ನೀನಿಂಥ ಬಂಧಾನ ಕೊಟ್ಯಪ್ಪ

5. ಸತ್ಯವುಳ್ಳ ಬ್ಯಾಡ್ರ ಕನ್ನಯ್ಯ

6. ಕಣ್ಣಲ್ಲಿ ನೀರ ಕೆಡುಗಿದರು

7. ಹೆತ್ತವ್ವನಂಗೆ ಸಲುವೀದೆ

8. ಗುಡಿಗೆ ಬಂದಾರು ಮಾದೇವ

**IV. ಐದು –ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

**1**. ಮಾದೇವ ತನ್ನ ಶಿಶುಮಕ್ಕಳನ್ನು ಪರೀಕ್ಷಿಸಲು ಕಾರಣಗಳೇನು?

**2**. ಮಾದೇವ ತನ್ನ ಶಿಶುಮಕ್ಕಳ ಪರೀಕ್ಷಿಸಲು ಯಾರ್ಯಾರ ಸಹಕಾರವನ್ನು ಹೇಗೆ ಪಡೆದನು?

3. ಮಳೆ ಉಂಟು ಮಾಡಿದ ಪರಿಣಾಮಗಳನ್ನು ವಿವರಿಸಿ.

4. ಮಳೆಯಲ್ಲಿ ಸಿಲುಕಿದ ಮಾದೇವನನ್ನು ಶಿಷ್ಯರು ಹೇಗೆ ರಕ್ಷಿಸಿದರು?

5. ಮಾದೇವ ತನ್ನ ಶಿಷ್ಯರನ್ನು ಹೇಗೆ ಸಲಹಿದನು? ವಿಶ್ಲೇಷಿಸಿ.

*****

# 7. ಅಖಂಡ ಕರ್ಣಾಟಕ: – ಕುವೆಂಪು

**I.** **ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಅಖಂಡ ಕರ್ನಾಟಕವನ್ನು ಹರಸುತ್ತಿರುವವರು ಯಾರು?

ಅ) ನೆಹರೂ ಆ) ಗಾಂಧಿ ಇ) ನೃಪತುಂಗ ಈ) ಪಂಪ

2. ಇಂದು ಬಂದು ನಾಳೆ ಹೋಗುವುದು ಯಾವುದು?

ಅ) ದೇವರೇ ರಚಿಸಿದ ಸಚಿವ ಮಂಡಲ ಆ) ರಾಜಕಾರಣಿಗಳು ರಚಿಸಿದ ಸಚಿವ ಮಂಡಲ

ಇ) ನೃಪತುಂಗ ರಚಿಸಿದ ಸಚಿವ ಮಂಡಲ ಈ) ಕನ್ನಡಾಂಬೆ ರಚಿಸಿದ ಸಚಿವ ಮಂಡಲ

3. ಸಿರಿಗನ್ನಡವನ್ನು ಇವರಿಗೆ ಹೋಲಿಸಲಾಗಿದೆ?

ಅ) ಲಕ್ಷ್ಮಿ ಆ) ಸರಸ್ವತಿ ಇ) ಚಾಮುಂಡಿ ಈ) ಅಂಬಾ ಭವಾನಿ

4. ಅಖಂಡ ಕರ್ನಾಟಕದ ಚಕ್ರವರ್ತಿ

ಅ) ರನ್ನ ಆ) ನಾಗವರ್ಮ ಇ) ನೃಪತುಂಗ ಈ) ಪಂಪ

5. ಇವನು ಅಖಂಡ ಕರ್ನಾಟಕದ ಶಾಶ್ವತ ಮುಖ್ಯಮಂತ್ರಿ

ಅ) ಬಸವೇಶ್ವರ ಆ) ನಾರಣಪ್ಪ ಇ) ರಾಘವಾಂಕ ಈ) ಪಂಪ

6. ಸರಸ್ವತಿಯು ಯಾವ ಸಂಸ್ಕೃತಿಯನ್ನು ಮೆರೆಯಲು ಕರ್ನಾಟಕವನ್ನು ರಚಿಸಿದ್ದಾಳೆ?

ಅ) ಅಭೌತ ಸಂಸ್ಕೃತಿ ಆ) ಆತ್ಮ ಸಂಸ್ಕೃತಿ ಇ) ಭೌತ ಸಂಸ್ಕೃತಿ ಈ) ಅನಾತ್ಮ ಸಂಸ್ಕೃತಿ

7. ಕರ್ನಾಟಕವು ಯಾರ ಹೃದಯದಲ್ಲಿ ಹೊತ್ತಿರುವ ದೀಪವಾಗಿದೆ?

ಅ) ಸಂತರು ಆ) ಶರಣರು ಇ) ಮುನಿಗಳು ಈ) ಋಷಿಗಳು

8. ಕರ್ನಾಟಕ ಎಂಬುದೇನು ಹೆಸರೆ ಬರಿಯ ಮಣ್ಣಿಗೆ? ಎಂದು ಹೇಳುವ ಕವಿ. ಅದನ್ನು ಈ ಕ್ರಮದಲ್ಲಿ ವರ್ಣಿಸಿದ್ದಾರೆ.

ಅ) ಮಂತ್ರ ಕಣಾ, ಶಕ್ತಿ ಕಣಾ, ದೇವಿ ಕಣಾ, ತಾಯಿ ಕಣಾ

ಆ) ಶಕ್ತಿ ಕಣಾ,ಮಂತ್ರ ಕಣಾ, ದೇವಿ ಕಣಾ, ತಾಯಿ ಕಣಾ

ಇ)ಮಂತ್ರ ಕಣಾ, ಶಕ್ತಿ ಕಣಾ, ತಾಯಿ ಕಣಾ, ದೇವಿ ಕಣಾ

ಈ) ದೇವಿ ಕಣಾ, ಮಂತ್ರ ಕಣಾ, ಶಕ್ತಿ ಕಣಾ, ತಾಯಿ ಕಣಾ

**II.** **ಎರಡು ಮೂರು ವಾಕ್ಯಗಳಲ್ಲಿ ಉತ್ತರ ಬಯಸುವ ಪ್ರಶ್ನೆಗಳು. (ಎರಡು ಅಂಕ)**

1. ಅಖಂಡ ಕರ್ನಾಟಕ ಬೂಟಾಟದ ರಾಜಕೀಯ ನಾಟಕವಲ್ಲವೇಕೆ?
2. ಸರಸ್ವತಿಯ ಸಚಿವ ಮಂಡಲದ ಸದಸ್ಯರು ಯಾರು?
3. ಪರಮಾತ್ಮನ ಚರಣದೀಪ್ತಿ ಎಲ್ಲಿ ಮತ್ತು ಹೇಗೆ ಉರಿಯಬೇಕೆಂದು ಕವಿ ಹೇಳುತ್ತಾರೆ?
4. ಮೆಳ್ಳೆಗಣ್ಣನಿಗೆ ಕವಿ ಕೇಳುವ ಪ್ರಶ್ನೆಗಳು ಯಾವುವು?

**III.** **ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಅಲ್ತೊ ನಮ್ಮ ಕೂಗಾಟದ ರಾಜಕೀಯ ನಾಟಕ.
2. ಇಂದು ಬಂದು ನಾಳೆ ಸಂದು ಹೋಹ ಸಚಿವ ಮಂಡಲ.
3. ನೃಪತುಂಗನೆ ಚಕ್ರವರ್ತಿ ಪಂಪನಲ್ಲಿ ಮುಖ್ಯಮಂತ್ರಿ
4. ಪಕ್ಷ ಜಾತಿ ಕಲಹಕಲ್ತೊ

5. ಮಂತ್ರ ಕಣಾ ಶಕ್ತಿ ಕಣಾ

**IV.** **ಐದು –ಆರು ವಾಕ್ಯಗಳಲ್ಲಿ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಕುವೆಂಪು ಅವರು ಕೂಗಾಟದ ರಾಜಕೀಯ ನಾಟಕ ಎಂದು ಹೇಳಿರುವ ಹಿನ್ನೆಲೆ ಏನು?
2. ಸರಸ್ವತಿಯ ಸಚಿವ ಮಂಡಲವನ್ನು ಕುರಿತು ಬರೆಯಿರಿ.
3. ಅಖಂಡ ಕರ್ನಾಟಕವು ಬರೀ ರಾಜಕೀಯ ನಾಟಕವಲ್ಲ ಏಕೆ?
4. ರಾಜಕೀಯ ಶಕ್ತಿಯೆ ಮೇಳೈಸುತ್ತಿರುವ ಇಂದಿನ ಸಂದರ್ಭದಲ್ಲಿ ನಾಡನ್ನು ಒಂದು ಸಾಂಸ್ಕೃತಿಕ ಅಸ್ತಿತ್ವವಾಗಿ ಕಲ್ಪಿಸಲು ಈ ಕವನ ಹೇಗೆ ಪೂರಕವಾಗಿದೆ?
5. ಕರ್ನಾಟಕ ಎಂಬುದು ಬರೀ ಮಣ್ಣಿಗೆ ಹೆಸರಲ್ಲ ಎಂಬುದನ್ನು ಕವಿ ಹೇಗೆ ಹೇಳಿದ್ದಾರೆ?

******

# 8. ಎಂದಿಗೆ – ಬಿ.ಸಿ ರಾಮಚಂದ್ರ ಶರ್ಮ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಹುಟ್ಟಿನೊಂದಿಗೆ ಅಂಟಿ ಬಂದಿರುವ ಇದನ್ನು ಕಳೆಯಬೇಕು.

ಅ) ಚಿತ್ತದಾಸ್ಯ ಆ) ಅರ್ಥದಾಸ್ಯ ಇ)ಸಾಂಸ್ಕೃತಿಕದಾಸ್ಯ ಈ) ಬೌದ್ಧಿಕದಾಸ್ಯ

2. ದವಡೆ ಇದರ ಸಲುವಾಗಿ ದಣಿದಿದೆ.

ಅ) ಕನವರಿಸಿ ಆ) ಮೆಲುಕು ಹಾಕಿ ಇ) ವಯಸ್ಸಾಗಿ ಈ) ಹಲ್ಲು ಉಜ್ಜದೆ

3. ನಾಡು ಇದಕ್ಕೆ ತಾಳ ಹೊಡೆದಿದೆ.

ಅ) ಉನ್ಮತ್ತ ರೋಷ ಆ) ನಿತ್ಯ ರುದ್ರ ಇ) ಉನ್ಮತ್ತ ನಾಟ್ಯ ಈ) ನೃತ್ಯ ಹೃದಯ

4. ಕಡಲನ್ನು ಕಡೆದಾಗ ಇದು ಬಂದಿತು.

ಅ) ಅಮೃತ ಆ) ಹಾಲು ಇ) ಕಲ್ಪವೃಕ್ಷ ಈ) ವಿಷ

5. ನಾಡಿಗೆ ಇವರ ಕಾಟ ಕೊನೆಗೊಂಡಿದೆ.

ಅ) ಕಡಲುಗಳ್ಳರು ಆ) ಒಡಲುಗಳ್ಳರು ಇ) ರಕ್ಕಸರು ಈ) ರೈತ ಮಕ್ಕಳು

6. ಇವರು ಕ್ಷಾತ್ರವಧೆ ಮಾಡಿದವರು.

ಅ) ರಾಮಚಂದ್ರ ಆ) ಪರಶುರಾಮ ಇ)ಬಲರಾಮ ಈ) ಕೊದಂಡರಾಮ

7. ಇರುಳ ಬಸಿರ ಬಗೆದು ಬರಬೇಕಾಗಿರುವುದು ಯಾವುದು?

ಅ) ಸಂಧ್ಯಾರಾಗ ಆ) ಉದಯರಾಗ ಇ) ಅನುರಾಗ ಈ) ಹೃದಯರಾಗ

**II. ಎರಡು ಮೂರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ಎರಡು ಅಂಕ)**

1. ಚಿತ್ತದಾಸ್ಯ ಕಳೆಯಬೇಕಾಗಿರುವುದು ಯಾರು ಯಾರಿಗೆ?
2. ನಾಡ ಮಂದಿ ಯಾವುದರ ಬಲ ಹಾಗೂ ಮಹಿಮೆಯಿಂದ ಬಿಡುಗಡೆಯಾಗಿದೆ?
3. ನಾಡಿನ ಬಿಡುಗಡೆಯಲ್ಲಿ ಯಾವುದಕ್ಕೆ ಅಡೆತಡೆಗಳು ಇಲ್ಲವಾಗಿವೆ?
4. ನಾಡಿನ ಹೊರಗಿನ ಮತ್ತು ಒಳಗಿನ ಕಳ್ಳರು ಯಾರು?
5. ರಾಕ್ಷಸಗಣ ಹತ್ಯೆಗೆ ಜನತೆ ಹೇಗೆ ಹೆಜ್ಜೆ ಇಡಬೇಕು?
6. ಕ್ರಾಂತಿಭಾನಿನ ಹೊಂಬೆಳಕು ಎಲ್ಲೆಲ್ಲಿ ಚೆಲ್ಲಬೇಕು?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಹುಟ್ಟಿಗಂಟಿ ಬಂದ ಚಿತ್ತದಾಸ್ಯ ಕಳೆವುದೆಂದಿಗೆ
2. ಅಳಿದ ಸಿರಿಯ ಅಣಕವಾಡು ಒಂದೆ ಸಮನೆ ನಡೆದಿದೆ
3. ಅಂತು ಬಂದಿತು ಬಂದೆ ಬಂದಿತು ಎಂಥ ಎಂಥಾ ಬಿಡುಗಡೆ
4. ಒಡಲುಗಳ್ಳರು ಇನ್ನೂ ಇಲ್ಲೇ ಇಹರೊ
5. ಕ್ರಾಂತಿಭಾನು ಹೊಳೆದು ಹೊಂಬೆಳಕ ಚೆಲ್ವುದೆಂದಿಗೆ

**IV. ಐದು –ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ನಾಡಜನರ ಗತವೈಭವದ ಕನಸನ್ನು ಕವಿ ಹೇಗೆ ವಿಡಂಬಿಸಿದ್ದಾರೆ? ವಿವರಿಸಿ
2. ಒಡಲಗಳ್ಳರು ನಾಡನ್ನು ಹೇಗೆ ಸುಲುಗೆ ಮಾಡುತ್ತಿದ್ದಾರೆ?

3. ನಾಡಜನರ ದಾಸ್ಯಮನೋಭಾವ ಹಾಗೂ ನಿಷ್ಕ್ರಿಯತೆಯ ಬಗ್ಗೆ ಕವಿಯ ಪ್ರತಿಕ್ರಿಯೆಯೇನು?
4. ಸ್ವಾಭಿಮಾನದ ನಾಡನ್ನು ಕಟ್ಟುವಲ್ಲಿ ಕವಿಯು ಹೊಂದಿರುವ ಆಶಯಗಳನ್ನು ವಿವರಿಸಿ.

******

# 9. ಮಗು ಮತ್ತು ಹಣ್ಣುಗಳು – ಎಚ್.ಎಸ್. ಶಿವಪ್ರಕಾಶ್

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

**1**. ಮಗು ಇದರ ಮುಂದೆ ಕಣ್ಣನ್ನು ಅರಳಿಸುತ್ತದೆ.
ಅ) ಹಣ್ಣಿನಂಗಡಿ ಆ) ಗೊಂಬೆಯಂಗಡಿ ಇ) ಗಿರವಿಯಂಗಡಿ ಈ) ಗುಜರಿಯಂಗಡಿ
2. ತಿರುವಿನಲ್ಲಿ ಆವತರಿಸುವ ವಾಹನ ಯಾವುದು?
ಅ) ಕಪ್ಪು ಬಸ್ಸು ಆ) ಕಪ್ಪು ಲಾರಿ ಇ) ಕಪ್ಪು ಜೀಪು ಈ) ಕಪ್ಪು ಕಾರು
3. ಮಗುವು ಇದರ ಹಾಗೆ ಬಾಗಬೇಕು.
ಅ) ಮಾವಿನಹಣ್ಣು ಆ) ಕಿತ್ತಲೆಹಣ್ಣು ಇ) ಬಾಳೆಹಣ್ಣು ಈ) ಸಪೋಟಹಣ್ಣು
4. ಈ ಹಣ್ಣಿನಂತೆ ಮಗು ಕೊಬ್ಬಬಾರದು.
ಅ) ಕಲ್ಲಂಗಡಿ ಆ) ಮೋಸಂಬಿ ಇ) ನಿಂಬೆ ಈ) ಚಕೋತ
5. ಅನ್ಯರ ಕಣ್ಣಿಗೆ ಯಾವ ಹಣ್ಣಿನಂತೆ ಮಗು ಅಪರೂಪವಾಗಬೇಕು?

ಅ) ಅಂಜೂರ ಆ) ಕಿವಿ ಇ) ದಾಳಿಂಬೆ ಈ) ಅನಾನಸ್

6. ಆಯುಷ್ಯದ ಚಪ್ಪರಕ್ಕೆ ಮಗು ಹೇಗೆ ಹಬ್ಬಿಕೊಳ್ಳಬೇಕು?

ಅ) ಮಲ್ಲಿಗೆಬಳ್ಳಿ ಆ) ದ್ರಾಕ್ಷಿಬಳ್ಳಿ ಇ) ಖರ್ಜೂರಬಳ್ಳಿ ಈ) ಸಂಪಿಗೆಬಳ್ಳಿ

7. ಬೆಲೆಯ ರಾಕೆಟ್ಟು ಯಾನದಲ್ಲಿ ಹೊರಟ ಹಣ್ಣು ಯಾವುದು?

ಅ) ಪಪ್ಪಾಯಿ ಆ) ರಸಬಾಳೆ ಇ) ಸೇಬು ಈ) ಸೀತಾಫಲ

8. ಇದು ಎಲ್ಲರಿಗೂ ದಕ್ಕುವ ಹಣ್ಣು

ಅ) ಕಾರೆಹಣ್ಣು ಆ) ಹತ್ತಿಹಣ್ಣು ಇ) ಸೀಬೆಹಣ್ಣು ಈ) ಎಲಚಿಹಣ್ಣು

9. ಮಗುವಿಗೆ ಹಣ್ಣು ತೊಡಿಸಲು ಬರುವವರು ಯಾರು?

ಅ) ಮಾಟಗಾತಿ ಆ) ತೋಟಗಾತಿ ಇ) ಕಸುಬುಗಾತಿ ಈ) ನೃತ್ಯಗಾತಿ

**II. ಎರಡು ಮೂರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ಎರಡು ಅಂಕ)**

1. ಮಗು ಬದುಕಿನಲ್ಲಿ ಯಾವ ಯಾವ ತೊಂದರೆಗಳಿಗೆ ಒಳಗಾಗಬಾರದು?
2. ಮಗು ಹಣ್ಣಿನಂಗಡಿಯಂತಾಗಬೇಕಾದುದು ಎಲ್ಲಿ?
3. ಮಗುವಿನಲ್ಲಿ ಸಮನಿಸಬೇಕಾದ ಗುಣಗಳು ಯಾವುವು?
4. ಅರಳಿಸಿದ ದಾಳಿಂಬೆ ಯಾವ ರೀತಿ ಕಾಣುತ್ತದೆ?
5. ಮಗುವಿಗೆ ಹಣ್ಣು ತೊಡಿಸಲು ಯಾರು ಮತ್ತು ಹೇಗೆ ಬರುತ್ತಾರೆ?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಕಾಯಿಯಲ್ಲೇ ನಿನ್ನ ಕೆಡವದಿರಲಿ
2. ಹಣ್ಣಿನಂಗಡಿಯಾಗು ನೀನೂನು
3. ಸರಿಗಾತ್ರವಾಗಿ ಸಮನಿಸಲಿ ನಿನ್ನತನ
4. ಅಂಜೂರದಂತೆ ಅಪರೂಪವಾಗು
5. ಎಲ್ಲರಿಗೂ ದಕ್ಕುವ ಎಲಚಿಯಾಗು
6. ತಾನೇ ಮಣ್ಣಾಗುತ್ತ ಬರಲು ತೋಟಗಾತಿ

**IV. ಐದು –ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

**1**. ಮಗು ಹಣ್ಣುಗಳಿಂದ ಕಲಿಯಬೇಕಾದ ಗುಣಗಳಾವುವು? ವಿವರಿಸಿ.

**2**. ಮಗು ವ್ಯಕ್ತಿತ್ವಕ್ಕೂ ಹಾಗೂ ಹಣ್ಣುಗಳಿಗೂ ಕವಿ ಹೇಗೆ ಸಂಬಂಧಗಳನ್ನು ಕಲ್ಪಿಸಿದ್ದಾನೆ? ವಿವರಿಸಿ.

******

# 10. ನಾ ಬರಿ ಭ್ರೂಣವಲ್ಲ – ಮಾಲತಿ ಪಟ್ಟಣಶೆಟ್ಟಿ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಅವ್ವನ ದೇಹದ ಮುಗುಳು ಯಾರು?

ಅ) ಮಗಳು ಆ) ಮಗ ಇ) ಕನಸು ಈ) ಭ್ರೂಣ

2. ಭ್ರೂಣಾವಸ್ಥೆಯಲ್ಲಿರುವ ಮಗುವಿಗೆ ಇದು ವಿಷವಾಗಿದೆ.

ಅ) ಗುಳಿಗೆ ಆ) ಔಷಧಿ ಇ) ಪಾಶ ಈ) ನಶೆ

3. ಭ್ರೂಣಾವಸ್ಥೆಯ ಮಗುವನ್ನು ಬೆನ್ನಟ್ಟಿರುವುದು ಯಾವುದು?

ಅ) ಕಪ್ಪುಕಣ್ಣು ಆ) ಕರಿಯನಾಲಿಗೆ ಇ) ಕರಿಯುಗುರು ಈ) ಕರಿಯಕೈ

4. ಒಡಲೊಳಗಿನ ಮಗುವು ತನ್ನ ರಕ್ತವನ್ನು ಹೀಗೆ ಭಾವಿಸುತ್ತದೆ.

ಅ) ನೀಲಾಗಸ ಆ) ಮೃದು ಸ್ಪರ್ಶ ಇ) ಪರಿಶುದ್ಧ ರಕ್ತ ಈ) ಪ್ರೀತಿ ರಸ

5. ನಿನ್ನ ಮೈಗಂಧದಿಂದ
ಕಿತ್ತುಕೊಂಡರೆ ನಾ ಸತ್ತೆನವ್ವಾ
ಚೆಲ್ಲಬೇಕೆ ಉಡಿಯ ಮುತ್ತು..... ಈ ಪದ್ಯದಲ್ಲಿ ಉಡಿಯ ಮುತ್ತು ಎಂದರೆ.....

ಅ) ಮಗಳು ಆ) ಮುಗುಳು ಇ) ಆಭರಣ ಈ) ಮುತ್ತು ರತ್ನ

6. ತನ್ನನ್ನು ಉಳಿಸಿದರೆ ತಾಯಿಗೆ ಏನು ತರವೆನೆಂದು ಮಗುವು ಹೇಳುತ್ತದೆ?

ಅ) ಹೂವು ಆ) ಕೀರ್ತಿ ಇ) ವರ ಈ) ಉಡುಗೊರೆ

**II. ಎರಡು ಮೂರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ಎರಡು ಅಂಕ)**

1. ಹೊಟ್ಟೆಯಲ್ಲಿರುವ ಮಗುವು ತನ್ನ ಉಸಿರಿಗೆ ಯಾವುದು ಪಾಶವಾಗಿದೆಯೆಂದು ಭಾವಿಸುತ್ತದೆ?
2. ತಾನು ಬದುಕಿನಲ್ಲಿ ಇನ್ನೂ ಕಾಣಬೇಕಾಗಿರುವುದು ಏನೆಂದು ಒಡಲೊಳಗಿನ ಮಗುವು ಹೇಳುತ್ತದೆ?
3. ಭ್ರೂಣಾವಸ್ಥೆಯ ಮಗುವು ಏಕೆ ಗಾಬರಿಗೊಂಡಿದೆ?
4. ತನ್ನನ್ನು ಏಕೆ ಕಿತ್ತುಕೊಳ್ಳಬಾರದೆಂದು ಹೊಟ್ಟೆಯೊಳಗಿನ ಮಗುವು ಹೇಳುತ್ತಿದೆ?
5. ಹೊಟ್ಟೆಯೊಳಗಿನ ಮಗುವು ಯಾವ ವರವನ್ನು ಬೇಡುತ್ತಿದೆ?

**III. ಐದು –ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಹೆಣ್ಣು ಭ್ರೂಣಹತ್ಯೆಯನ್ನು ಈ ಕವಿತೆ ಹೇಗೆ ವಿರೋಧಿಸುತ್ತದೆ?
2. 'ನಾ ಬರಿ ಭ್ರೂಣವಲ್ಲ' ಎಂದು ಹೊಟ್ಟೆಯೊಳಗಿನ ಮಗುವು ಹೇಳಲು ಕಾರಣವೇನು?
3. ಹೆಣ್ಣಿಗೂ ಸಮಾನವಾಗಿ ಬದುಕುವ ಹಕ್ಕಿದೆ ಎಂಬ ಆಶಯವು ಕವಿತೆಯಲ್ಲಿ ಹೇಗೆ ಧ್ವನಿತವಾಗಿದೆ?
4. ಈ ಕವಿತೆಯಲ್ಲಿ ಸ್ತ್ರೀ ಸಂವೇದನೆ ಹೇಗೆ ವ್ಯಕ್ತವಾಗಿದೆ?

******

# 11. ಮತ್ತೆ ಸೂರ್ಯ ಬರುತ್ತಾನೆ – ಲೋಕೇಶ ಅಗಸನಕಟ್ಟೆ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಮಲೆಯ ಮಾಲೆ ಯಾವುದು?

ಅ) ಸಸ್ಯ ಶಾಮಲೆ ಆ) ಕಣಿವೆ ಕಾಡು ಇ) ಶ್ರೀಗಂಧ ತರು ಈ) ಹಸಿರು ಪರ್ವತ

2. ಶ್ರೀಗಂಧದ ತರುಗಳು ಏನಾದವು?

ಅ) ಕಡಿದುಳಿದ ಕಾಂಡ ಆ) ಚಿತಾಭಸ್ಮ ಇ) ಮುಗಿಲೆತ್ತರ ನಿಂತವು ಈ) ಯಜ್ಞದಗ್ನಿ

3. ಅಣುಬಾಂಬುಗಳಿಂದ ನೆಲ ಈ ರೀತಿಯಾಗಿದೆ.

ಅ) ಬಿರುಕು ಆ) ಪ್ರಪಾತ ಇ) ನಾಶ ಈ) ಕಪ್ಪು ಕೈ

4. ನಖಗಳು ಇದನ್ನು ಕಬಳಿಸಲು ಬಂದಿವೆ.

ಅ) ಕರುಳು ಆ) ಹೃದಯ ಇ)ಕಾರ್ನಿಯ ಈ) ಬಳ್ಳಿ

5. ಇದು ಕರುಳ ಬಳ್ಳಿಗೆ ತೊಡರಿದ ಹುಳು.

ಅ) ಅರ್ನಿಯಾ ಆ) ಕ್ಯಾನ್ಸರ್ ಇ) ಪಾರ್ಥೇನಿಯಂ ಈ) ಹೃದಯಾಘಾತ

6. ಕೋಟಿ ಕಂಠದಲ್ಲಿ ಹಾಡುತ್ತಿರುವವು ಯಾವು?

ಅ) ಹಕ್ಕಿಗಳು ಆ) ಸಸ್ಯಗಳು ಇ) ಕಣಿವೆಗಳು ಈ) ಬೆಟ್ಟಗಳು

**II. ಎರಡು – ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ಚಿತಾಭಸ್ಮವಾದ ತರು ಯಾವುದು ಮತ್ತು ಎಲ್ಲಿ?
2. ಅಮಾಯಕರಿಗೆ ಕವಿ ನೀಡುವ ಆಶ್ವಾಸನೆ ಯಾವುದು?
3. ಜನರು ತತ್ತರಿಸಿರುವುದು ಯಾವುದಕ್ಕೆ?
4. ಹಕ್ಕಿಗಳು ತಮ್ಮ ಕಂಠಗಳಿಂದ ಏನೇನನ್ನು ಮಾರ್ದನಿಸಬೇಕಿದೆ?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಚಿತಾಭಸ್ಮವಾದ ಶ್ರೀಗಂಧದ ತರುಗಳೇ
2. ದಿಕ್ಕು ತಪ್ಪಿದ ಹಡಗು ಹಾಯಿಯೇ
3. ಗಂಟೆ ಜಾಗಟೆಗಳ ಸದ್ದಿನಲಿ ಕರಗಿದ ಸನ್ನಿಪಾತ ಸಮೂಹವೇ
4. ಕರುಳ ಬಳ್ಳಿಗೆ ತೊಡರಿದ ಕ್ಯಾನ್ಸರ್ ಹುಳುವೇ
5. ಕಾಡು ಕಣಿವೆ ಬೆಟ್ಟಗಳು ಮಾರ್ದನಿಸಲಿ

**IV. ಐದು –ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಕವಿಯ ಆತಂಕಕ್ಕೆ ಕಾರಣವಾದ ಸನ್ನಿವೇಶಗಳು ಕವಿತೆಯಲ್ಲಿ ಹೇಗೆ ಮೂಡಿವೆ?

2. ವಿಶಾಲ ಸಾಗರದ ಕರಿ ನೀರೇ
ಅಮಾಯಕರನ್ನಾವರಿಸಿದ ಸರಳೇ
ದಿಕ್ಕು ತಪ್ಪಿದ ಹಡಗು ಹಾಯಿಯೇ
ಜೀಕು ಕಾಣದ ನೊಗಕೆ ಹೆಗಲು ಕೊಟ್ಟ ಎತ್ತೇ
ಯಾಕಿನ್ನು ಚಿಂತೆ

ಅ) ಸಾಗರದ ನೀರು ಏನಾಗಿದೆ? (1 ಅಂಕ)

ಆ) ದಿಕ್ಕು ತಪ್ಪಿರುವುದು ಯಾವುದು? (1 ಅಂಕ)

ಇ) ಈ ಪದ್ಯದ ಸಾರಾಂಶವನ್ನು ಬರೆಯಿರಿ (2 ಅಂಕ)

3. ಪ್ರಸ್ತುತ ಕಾಲದೊಂದಿಗೆ ಈ ಕವಿತೆ ಹೇಗೆ ಹೊಂದಿಕೊಳ್ಳುತ್ತದೆ? ವಿಮರ್ಶಿಸಿ.
4. ಮತ್ತೆ ಸೂರ್ಯ ಬರುತ್ತಾನೆ ಕವಿತೆಯ ಆಶಯವನ್ನು ಚರ್ಚಿಸಿ.

*****

# 12. ಸುನಾಮಿ ಹಾಡು – ಎಚ್. ಎಲ್. ಪುಷ್ಪ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಭೂಮಿಯೊಳಗಿನ ಯಾವ ತೆರೆಯು ಸರಿಯುತ್ತದೆ?

ಅ) ಜಲ ಆ) ಖನಿಜ ಇ) ಅನಿಲ ಈ) ವಾಯು

2. ಜಲದ ಕಣ್ಣು ತೆರೆದಾಗ ಇದು ಕುಸಿಯುವುದು.

ಅ) ಮೋಸ ಆ) ಮಣ್ಣು ಪದರ ಇ) ಮೊಸಳೆ ಈ) ಜಲಚರ

3. ಜಗಪ್ರಳಯ ಯಾವಾಗ ಸಂಭವಿಸುತ್ತದೆ?

ಅ) ಜೀವಚರಗಳು ಸಮಾಧಿಯೊಳಗೆ ಜಾರಿದಾಗ ಆ) ಸತ್ತವರ ಎಲ್ಲಾ ಸತ್ತೆ ಹೊರಬಿದ್ದಾಗ

ಇ) ಪಾಪದ ಕೊಡ ತುಂಬಿದಾಗ ಈ) ಕಡಲು ಕುದಿಯಲು ಮುಂದಾದಾಗ

4. ಇದು ಮಾಯವಾಗಿರುವ ದ್ವೀಪ.

ಅ) ಮೀನು ಆ) ಹಕ್ಕಿ ಇ) ನೀರು ಈ) ಹವಳ

5. ಇವು ಸಾಕ್ಷಿ ಇಲ್ಲದಂತೆ ಹಾರಿ ಹೋಗುತ್ತವೆ.

ಅ) ಗುಡಿ ಚರ್ಚು ಮಸೀದಿ ಆ) ಗುಡಿ ಚರ್ಚು ಬಸದಿ

ಇ) ಗುಡಿ ಚರ್ಚು ಸಮಾಧಿ ಈ) ಗುಡಿ ಚರ್ಚು ಸ್ತೂಪ

6. ನಕಾಶೆ ಹುಡುಕುತ್ತಿರುವವರು ಯಾರು?

ಅ) ಸಂಶೋಧನೆ ನಡೆಸುವವರು ಆ) ದೋಣಿ ನಾವಿಕರು

ಇ) ಪ್ರವಾಸಿತಾಣದ ಮಾರ್ಗದರ್ಶಕರು ಈ) ಉತ್ಖನನ ನಡೆಸುವವರು

**II. ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ಕವಿತೆಯಲ್ಲಿ ಜಗಪ್ರಳಯವನ್ನು ಹೇಗೆ ಕಲ್ಪಿಸಲಾಗಿದೆ?
2. ಅಬ್ಬರದ ಅಲೆಯೆದುರು ದನಿ ಕಳೆದುಕೊಂಡವುಗಳು ಯಾವುವು?
3. ಭೂಮಿ ಕಂಪಿಸಿದಾಗ ಏನಾಯಿತು?
4. ಕಾಗದದ ದೋಣಿಗಳಾಗಿ ತೇಲುತ್ತಿರುವುವು ಯಾವುವು?
5. ಮಂಗಳ, ಶುಕ್ರಗ್ರಹಗಳನ್ನು ಯಾಕೆ ಹುಡುಕಬೇಕು?
6. ಇತಿಹಾಸದ ಚಕ್ರ ಹೇಗೆ ಸುತ್ತುತ್ತದೆ?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಪಾಪದ ಕೊಡ ತುಂಬಿದ ಜಗಪ್ರಳಯ.
2. ಸತ್ತವರ ಎಲ್ಲ ಸತ್ತೆ ಹೊರಬೀಳುತ್ತಿದೆ.
3. ಗುಡಿ ಚರ್ಚು ಮಸೀದಿಗಳೆಲ್ಲ ಹಾರಿಹೋಗುತ್ತವೆ.
4. ಎಲ್ಲಿಂದ ಅಗೆಯಬೇಕೆಂದು ನಕಾಶೆ ಹುಡುಕುತ್ತಾರೆ.
5. ಅಣುಯುಗದಿಂದ ಶಿಲಾಯುಗಕ್ಕೆ.

**IV. ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಜಲಪ್ರಳಯದ ಪರಿಣಾಮಗಳನ್ನು ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ.
2. ಸಾವಿನಲ್ಲಿ ಎಲ್ಲರೂ ಸಮಾನರಾಗುವ ವಿಪರ್ಯಾಸವನ್ನು ಸುನಾಮಿಯ ಹಾಡು ಹೇಗೆ ಧ್ವನಿಸುತ್ತದೆ?
3. ಪ್ರಕೃತಿಯ ಸರ್ವಶಕ್ತಿಯ ಎದುರು ಮಾನವನ ಶಕ್ತಿ ಸಾಮರ್ಥ್ಯಗಳ ಮಿತಿಯನ್ನು ಕವಿತೆ ಹೇಗೆ ಸ್ಪಷ್ಟಪಡಿಸುತ್ತಿದೆ?

*******

# 13. ಹೊಲಿಗೆ ಯಂತ್ರದ ಅಮ್ಮಿ – ಆರಿಫ್‌ರಾಜಾ

**I.** ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)

**1.** ಅಮ್ಮಿ ಏನನ್ನು ಪಾಲು ಮಾಡಿದಂತೆ ಬಟ್ಟೆ ಕತ್ತರಿಸುತ್ತಾಳೆ?

ಅ) ರೊಟ್ಟಿ ಆ) ದೋಸೆ ಇ) ಚಪಾತಿ ಈ) ಪರೋಟ

2. ಚಕ್ರ ತಿರುಗಿಸಿದಂತೆ ಉರುಳುವುದು ಯಾವುದು?

ಅ) ಭೂಗೋಳ ಆ) ಇತಿಹಾಸ ಇ) ಪೆಡಲು ಈ) ರಾಟೆ

3. ಅಮ್ಮಿ ಯಾವಾಗಲೂ ಇದನ್ನು ಧರಿಸುವಳು.

ಅ) ಹಸಿರು ಸೀರೆ ಆ) ನೀಲಿ ಸೀರೆ ಇ) ಬಿಳಿ ಸೀರೆ ಈ) ಹಳದಿ ಸೀರೆ

4. ಅಮ್ಮಿ ಜಗತ್ತಿಗೆ ಎಂತಹ ಬಟ್ಟೆ ತೊಡಿಸುತ್ತಾಳೆ?

ಅ) ಕಡಲಿನಂತಹ ಆ) ಬಣ್ಣ ಬಣ್ಣದ ಇ) ಆಕಾಶದಂತಹ ಈ) ನಮೂನಮೂನೆಯ

5. ಅಮ್ಮಿ ಯಾವುದನ್ನು ಕಡಿದು ಹಾಕಲೆಂದು ಕತ್ತರಿ ಹಿಡಿದಿದ್ದಾಳೆ?

ಅ) ಚಿಂದಿಮನಸು ಆ) ಮುಖವಾಡ ಇ) ಧೂಮಕೇತು ಈ) ಲೋಕವಿಕಾರ

6. ಮಗುವಿನಂತೆ ಇವರನ್ನು ಸಾಕಿದಳು.

ಅ) ಗಂಡ ಆ) ಅಮ್ಮ ಇ) ಅತ್ತೆ ಈ) ಅಪ್ಪ

7. ಹೊಲಿಗೆ ಯಂತ್ರದ ಜೊತೆಗೆ ಅಮ್ಮಿ ಕಳೆದ ಕಾಲವೆಷ್ಟು?

ಅ) ಅರ್ಧ ಶತಮಾನ ಆ) ಒಂದು ಶತಮಾನ ಇ) ಕಾಲು ಶತಮಾನ ಈ) ಮುಕ್ಕಾಲು ಶತಮಾನ

**II.** ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)

1. ಕತ್ತರಿ ಮತ್ತು ಸೂಜಿಗಳ ಕೆಲಸ ಯಾವುದು?
2. ಅಮ್ಮಿಯನ್ನು ಸೃಷ್ಟಿಕರ್ತೆಯೆಂದು ಏಕೆ ಕರೆಯಲಾಗಿದೆ?
3. ಅಮ್ಮಿಯ ಬದುಕಿನಲ್ಲಿ ನಿರ್ಜೀವ ಬಟ್ಟೆಯ ಪ್ರವೇಶ ಹೇಗಾಯಿತು?
4. ದಿಕ್ಕು ದೆಸೆಯಿಲ್ಲದೆ ಅಲೆಯುತ್ತಿರುವುದು ಯಾವುದು?
5. ಹಾಸಿಗೆಯನ್ನು ಹೊಲಿದುಕೊಡುವಂತೆ ಅಮ್ಮಿಯನ್ನು ಕೇಳಲು ಕಾರಣವೇನು?
6. ಅಮ್ಮಿಯ ಪಾಲಿಗೆ ನಮಾಜ್ ಮತ್ತು ಈದ್ ಎಂದರೆ ಯವುದು?

**III.** ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)

1. ನಿರಾಕಾರಮಾನಕ್ಕೆ ಹೊಲಿಗೆ ಹಾಕಿ ರೂಪು ನೀಡುತ್ತಾಳೆ
2. ಚಿಂದಿ ಮನಸುಗಳನ್ನು ಜೋಡಿಸಲು ಸೂಜಿ ಇದೆ
3. ಅಮ್ಮಿ ಯಾವಾಗಲೂ ಧರಿಸುವುದು ಹಾಲುಬಿಳಿಸೀರೆ
4. ನಮಾಜ್ ಎಂದರೆ ಜುಮ್ಮಾ ಈದ್ ಎಂದರೆ ದೂದ್ ಖುರ್ಮಾ
5. ಕರುಳಕುಡಿಗಳೆಂದರೆ ಕನಸುಗಣ್ಣು

**IV.** ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)

1. ಅಮ್ಮಿಯ ಹೊಲಿಗೆಯ ಕೌಶಲ್ಯವು ಕವಿತೆಯಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ?
2. ಹೊಲಿಗೆ ಕಾಯಕದ ಮೂಲಕ ಮನೆ ಮತ್ತು ಲೋಕದ ಮಾನವನ್ನು ಅಮ್ಮಿ ಹೇಗೆ ಕಾಪಾಡಿದ್ದಾಳೆ?

3. ಹಾಸಿಗೆಯನ್ನು ಹೊಲಿದು ಕೊಡುವಂತೆ ಅಮ್ಮಿಯನ್ನು ಕೇಳಲು ಕಾರಣಗಳೇನು?
4. ಅಮ್ಮಿಯ ವ್ಯಕ್ತಿತ್ವ ಕವಿತೆಯಲ್ಲಿ ಒಡಮೂಡಿದ ಬಗೆಯನ್ನು ವಿವರಿಸಿ.

*****

## 14. ದೇವರಿಗೊಂದು ಅರ್ಜಿ – ಲಕ್ಕೂರು ಸಿ. ಆನಂದ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ತನ್ನನ್ನು ಕ್ಷಮಿಸುವಂತೆ ಕವಿ ಯಾರನ್ನು ಕೇಳುತ್ತಾನೆ?

ಅ) ದೇವರು ಆ) ಗುರು ಇ) ತಂದೆ ಈ) ತಾಯಿ

2. ಸಮಾಧಿಗಳು ಇವರನ್ನು ಬಚ್ಚಿಟ್ಟುಗೊಂಡಿವೆ.

ಅ) ಶವಗಳು ಆ) ಜೀವಂತ ವ್ಯಕ್ತಿಗಳು ಇ) ಎಚ್ಚೆತ್ತ ವ್ಯಕ್ತಿಗಳು ಈ) ನಗುವ ಚಂದಿರರು

3. ಬೊಗಸೆಯಲ್ಲಿ ಯಾರನ್ನು ಬಂಧಿಸಲು ಕವಿ ಬಯಸಿದ್ದಾನೆ?

ಅ) ದಿನಕರ ಆ) ದಾನವ ಇ) ಚಂದಿರ ಈ) ಮಾನವ

4. ಕವಿಯ ಗುಂಡಿಗೆಯನ್ನು ಹಿಂಡುತ್ತಿರುವುದು ಯಾವುದು?

ಅ) ನಮ್ಮದಲ್ಲದ ಯಾರದೊ ಸಮಾಧಿಗಳು ಮೃದುವಾಗಿ ಸವರುತ್ತಿರುವುದು.

ಆ) ಎಚ್ಚೆತ್ತ ಗುಲಾಬಿ ಯಾವ ಮತ? ಯಾವ ಕುಲ? ಎಂದು ಕೇಳುತ್ತಿರುವುದು.

ಇ) ಬೊಗಸೊಳಗಿನ ನೀರು ಬೆರಳ ಸಂದಿಯಲ್ಲಿ ಸೋರಿ ಹೋಗಿರುವುದು.

ಈ) ಅವರಿವರು ಉದಾಸೀನವಾಗಿ ಬಿಟ್ಟಂತಹ ಬಿಸಿಯುಸಿರು.

5. ಕವಿಯ ಬೆನ್ನಟ್ಟಿ ಮುಳ್ಳುಗಳಾಗಿ ಚುಚ್ಚುತ್ತಿರುವುದೇನು?

ಅ) ಬಂದೂಕು, ಬಾಂಬ್ ಎಂದು ಕೇಳಿಸುವುದು

ಆ) ಜೀವಂತ ವ್ಯಕ್ತಿತ್ವಗಳನ್ನು ಬಚ್ಚಿಟ್ಟುಗೊಂಡ ಗೋಡೆಗಳು

ಇ) ನಗುವ ಅಮೃತಶಿಲೆಯ ಸಮಾಧಿಗಳು

ಈ) ಮುಟ್ಟಿ ಮುಟ್ಟಿ ಅಪವಿತ್ರವಾಗುವುದು

**II. ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ಧರೆಯ ಮೇಲಿನ ನಡಿಗೆ ಹಾಗೂ ಕರೆಯುವ ಧ್ವನಿ ಕವಿಗೆ ಹೇಗೆ ಭಾಸವಾಗುತ್ತಿದೆ?
2. ನುಗುವ ಚಂದಿರ ಏಕೆ ಕೈಗಂಟಿಕೊಳ್ಳುತ್ತಿದ್ದಾನೆ.
3. ದಿಕ್ಕು ಬಂದ ಕಡೆಗೆ ನಡೆದ ಕವಿಗೆ ಆದ ಅನುಭವವೇನು?
4. ಕವಿಯನ್ನು ಚುಚ್ಚುತ್ತಿರುವುದು ಯಾವುದು? ಏಕೆ?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ನನ್ನ ಕೈಗುರುತನ್ನು ಅಪ್ಪಿಕೊಳ್ಳುತ್ತಿದೆ
2. ಯಾವ ಕುಲ? ಯಾವ ಮತ?
3. ನಗುವ ಚಂದಿರ ಕೈಗಂಟಿಕೊಳ್ಳುತ್ತಿದ್ದಾನೆ
4. ಮುಟ್ಟಿಸಿಕೊಳ್ಳದೆ ಪವಿತ್ರನಾಗಿರಬೇಕೆಂದುಕೊಂಡಿದ್ದೇನೆ

**IV. ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಜಗತ್ತು ತನ್ನನ್ನು ಕೀಳಾಗಿ ಕಂಡು ನಿರಾಕರಿಸುತ್ತಿರುವ ಬಗೆಯನ್ನು ಕವಿ ಹೇಗೆ ಚಿತ್ರಿಸಿದ್ದಾನೆ?
2. ಮುಟ್ಟಿಸಿಕೊಳ್ಳದೆ ಪವಿತ್ರನಾಗಿರಬೇಕೆಂದು ಹೇಳುವ ಕವಿಯ ಮಾತಿನ ಅರ್ಥವೇನು? ವಿವರಿಸಿ.
3. ದೇವರಿಗೊಂದು ಅರ್ಜಿ ಕವಿತೆಯು ಹೇಳುವ ಆಶಯವನ್ನು ವಿವರಿಸಿ.

*****

# 15. ಜೀವಕೆ ಇಂಧನ –ಬಸವರಾಜ ವಕ್ಕುಂದ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಜೀವ ಎಲ್ಲಿ ಅರಳಿದೆ?

ಅ) ಚರಾಚರ ಆ) ಭೂಮಿ ಇ) ಬಯಲು ಈ) ಒಡಲು

2. ಜೀವದ ಸೆಲೆಗಳನ್ನು ಸುಡುತ್ತಿರುವುದು ಯಾವುದು?

ಅ) ಇಲ್ಲದವರ ನಿರಾಶೆಯ ಕಣ್ಣೀರು ಆ) ಉಳ್ಳವರ ಆಶೆಯ ಬೆಂಕಿ ಗಾಳಿಗಳು

ಇ) ಮಹಲಿನ ಬುಡದಲ್ಲಿನ ಮಾರಿಯ ಸದ್ದು ಈ) ಬತ್ತಿ ಬರಡಾಗಿ ಹೋಗುವುದು

3. ಭೂಮಿಯನ್ನು ಇವರು ಮಾರಿಕೊಂಡರು

ಅ) ಭೂ ದಾಹಿಗಳು ಆ) ಅರಣ್ಯ ದಾಹಿಗಳು ಇ) ಧನದ ದಾಹಿಗಳು ಈ) ನಗರ ದಾಹಿಗಳು

4. ಈ ಭೂಮಿಯನ್ನು ಹೇಗೆ ಕಾಯಬೇಕು?

ಅ) ರಾಸಾಯನಿಕ ಬೆಳೆಗಳನು ಹೊದಿಸಿ ಆ) ಕರುಣೆಯ ಜಲಗಳ ಹೊದಿಸಿ

ಇ) ಅಭಿವೃದ್ಧಿಯ ಮಂತ್ರವ ಪಠಿಸಿ ಈ) ಜೈವಿಕ ಬೆಳೆಗಳ ಹಸಿರನು ಹೊದಿಸಿ

5. ಜೀವ ಉಳಿಯುವ ದಾರಿ ಯಾವುದು?

ಅ) ಸಮತೋಲನದಲ್ಲಿ ಬದುಕುವುದು ಆ) ಜೈವಿಕ ಇಂಧನ ಬಳಸುವುದು

ಇ) ಜೈವಿಕ ಇಂಧನವನ್ನು ಅತಿಯಾಗಿ ಬಳಸುವುದು ಈ) ಅಸಮತೋಲನದಲ್ಲಿ ಬದುಕುವುದು

6. ಎಂದೂ ಕರಗದ ಮೂಲಧನ ಯಾವುದು?

ಅ) ಜೈವಿಕ ಬೆಳೆಗಳು ಆ) ಜೈವಿಕ ಇಂಧನ ಇ) ಹಸಿರು ಹೊನ್ನು ಈ) ಜೀವದ ಸೆಲೆಗಳು

**II. ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ಒಡಲೊಳಗೆ ಏನೇನು ಸೇರಿಕೊಂಡಿವೆ?
2. ಉಳ್ಳವರ ಆಶೆಯ ಪರಿಣಾಮಗಳೇನು?
3. ಧನದಾಹದಿಂದ ಉಂಟಾದ ಪರಿಣಾಮಗಳೇನು?
4. ಭೂಮಿ ಮತ್ತು ಜೀವವನ್ನು ಉಳಿಸುವ ದಾರಿ ಯಾವುದು?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಸುಡುತ್ತಿವೆ ಜೀವದ ಸೆಲೆಗಳನು
2. ಕೇಳರು ಮಾರಿಯ ಸದ್ದನು
3. ಧನವಿದ್ದರು ಇಂಧನ ಬೇಕಲ್ಲವೆ
4. ಜೈವಿಕ ಇಂಧನ ಜೀವಕೆ ಇಂಧನ

**IV. ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಉಳ್ಳವರ ಸ್ವಾರ್ಥ ಭೂಮಿ ಮತ್ತು ಇಂಧನವನ್ನು ಹೇಗೆ ನಾಶಗೈದಿದೆ? ವಿವರಿಸಿ.
2. ಭೂಮಿಯ ಹಸಿರನ್ನು ಉಳಿಸಿ ಜೈವಿಕ ಇಂಧನ ಬಳಸುವ ಕವಿಯ ಆಶಯವನ್ನು ವಿವರಿಸಿ.

*****

## 2024–25 ನೇ ಸಾಲಿನ ನೂತನ ಪ್ರಶ್ನೆಪತ್ರಿಕೆಯ ಪ್ರಶ್ನೆಸಂಖ್ಯೆ 16 ಕ್ಕೆ ಸಂಬಂಧಿಸಿದಂತೆ ಹೊಂದಿಸಿ ಬರೆಯಿರಿ ಪ್ರಶ್ನೆಗಳಿಗೆ ಈ ಕೆಳಕಂಡವುಗಳನ್ನು ಗಮನಿಸುವುದು

1.

| | | |
|---|---|---|
| ಅ) ಮಗು ಮತ್ತು ಹಣ್ಣುಗಳು | – | 1) ಡಾ.ಎಚ್ ಎಲ್ ಪುಷ್ಪ |
| ಆ) ಮತ್ತೆ ಸೂರ್ಯ ಬರುತ್ತಾನೆ | – | 2) ಜೈವಿಕ ಇಂಧನ |
| ಇ) ಸುನಾಮಿಯ ಹಾಡು | – | 3) ಮಳೆಬಿದ್ದ ನೆಲದಲ್ಲಿ |
| ಈ) ಹೊಲಿಗೆ ಯಂತ್ರದ ಅಮ್ಮಿ | – | 4) ಡಾ। ಲೋಕೇಶ್ ಅಗಸನಕಟ್ಟೆ |
| ಉ) ಜೀವಕೆ ಇಂಧನ | – | 5) ಜಂಗಮ ಫಕೀರನ ಜೋಳಿಗೆ |
| | | 6) ಡಾ। ಬಿ.ಸಿ ರಾಮಚಂದ್ರಶರ್ಮ |

2.

| | | |
|---|---|---|
| ಅ) ಮಗು ಮತ್ತು ಹಣ್ಣುಗಳು | – | 1) ಸುನಾಮಿಯ ಹಾಡು |
| ಆ) ಡಾ। ಲೋಕೇಶ್ ಅಗಸನಕಟ್ಟೆ | – | 2) ಜೈಮಿನಿ ಭಾರತ |
| ಇ) ಡಾ.ಎಚ್ ಎಲ್ ಪುಷ್ಪ | – | 3) ಮತ್ತೆ ಸೂರ್ಯ ಬರುತ್ತಾನೆ |
| ಈ) ಜಂಗಮ ಫಕೀರನ ಜೋಳಿಗೆ | – | 4) ಬಸವರಾಜ ವಕ್ಕುಂದ |
| ಉ) ಕೂಸು ಕಂಡ ಕನಸಿನಲಿ | – | 5) ಹೊಲಿಗೆ ಯಂತ್ರದ ಅಮ್ಮಿ |
| | | 6) ಮಳೆಬಿದ್ದ ನೆಲದಲ್ಲಿ |

3.

| | | |
|---|---|---|
| ಅ) ಮಗು ಮತ್ತು ಹಣ್ಣುಗಳು | – | 1) ಲೋಹದ ಕಣ್ಣು |
| ಆ) ಮತ್ತೆ ಸೂರ್ಯ ಬರುತ್ತಾನೆ | – | 2) ಬಸವರಾಜ ವಕ್ಕುಂದ |
| ಇ) ಡಾ.ಎಚ್ ಎಲ್ ಪುಷ್ಪ | – | 3) ಎಚ್.ಎಸ್ ಶಿವಪ್ರಕಾಶ್ |
| ಈ) ಜಂಗಮ ಫಕೀರನ ಜೋಳಿಗೆ | – | 4) ಆರೀಫ್ ರಾಜಾ |
| ಉ) ಜೀವಕೆ ಇಂಧನ | – | 5) ಡಾ। ಲೋಕೇಶ್ ಅಗಸನಕಟ್ಟೆ |
| | – | 6) ಚೆನ್ನಮಲ್ಲಿಕಾರ್ಜುನ |

4.

| | | |
|---|---|---|
| ಅ) ಎಚ್.ಎಸ್ ಶಿವಪ್ರಕಾಶ್ | – | 1) ಡಾ। ಲೋಕೇಶ್ ಅಗಸನಕಟ್ಟೆ |
| ಆ) ಮತ್ತೆ ಸೂರ್ಯ ಬರುತ್ತಾನೆ | – | 2) ಕೂಸು ಕಂಡ ಕನಸಿನಲಿ |
| ಇ) ಲೋಹದ ಕಣ್ಣು | – | 3) ಮಾಲತಿ ಪಟ್ಟಣಶೆಟ್ಟಿ |
| ಈ) ಆರೀಫ್ ರಾಜಾ | – | 4) ಜಂಗಮ ಫಕೀರನ ಜೋಳಿಗೆ |
| ಉ) ಬಸವರಾಜ ವಕ್ಕುಂದ | – | 5) ಮಳೆಬಿದ್ದ ನೆಲದಲ್ಲಿ |
| | – | 6) ಸುನಾಮಿಯ ಹಾಡು |

5.

| | | |
|---|---|---|
| ಅ) ಎಚ್.ಎಸ್ ಶಿವಪ್ರಕಾಶ್ | – | 1) ಆರೀಫ್ ರಾಜಾ |
| ಆ) ಡಾ। ಲೋಕೇಶ್ ಅಗಸನಕಟ್ಟೆ | – | 2) ಹೃದಯ ಗೀತೆ |
| ಇ) ಸುನಾಮಿಯ ಹಾಡು | – | 3) ಕೂಸು ಕಂಡ ಕನಸಿನಲಿ |
| ಈ) ಹೊಲಿಗೆ ಯಂತ್ರದ ಅಮ್ಮಿ | – | 4) ಮಗು ಮತ್ತು ಹಣ್ಣುಗಳು |
| ಉ) ಜೀವಕೆ ಇಂಧನ | – | 5) ಲೋಹದ ಕಣ್ಣು |
| | – | 6) ಮತ್ತೆ ಸೂರ್ಯ ಬರುತ್ತಾನ |

## 2024–25 ನೇ ಸಾಲಿನ ನೂತನ ಪ್ರಶ್ನೆಪತ್ರಿಕೆಯ ಪ್ರಶ್ನೆಸಂಖ್ಯೆ 40 ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಪದ್ಯ ಭಾಗಗಳನ್ನು ಗಮನಿಸುವುದು.

### 1. ದುರ್ಯೋಧನ ವಿಲಾಪ – ರನ್ನ

1. ನೀಡಿರುವ ಪದ್ಯವನ್ನು ಆಧರಿಸಿ ಕೇಳಿರುವ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿ.

ಅರಿಯೆಮೆ ಬಿಲ್ಲ ಬಿನ್ನಣಕೆ ಗಾಂಡಿವಿಯಲ್ತು ಪಿನಾಕಪಾಣಿಯುಂ
ನೆರೆಯನಿದಿರ್ಚಿ ನಿಮ್ಮೊಡನೆ ಕಾದಿ ಗೆಲಲ್ಕದು ನಿಮ್ಮುಪೇಕ್ಷೆಯೆಂದರಿಯೆಂ
ದರಿಯೆನಿದೆನ್ನ ಕರ್ಮವಶಮೆಂದರಿಯೆಂ ನಿಮಗಿಂತು ಸಾವುಮೀ
ತೆರದಿನಕಾರಣಂ ನೆರೆಯೆ ಸಂಭವಿಸಿರ್ದುದೊ ಕುಂಭಸಂಭವಾ

ಅ) ಗಾಂಡಿವಿ ಎಂದರೆ ಯಾರು? (1ಅಂಕ)
ಆ) ನಿಮ್ಮ ನಿರ್ಲಕ್ಷ್ಯದಿಂದ ನಿಮಗೆ ಸೋಲಾಗಿಲ್ಲ ಎಂದು ದುರ್ಯೋಧನ ಯಾರಿಗೆ ಹೇಳುತ್ತಿದ್ದಾನೆ? (1ಅಂಕ)
ಇ) ದ್ರೋಣರಿಗೆ ಸಾವು ಹೇಗೆ ಬಂತು ಎಂಬುದನ್ನು ಮೇಲಿನ ಸಾಲುಗಳಲ್ಲಿ ಹೇಗೆ ಹೇಳಲಾಗಿದೆ? (2ಅಂಕ)

2. ನೀಡಿರುವ ಪದ್ಯವನ್ನು ಆಧರಿಸಿ ಕೇಳಿರುವ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿ.

ಅನೃತಂ ಲೋಭಂ ಭಯಮಂ
ಬಿನಿತು ನೀನಿರ್ದು ನಾಡೊಳಿರ್ಕುಮೆ ರವಿನಂ
ದನ ನನ್ನಿ ಚಾಗಮಣ್ಮಂ
ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್

ಅ) ಅನೃತ ಮತ್ತು ಲೋಭ ಎಂದರೇನು? (1ಅಂಕ)
ಆ) ರವಿನಂದನ ಎಂದು ಯಾರನ್ನು ಕರೆಯಲಾಗಿದೆ? (1ಅಂಕ)
ಇ) ಕರ್ಣನ ಉದಾತ್ತ ಗುಣಗಳನ್ನು ದುರ್ಯೋಧನ ಹೇಗೆ ಹೊಗಳಿದ್ದಾನೆ? (2 ಅಂಕ)

### 2. ವಚನಗಳು – ಅಲ್ಲಮಪ್ರಭು

1. ಈ ಕೆಳಗಿನ ವಚನವನ್ನು ಆಧರಿಸಿ ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ಕಾಲುಗಳೆಂಬವು ಗಾಲಿ ಕಂಡಯ್ಯಾ
ದೇಹವೆಂಬುದು ತುಂಬಿದ ಬಂಡಿ ಕಂಡಯ್ಯಾ
ಬಂಡಿಯ ಹೊಡೆವರೈವರು ಮಾನಿಸರು
ಒಬ್ಬರಿಗೊಬ್ಬರು ಸಮವಿಲ್ಲಯ್ಯ
ಅದರಿಚ್ಛೆಯನರಿದು ಹೊಡೆಯದಿರ್ದಡೆ
ಅದರಚ್ಚು ಮುರಿಯಿತ್ತು ಗುಹೇಶ್ವರಾ

ಅ) ಕಾಲುಗಳೆಂದರೆ ಏನು? (1ಅಂಕ)
ಆ) ಬಂಡಿಯನ್ನು ಹೊಡೆಯುವ ಜನ ಎಷ್ಟು? (1ಅಂಕ)
ಇ) ಪಂಚೇಂದ್ರಿಯಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳದಿದ್ದರೆ ಆಗುವ ಪರಿಣಾಮಗಳನ್ನು ಅಲ್ಲಮ ಹೇಗೆ ಹೇಳಿದ್ದಾನೆ? (2ಅಂಕ)

## 2. ವಚನಗಳು – ಅಕ್ಕಮಹಾದೇವಿ

1. ಈ ಕೆಳಗಿನ ವಚನವನ್ನು ಆಧರಿಸಿ ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ಕಣ್ಗೆ ಶೃಂಗಾರ ಗುರುಹಿರಿಯರ ನೋಡುವುದು
ಕರ್ಣಕ್ಕೆ ಶೃಂಗಾರ ಪುರಾತನರ ಸಂಗೀತಂಗಳ ಕೇಳುವುದು
ವಚನಕ್ಕೆ ಶೃಂಗಾರ ಸತ್ಯವ ನುಡಿವುದು
ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ
ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು
ಜೀವಿಸುವ ಜೀವನಕ್ಕೆ ಶೃಂಗಾರ ಏತಕ್ಕೆ ಬಾತೆಯಯ್ಯಾ
ಚೆನ್ನಮಲ್ಲಿಕಾರ್ಜುನಾ?

ಅ) ಕರ್ಣಕ್ಕೆ ಶೃಂಗಾರ ಯಾವುದು? (1ಅಂಕ)
ಆ) ಕರಕ್ಕೆ ಶೃಂಗಾರ ಯಾವುದು? (1ಅಂಕ)
ಇ) ಈ ವಚನದಲ್ಲಿ ಬದುಕಿನ ಸಾರ್ಥಕತೆ ಕುರಿತು ಅಕ್ಕನ ಮಾತುಗಳನ್ನು ಸಂಗ್ರಹಿಸಿ. (2 ಅಂಕ)

## 3. ದೇವನೊಲಿದ ಕುಲವೇ ಸತ್ಕುಲಂ – ಹರಿಹರ

1. ಕೊಟ್ಟಿರುವ ಪದ್ಯವನ್ನು ಆಧರಿಸಿ ಕೇಳಿರುವ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿ.

ಮಧುರಾಮ್ರ ರುಚಿಯಾಹ ಶಿವಲಿಂಗವಂ ತಾಗೆ
ಸುಧೆಯ ಕಡುಸವಿಯಿಂದೆ ನೂರ್ಮಡಿಸಿ ಸವಿಯಾಗೆ
ಸವಿದು ದಣಿವೆಯ್ದಿಸದೆ ಗುರುಮೂರ್ತಿ ಯುರವಣಿಸಿ
ಸವಿಸವಿವುತಂಬಕಳವೆಲ್ಲವಂ ಲವಲವಿಸಿ
ಕೊಂಡನೇನೆಂಬೆನಾ ಚೆನ್ನನೊಡನೊಂದಾಗಿ
ಉಂಡನಭವಂ ಸ್ವರ್ಗ ಮರ್ತ್ಯಕ್ಕೆ ಪೊಸತಾಗಿ

ಅ) ಎಂಥ ರುಚಿ ಶಿವನನ್ನು ತಾಕಿತು? (1 ಅಂಕ)
ಆ) ಅಂಬಕಳವನ್ನು ಕುಡಿದು ಸಂತಸಪಟ್ಟವನು ಯಾರು? (1 ಅಂಕ)
ಇ) ಶಿವ ಚೆನ್ನಯ್ಯ ನೀಡಿದ ಅಂಬಲಿ ಕುಡಿದು ಸಂತೋಷಪಟ್ಟುದನ್ನು ಕವಿ ಹೇಗೆ ಹೇಳಿದ್ದಾನೆ? (2 ಅಂಕ)

2. ಕೊಟ್ಟಿರುವ ಪದ್ಯವನ್ನು ಆಧರಿಸಿ ಕೇಳಿರುವ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿ

ದೇವದೇವನೊಲಿದಿದನ ಕುಲವೆ ಸತ್ಕುಲಂ
ಘನಮಹಿಮನೊಲಿದ ಜಾತಿಯೆಜಾತಿ ನಿರ್ಮಲಂ
ಸರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೆ
ಸರ್ವಜ್ಞ ನಿಮ್ಮ ಕೆರ್ಪಿಂಗೆನ್ನ ಶಿರ ಸರಿಯೆ
ಬಿಡೆನಯ್ಯ ನಿಮ್ಮ ಪದಮಂ ಬಿಟ್ಟು ಬಾಳ್ವೆನೇ
ಮೃಡಮೂರ್ತಿಯಂ ಬಿಟ್ಟು ನರಕದೊಳಗಾಳ್ವೆನೇ

ಅ) ದೇವನೊಲಿದಿದನ ಕುಲವೆ ಸತ್ಕುಲಂ ಎಂಬ ಮಾತು ಯಾರದು? (1 ಅಂಕ)
ಆ) ಸರ್ವನೊಡನೆ (ಶಿವ) ಊಟ ಮಾಡಿದವರು ಯಾರು? (1 ಅಂಕ)
ಇ) ರಾಜ ಕರಿಕಾಲ ಚೋಳ ಚೆನ್ನಯ್ಯನ ಪಾದಗಳಿಗೆ ನಮಸ್ಕರಿಸಿ ಏನು ಹೇಳುತ್ತಾನೆ? (2 ಅಂಕ)

# 4. ಹಲುಬಿದಳ್ ಕಲ್ಮರಂ ಕರಗುವಂತೆ – ಲಕ್ಷ್ಮೀಶ

1. ಕೊಟ್ಟಿರುವ ಪದ್ಯವನ್ನು ಆಧರಿಸಿ ಕೇಳಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ
ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತಿ ಕಿವಿ
ದರೆಗೆ ಬೀಳದ ಮುನ್ನ ಹಮ್ಮೈಸಿ ಬಿದ್ದಳಂಗನೆ ಧರೆಗೆ ನಡುನಡುಗುತ
ಮರೆದಳಂಗೋಪಾಂಗಮಂ ಬಳಿಕ ಸೌಮಿತ್ರಿ
ಮರುಗಿ ತಣ್ಣೀರ್ದಳೆದು ಪತ್ರದಿಂ ಕೊಡೆವಿಡಿದು
ಸೆರಗಿಂದೆ ಬೀಸಿ ರಾಮನ ಸೇವೆ ಸಂದುದೇ ತನಗೆಂದು ರೋದಿಸಿದನು

ಅ) ಸೀತೆ ಹೇಗೆ ನೆಲದ ಮೇಲೆ ಬಿದ್ದಳು (1 ಅಂಕ)
ಆ) ಯಾರ ಮಾತು ಕಿವಿಗೆ ಪೂರ್ಣವಾಗಿ ಬೀಳುವ ಮುನ್ನ ಸೀತೆ ಕೆಳಗೆ ಬಿದ್ದಳು? (1 ಅಂಕ)
ಇ) ಪ್ರಜ್ಞೆ ತಪ್ಪಿ ಬಿದ್ದ ಸೀತೆಯನ್ನು ಲಕ್ಷ್ಮಣ ಹೇಗೆ ಉಪಚರಿಸಿದನು? (2 ಅಂಕ)

2. ಕೊಟ್ಟಿರುವ ಪದ್ಯವನ್ನು ಆಧರಿಸಿ ಕೇಳಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ
ಕಡುಪಾತಕಂಗೈದು ಪೆಣ್ಣಾಗಿ ಜನಿಸಿ ತ
ನ್ನೊಡಲಂ ಪೊರೆವುದೆನ್ನೊಳಪರಾಧಮುಂಟು ಸಾಕಿಲ್ಲಿರಲ್ಬೇಡ ನೀನು
ನಡೆ ಪೋಗು ನಿಲ್ಲದಿರ್ನಿನಗೆ ಮಾರ್ಗದೊಳಾಗ
ಲಡಿಗಡಿಗೆ ಸುಖಂಮೆಂದು ಸೀತೆ ಕಂಬನಿಗಳಂ
ಮಿಡಿದು..

ಅ) ಕರುಣಾಳು ಯಾರು? (1 ಅಂಕ)
ಆ) ಏನಾಗಿ ಹುಟ್ಟಿದುದು ಕಡುಪಾಪ ಎಂದು ಸೀತೆ ಹೇಳಿದ್ದಾಳೆ? (1 ಅಂಕ)
ಇ) ಸೀತೆ ಲಕ್ಷ್ಮಣನಿಗೆ ಏನೆಂದು ಹಾರೈಸಿದಳು? (2 ಅಂಕ)

# 8. ಎಂದಿಗೆ – ಬಿ.ಸಿ ರಾಮಚಂದ್ರ ಶರ್ಮ

1. ಕೊಟ್ಟಿರುವ ಪದ್ಯವನ್ನು ಆಧರಿಸಿ ಕೇಳಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

ಸುರುದ ನೆತ್ತರ ಕೆಂಪ ಸಿರಿಯೊ, ಮಣ್ಣಿಗೊದಗಿದ ತಣ್ಪ ಕರೆಯೋ.
ಹಸುರ ಮರೆಯಿತು ಮರುಧರೆ,
ಕಡಲ ಕಡೆಗೋಲಿಟ್ಟು ಕಡೆಯಲು,
ಅಯ್ಯೋ ಬಂತೇ ವಿಷ ವಿಷ,
ನೆಚ್ಚಿ ಕಡೆಯಲು ಮೆಚ್ಚಿ ದುಡಿಯಲು
ಬರದಾಯಿತೆ ಅಮೃತ,
ಅಂತು ಬಂದಿತು ಬಂದೆ ಬಂದಿತು ಎಂಥ ಎಂಥಾ ಬಿಡುಗಡೆ
ಮೋಸ ಸುಳಿಗೆ, ಲಂಚ ಸುಲಿಗೆಗೆ,
ಹೃದಯದಾಳದ ಕೊಚ್ಚೆ ಹರಿವಿಗೆ, ಇನ್ನು ಇಲ್ಲವೆ ತಡೆಬಡೆ!

ಅ) ಹಸುರನ್ನು ಮರೆತಿದ್ದು ಯಾರು? (1 ಅಂಕ)
ಆ) ಮೆಚ್ಚಿ ದುಡಿಯಲು ಏನು ಬರದಾಯಿತು? (1 ಅಂಕ)
ಇ) ಎಂಥಾ ಬಿಡುಗಡೆ ಬಂದಿತು ಎಂದು ಕವಿ ಹೇಳಿದ್ದಾರೆ? (2 ಅಂಕ)

# ಗದ್ಯಭಾಗ:

# 1. ಗಾಂಧಿ – ಡಾ.ಬೆಸಗರಹಳ್ಳಿ ರಾಮಣ್ಣ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ವೈದ್ಯಾಧಿಕಾರಿಯ ಜ್ಞಾಪಕಕ್ಕೆ ಬಂದದ್ದು ಏನು ?

ಅ) ತನ್ನ ಮುಂದೆ ನಿಂತಿರುವ ವ್ಯಕ್ತಿಗಳು ಶ್ರೀಮಂತವರ್ಗಕ್ಕೆ ಸೇರಿದವರು ಎಂಬುದು

ಆ) ತನ್ನ ಮುಂದೆ ನಿಂತಿರುವ ವ್ಯಕ್ತಿಗಳು ಬಡವರ್ಗಕ್ಕೆ ಸೇರಿದವರು ಎಂಬುದು

ಇ) ತನ್ನ ಮುಂದೆ ನಿಂತಿರುವ ವ್ಯಕ್ತಿಗಳು ತನ್ನಂತೆಯೇ ಒಳ್ಳೆಯ ಮನುಷ್ಯರು ಎಂಬುದು.

ಈ) ತನ್ನ ಮುಂದೆ ನಿಂತಿರುವ ವ್ಯಕ್ತಿಗಳು ತನ್ನಂತೆಯೇ ಮನುಷ್ಯ ವರ್ಗಕ್ಕೆ ಸೇರಿದವರು ಎಂಬುದು.

2. ವೈದ್ಯಾಧಿಕಾರಿ ಇಲ್ಲಿಯವರೆಗೆ ಯಾವ ರೀತಿಯ ನ್ಯಾಯವನ್ನು ಕಂಡಿರಲಿಲ್ಲ ?

ಅ) ಕಾಕತಾಳನ್ಯಾಯ ಆ) ಕೂಪಮಂಡೂಕ ನ್ಯಾಯ

ಇ) ಅಜಗಜ ನ್ಯಾಯ ಈ) ಹಂಸಕ್ಷೀರ ನ್ಯಾಯ

3. ಕುಟುಂಬ ಯೋಜನಾ ವಿಸ್ತರಣಾಧಿಕಾರಿಯ ಹೆಸರೇನು ?

ಅ) ನಾಯ್ಡು ಆ) ನರಸಿಂಹಮೂರ್ತಿ ಇ) ಬುಕ್ಕೇಗೌಡ ಈ) ಕರಿಸಿದ್ದೇಗೌಡ

4. ಮೊಮ್ಮಗನ ಅಗಲವಾದ ಕಿವಿಗಳ ಕಂಡ ಕರಿಸಿದ್ದೇಗೌಡ ಯಾರ ಮನೆಗೆ ಹೋದನು ?

ಅ) ಜೋಯಿಸರ ಮನೆಗೆ ಆ) ಅಳಿಯನ ಮನೆಗೆ ಇ) ಗೌಡರ ಮನೆಗೆ ಈ) ಗಾಂಧೀಜಿಯ ಮನೆಗೆ

5. ಹುಡುಗನಿಗೆ ಮಹಾತ್ಮಗಾಂಧಿ ಎಂಬ ಹೆಸರನ್ನು ಇಟ್ಟವರು ಇವರು

ಅ) ಕರಿಸಿದ್ದೇಗೌಡ ಆ) ಬುಕ್ಕೇಗೌಡ ಇ) ನಾಯ್ಡು ಈ) ವೈದ್ಯಾಧಿಕಾರಿ

6. ಗಾಂಧೀಯನ್ನು ಹೆಚ್ಚಿನ ಪರೀಕ್ಷೆಗಳಿಗೆ ಈ ಆಸ್ಪತ್ರೆಗೆ ಸೇರಿಸಬೇಕೆಂದು ವೈದ್ಯಾಧಿಕಾರಿ ಸೂಚಿಸಿದರು

ಆ) ನಗರದ ಆಸ್ಪತ್ರೆಗೆ ಆ) ಚಿಕ್ಕ ಆಸ್ಪತ್ರೆಗೆ ಇ) ಕಣ್ಣಿನ ಆಸ್ಪತ್ರೆಗೆ ಈ) ದೊಡ್ಡಾಸ್ಪತ್ರೆಗೆ

7. ಹಲಸಿನ ಮರ ಮಾರಿದ್ದರಿಂದ ಕರಿಸಿದ್ದೇಗೌಡನಿಗೆ ಸಿಕ್ಕ ಹಣ.

ಅ) ಮುನ್ನೂರು ಆ) ಇನ್ನೂರೈವತ್ತು ಇ) ನಾನೂರು ಈ) ನೂರೈವತ್ತು

8. "ವಸಿ ಏನೋ ಚೆನ್ನಾಗೆ ನೋಡ್ದೆ ನಿನ್ನ ಹೊಟ್ಟೆ ದಪ್ಪ ಕೈಕಾಲು ಸಣ್ಣ, ಕಿವಿಗಳು ಮಾತ್ರ ಗಾಂಧಿ ಕಿವಿಗಳು ಇದ್ದಾಗಿವೆಯಪ್ಪಾ" – ಈ ಮಾತುಗಳು ವೈದ್ಯಾಧಿಕಾರಿಯ ಯಾವ ಮನೋಭಾವವನ್ನು ಸೂಚಿಸುತ್ತವೆ.

ಅ) ಕುಚೇಷ್ಟೆ ಆ) ಗೌರವ ಇ) ಪ್ರೀತಿ ಈ) ದ್ವೇಷ

9. "ನಿಮ್ ದಮ್ಮಯ್ಯ ಕೋಪ ಮಾಡ್ಕೊಳ್ದೇ ನೋಡಿ ಸ್ವಾಮಿ. ಇವನೊಬ್ಬನೇ ನನಗೆ ಗಂಡು ಮಗ ಅಂತ ಇರೋನು!" ಈ ಮಾತುಗಳಲ್ಲಿ ವ್ಯಕ್ತವಾಗಿರುವುದು

ಅ) ದೈನ್ಯತೆ ಆ) ಸ್ವಾಭಿಮಾನ ಇ) ಆಕ್ರೋಶ ಈ) ಹತಾಶೆ

10. "ಸುಳ್ಳು ಹೇಳಿ ನಿಮ್ ತಾವು ನಾನು ಯಾವ ಸಾಮ್ರಾಜ್ಯ ಈಸ್ಕೋಬೇಕು." ಈ ಮಾತು ಕೆಳಗಿನ ಯಾವ ಭಾವವನ್ನು ಸಮರ್ಥಿಸುತ್ತದೆ

ಅ) ಆತ್ಮವಿಶ್ವಾಸ ಆ) ಸುಳ್ಳು ಇ) ಆಕ್ರೋಶ ಈ) ಹಿಂಜರಿಕೆ

**II. ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ವೈದ್ಯಾಧಿಕಾರಿಗೆ ಹುಡುಗ ಹೇಗೆ ಕಂಡನು?

2. ವೈದ್ಯಾಧಿಕಾರಿ ಹುಡುಗನ್ನು ನೋಡಿ ಏನೆಂದು ಕುಚೇಷ್ಟೆ ಮಾಡಿದ?

3. ಹುಡುಗನ ಯಾವ ಮಾತಿಗೆ ವೈದ್ಯಾಧಿಕಾರಿ ಬೆಪ್ಪಾಗಿ ಹೋದ?
4. ಗಾಂಧಿಯನ್ನು ಪರೀಕ್ಷೆ ಮಾಡಿದ ವೈದ್ಯರು ನಿಂಗಮ್ಮನಿಗೆ ಹೇಳಿದ ಮಾತುಗಳೇನು?
5. ನಿಂಗಮ್ಮನ ಗಂಡ ಪ್ರಾಣ ಕಳೆದುಕೊಂಡದ್ದು ಹೇಗೆ?
6. ಗಾಂಧಿ ಎಂಬ ಹುಡುಗನ ಕೊನೆಯ ಆಸೆ ಯಾವುದು?
7. ಊರಿಗೆ ಬಂದ ಕರಿಸಿದ್ದೇಗೌಡ ಏನನ್ನು ಗಿರವಿ ಇಡಲು ಪ್ರಯತ್ನಿಸಿದ?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಇಲ್ಲಿ ನನ್ನ ನಿನ್ನ ರಾಗವ ಯಾರು ಕೇಳಾರು?
2. ಇದ್ದು ನಾನು ಯಾವ ರಾಜ್ಯ ಆಳಬೇಕು?
3. ಮೊದಲೇ ತೂರಾಡ್ತಿ ಬಿದ್ದು ಗಿದ್ದು ಬುಟ್ಟಿಕನಪ್ಪ
4. ಇವನ್ನ ಸಾಕ್ಷಾತ್ ಗಾಂಧಿ ಅಂತ್ಲೇ ತಿಳ್ಕೊಂಡು ಬಿಟ್ರ
5. ಲೋ ಹುಡುಗ ಆ ಫೋಟೋ ಯಾರದಯ್ಯ
6. ಓಹೋ! ಇವನ ಹೆಸರು ಮಹಂತೇಗೌಡ ಅಂತ ಅಲ್ವೆ?
7. ಇಲ್ಲೇ ಒಸಿ ದಿನ ಇಡ್ಕೊಂಡು ಉಳಿಸಿಕೊಡಿ
8. ಮನುಷ್ರು ಸಾಯ್ದೆ ಕಲ್ಲು ಸತ್ತಾದ, ಸುಮ್ಕಿರು ಮಂತೆ

**IV. ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ವೈದ್ಯಾಧಿಕಾರಿ ಮತ್ತು ಆಸ್ಪತ್ರೆಯ ಸಿಬ್ಬಂದಿಗಳು ಗಾಂಧಿಯನ್ನು ನಡೆಸಿಕೊಂಡ ರೀತಿಯನ್ನು ನಿರೂಪಿಸಿರಿ.
2. ಕರಿಸಿದ್ದೇಗೌಡ ತನ್ನ ಮೊಮ್ಮಗನಿಗೆ ಗಾಂಧಿಯ ಹೆಸರಿಡಲು ಕಾರಣವೇನು?
3. ಮೊಮ್ಮಗನ ಪ್ರಾಣ ಉಳಿಸಿಕೊಳ್ಳಲು ಕರಿಸಿದ್ದೇಗೌಡ ಪಟ್ಟ ಪಾಡೇನು?
4. ಗಾಂಧಿ ಎಂಬ ಹುಡುಗನ ಸಾವಿನ ಸಂದರ್ಭವನ್ನು ವಿವರಿಸಿರಿ

*****

# 2. ರಾಗಿಮುದ್ದೆ – ಚ.ಹ.ರಘುನಾಥ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ನಮಗೆಲ್ಲಾ ರಾಗಿಮುದ್ದೆ ಎಂದ ತಕ್ಷಣ ನೆನಪಾಗುವುದು ಇದು

ಅ) ಬಡತನ ಹಾಗೂ ಕನ್ನಡತನ ಆ) ಬಡತನ ಹಾಗೂ ಸಿರಿತನ

ಇ) ಸಂಭ್ರಮ ಹಾಗೂ ಸಂತೋಷ ಈ) ಬೇಸರ ಹಾಗೂ ಮೂದಲಿಕೆ

2. ಒಂದು ಪ್ರದೇಶದ ಆಹಾರ ಪದ್ಧತಿಗೂ ಸಂಸ್ಕೃತಿಗೂ ತಳಕು ಹಾಕುವುದಾದರೆ ಇದನ್ನು ಬಿಡುವಂತಿಲ್ಲ.

ಅ) ರಾಗಿಯನ್ನು ಆ) ಜೋಳವನ್ನು ಇ) ಅಕ್ಕಿಯನ್ನು ಈ) ಗೋಧಿಯನ್ನು

3. ಗ್ರಾಮದ ಅಧಿದೇವತೆ ಯಾರು ?

ಅ) ಏಳೂರಮ್ಮ ಆ) ಬಂದಂತಮ್ಮ ಇ) ನಾಗಮ್ಮ ಈ) ಮಸಣಿಕಮ್ಮ

4. ಕಣ್ಣುಗಳಲ್ಲಿ ಇದರ ಸಾಲು ಚಿತ್ರಗಳು ಮೂಡಿಕೊಂಡವು

ಅ) ಅನ್ನದ ಆ) ರಾಗಿ ಮುದ್ದೆಯ ಇ) ಬಾನಿಯ ಈ) ಸೀಕುವಿನ

5. ಹೋಟೆಲ್ಲಿನಲ್ಲಿ ಕರಿಯ ಈ ಕೆಲಸ ಮಾಡುತ್ತಿದ್ದ

ಅ) ಕಸಮುಸುರೆ ಆ) ಅಡುಗೆ ಇ) ಮ್ಯಾನೇಜರ್ ಈ) ಸಪ್ಲೈಯರ್

6. ಊರಿನ ನೀರು ಎಲ್ಲಿ ನೆಲೆ ನಿಂತಿತ್ತು ?

ಅ) ಗುಂಡಿಯಲ್ಲಿ ಆ) ಪಾತಾಳದಲ್ಲಿ ಇ) ಬಯಲಿನಲ್ಲಿ ಈ) ನದಿಯಲ್ಲಿ

7. ನೀರಿಗಾಗಿ ಕರಿಯ ಇದನ್ನು ತರುತ್ತಿದ್ದ

ಅ) ಕೊಡಪಾನ ಆ) ತಾಮ್ರದ ಬಿಂದಿಗೆ ಇ) ದೊಡ್ಡ ಬಾನಿ ಈ) ಕುಡಿಕೆ

8. ಬಡ ಮಕ್ಕಳ ಪಾಲಿಗೆ ಚಾಕಲೇಟ್ ಯಾವುದು?

ಅ) ರಾಗಿಮುದ್ದೆ ಆ) ಅನ್ನ ಇ) ಡೈರಿ ಮಿಲ್ಕ್ ಈ) ಸೀಕು

9. ರಾಗಿಗೆ ಇಷ್ಟು ಸಾವಿರ ವರ್ಷಗಳ ಇತಿಹಾಸವಿದೆ

ಅ) ನಾಲ್ಕು ಸಾವಿರ ಆ) ಹತ್ತು ಸಾವಿರ ಇ) ಇಪ್ಪತ್ತು ಸಾವಿರ ಈ) ಮೂರು ಸಾವಿರ

10. ರಾಗಿಯಲ್ಲಿನ ಸ್ವಲ್ಪ ಸ್ವಲ್ಪವೇ ಬಿಡುಗಡೆಯಾಗುವ ಅಂಶ ಇದು

ಅ) ವಿಟಮಿನ್ ಆ) ಪ್ರತ್ಯಾಮ್ಲೀಯ ಇ) ಕಾರ್ಬೋಹೈಡ್ರೇಟ್ ಈ) ಪ್ರೋಟಿನ್

11. ಅಕ್ಕಿ, ಗೋಧಿಗೆ ಹೋಲಿಸಿದರೆ ರಾಗಿ ಎಷ್ಟು ಪಟ್ಟು ಹೆಚ್ಚು ಪೌಷ್ಟಿಕವಾಗಿದೆ ?

ಅ) ಎಂಟತ್ತು ಪಟ್ಟು ಆ) ಮೂರು ನಾಲ್ಕು ಪಟ್ಟು ಇ) ಎರಡು ಪಟ್ಟು ಈ) ಒಂದು ಪಟ್ಟು

12. ಡಾ. ಸಿ. ಹೆಚ್. ಲಕ್ಷಣಯ್ಯನವರು ತಮ್ಮ ಪತ್ನಿಯ ಬಳಿ ಹೇಳಿಕೊಂಡ ಕೊನೆ ಆಸೆ ಇದು–

ಅ) ಅಂತ್ಯ ಸಂಸ್ಕಾರಕ್ಕೆ ಮೊದಲು ನನ್ನ ದೇಹದ ಮೇಲೆ ಒಂದು ಮುಷ್ಟಿ ರಾಗಿ ಸುರಿಯಿರಿ.

ಆ) ಅಂತ್ಯ ಸಂಸ್ಕಾರಕ್ಕೆ ಮೊದಲು ನನ್ನ ದೇಹದ ಮೇಲೆ ರಾಗಿ ಸುರಿಯಬೇಡಿ.

ಇ) ಅಂತ್ಯ ಸಂಸ್ಕಾರಕ್ಕೆ ಮೊದಲು ನನ್ನ ದೇಹದ ಮೇಲೆ ಒಂದು ಮುಷ್ಟಿ ಗೋಧಿ ಸುರಿಯಿರಿ.

ಈ) ಅಂತ್ಯ ಸಂಸ್ಕಾರಕ್ಕೆ ಮೊದಲು ನನ್ನ ದೇಹದ ಮೇಲೆ ಒಂದು ಮುಷ್ಟಿ ಭತ್ತ ಸುರಿಯಿರಿ.

**II. ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ಲೇಖಕರು ಹಾಗೂ ಅವರ ಅಣ್ಣನ ನಾಲಗೆಯ ಮೇಲೆ ನೀರೂರಲು ಕಾರಣವೇನು?
2. ನಮ್ಮ ಯಾವ ಜಿಲ್ಲೆಗಳು ರಾಗಿಯ ಕಣಜಗಳಾಗಿವೆ?
3. ರಾಗಿ ಬೀಸುವ ಕಲ್ಲನ್ನು ಕುರಿತ ಜನಪದ ಹೆಣ್ಣುಗಳ ಪ್ರಾರ್ಥನೆ ಯಾವುದು?
4. ಮುದ್ದೆ ಮಾಡಲು ಬೇಕಾದ ಕೌಶಲ್ಯವೇನು?

5. ಲೇಖಕರ ಪ್ರಕಾರ ದುಡಿವ ಜನಕ್ಕೆ ಯಾವ ರೀತಿಯ ಮುದ್ದೆ ಇರಬೇಕು?
6. ಯಾವ ಕಾರಣದಿಂದ ಕ್ಯಾಂಟೀನ್ ರಸಮಯ ಸನ್ನಿವೇಶಗಳ ರಂಗಸ್ಥಳವಾಗಿತ್ತು?
7. ರಾಗಿಯಲ್ಲಿ ಯಾವ ರೋಗಗಳನ್ನು ತಡೆಯಬಲ್ಲ ಗುಣವಿದೆ?
8. ಮುದ್ದೆಯ ಕುರಿತು ಕೋಮಲಾಂಗಿಯರಿಗೆ ಇರುವ ಹೆದರಿಕೆ ಯಾವುದು?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಅಂಗೈಯಲ್ಲಿ ಮತ್ತೊಂದು ಮುದ್ದೆ ಪ್ರತ್ಯಕ್ಷ!
2. ಎಷ್ಟು ಜೋರಾಗಿ ಜಗ್ಗಿದರೂ ಚಿಮ್ಮುತ್ತಿದ್ದುದು ದಾರದಷ್ಟೇ ದಪ್ಪದ ನೀರು
3. ಸೀಕನ್ನು ಚಪ್ಪರಿಸಿದ ರುಚಿ ಇನ್ನೂ ನಾಲಗೆಯಲ್ಲಿದೆ
4. ಮುದ್ದೆ ಮಾಡಲಿಕ್ಕೆ ಪಳಗಿದ ಕೈಗಳೇ ಆಗಬೇಕು

5 ಸಂದು ಹೋದ ಜೀವನ ಶೈಲಿಯೊಂದರ ಮೆಲುಕು

6. ತುಟಿಬಣ್ಣ ಕೆಡದಂತೆ ಚಮಚೆಯಲ್ಲಿ ತಿನ್ನುವ ಚೆಲುವೆಯರು
7. ಅದು ಪದಗಳಿಗೆ ನಿಲುಕದ ರಸಾನುಭವ
8. ನನ್ನ ದೇಹದ ಮೇಲೆ ಒಂದು ಮುಷ್ಟಿ ರಾಗಿ ಸುರಿಯಿರಿ

**IV. ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಹಳ್ಳಿಯ ಜನ ಕೈಯಲ್ಲೇ ಮುದ್ದೆ ತಿನ್ನುವ ಚಿತ್ರಣವನ್ನು ವಿವರಿಸಿ.
2. ಕರಿಯನ ಜೀವನ ಹೇಗಿತ್ತು? ಜನರು ಆತನನ್ನು ಕಾಣುವ ರೀತಿಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ?
3. ರಾಗಿಮುದ್ದೆ ಕುರಿತು ಇರುವ ಹತ್ತಾರು ಮೆಚ್ಚುಗೆಯ ನಂಬಿಕೆಯ ಮಾತುಗಳಾವುವು?
4. ರಾಗಿಮುದ್ದೆ ಯಾವ ಬಗೆಯ ಸಾರುಗಳ ಜೊತೆ ಸೇರಿ ಎಂತಹ ರಸಾನುಭವವನ್ನು ಸೃಷ್ಟಿಸುತ್ತದೆ? ವಿವರಿಸಿರಿ.
5. ಡಾ. ಸಿ.ಹೆಚ್.ಲಕ್ಷ್ಮಣಯ್ಯನವರ ರಾಗಿ ಸಂಶೋಧನೆ ಮತ್ತು ರಾಗಿ ಪ್ರೀತಿಯನ್ನು ವಿವರಿಸಿರಿ.

*****

# 3. ಜ್ಯೋತಿಷ್ಯ ಅರ್ಥಪೂರ್ಣವೋ ಅರ್ಥರಹಿತವೋ – ಡಾ. ಎಚ್ ನರಸಿಂಹಯ್ಯ

**I. ಅ) ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಪ್ರಕೃತಿಯ ಘಟನೆಗಳು ಆದಿಮಾನವನಿಗೆ ಇದನ್ನು ಉಂಟುಮಾಡುತ್ತಿದ್ದವು.

ಅ) ಭಯ ಭಕ್ತಿ ಆ) ಸುಖ ಸಂತೋಷ ಇ) ರೋಗ ರುಜಿನ ಈ) ಹತಾಶೆ ಬೇಸರ

2. ವಿಜ್ಞಾನದ ಎಲ್ಲ ಸಿದ್ದಾಂತಗಳು ನಿಯಮಗಳು ಇದರ ಬೆಳಕಿನಲ್ಲಿ ಪುನರಚಿತವಾಗುತ್ತವೆ

ಅ) ಹೊಸ ಸಂಶೋಧನೆ ಆ) ಹೊಸ ನಂಬಿಕೆ ಇ) ಹೊಸ ತಿಳುವಳಿಕೆ ಈ) ಹೊಸ ಬರವಣಿಗೆ

3. "ಜ್ಯೋತಿಷಿಗಳ ಭವಿಷ್ಯವಾಣಿಯು ಓದಲು ತಮಾಷೆಯಾಗಿರುತ್ತದೆ. ಅವು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಇದ್ದು ಒಂದಕ್ಕಿಂತ ಹೆಚ್ಚು ಅರ್ಥವನ್ನು ಕೊಡುತ್ತಿರುತ್ತವೆ." – ಈ ಹೇಳಿಕೆಯು ಕೆಳಗಿನ ಯಾವುದನ್ನು ಸಮರ್ಥಿಸುತ್ತದೆ.

ಅ) ಜ್ಯೋತಿಷ್ಯದ ಮಹತ್ವ ಆ) ಜ್ಯೋತಿಷ್ಯದ ಹೆಚ್ಚುಗಾರಿಕೆ

ಇ) ಜ್ಯೋತಿಷ್ಯದ ಅನಿಶ್ಚಿತತೆ ಈ) ಜ್ಯೋತಿಷ್ಯದ ಪರಿಣಾಮ

4. "ಕೆಟ್ಟುಹೋದ ಗಡಿಯಾರ ಕೂಡ ದಿನದಲ್ಲಿ ಎರಡು ಸಾರಿ ಸರಿಯಾದ ವೇಳೆ ಸೂಚಿಸುತ್ತದೆ." – ಡಾ. ಎಚ್. ನರಸಿಂಹಯ್ಯನವರ ಈ ಮಾತು ಕೆಳಗಿನ ಯಾವ ಆಯ್ಕೆಯನ್ನು ಸಮರ್ಥಿಸುತ್ತದೆ.

ಅ) ಜ್ಯೋತಿಷ್ಯದ ಅಧಿಕೃತತೆಯನ್ನು ಸೂಚಿಸುತ್ತದೆ. ಆ) ಜ್ಯೋತಿಷ್ಯದ ಪ್ರಶ್ನಾತೀತತೆಯನ್ನು ಸೂಚಿಸುತ್ತದೆ.

ಇ) ಜ್ಯೋತಿಷ್ಯದ ಅನಿಶ್ಚಿತತೆಯನ್ನು ಸೂಚಿಸುತ್ತದೆ. ಈ) ಜ್ಯೋತಿಷ್ಯದ ಅರ್ಥಪೂರ್ಣತೆಯನ್ನು ಸೂಚಿಸುತ್ತದೆ.

5. ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪುಗೊಳ್ಳುತ್ತವೆ ?

ಅ) ವಿಜ್ಞಾನದ ಎಲ್ಲಾ ಪ್ರಯೋಗಗಳು, ತಾತ್ಕಾಲಿಕವಾಗಿದ್ದು, ಅಧಿಕಾರಯುಕ್ತವಾಗಿ ಕುರುಡಾಗಿ ರೂಪುಗೊಳ್ಳುತ್ತವೆ.

ಆ) ವಿಜ್ಞಾನದ ಎಲ್ಲಾ ಶಾಖೆಗಳು ಪರಿಪೂರ್ಣತೆಯಲ್ಲಿಯೇ ಆರಂಭವಾಗುತ್ತವೆ.

ಇ) ವಿಜ್ಞಾನದ ಎಲ್ಲ ಸಿದ್ಧಾಂತಗಳು, ನಿಯಮಗಳು ಹೊಸ ಸಂಶೋಧನೆಯ ಬೆಳಕಿನಲ್ಲಿ ಪುನರ್ ರಚಿತವಾಗುತ್ತವೆ.

ಈ) ವಿಧಾನದ ಎಲ್ಲಾ ಪ್ರಯೋಗಗಳು ಖಗೋಳಶಾಸ್ತ್ರದ ಆಧಾರದ ಮೇಲೆ ರೂಪುಗೊಳ್ಳುತ್ತವೆ.

6. ಬುದ್ಧನು 'ವಿನಯ ಪೀಟಿಕಾ" ಗ್ರಂಥದಲ್ಲಿ ಯಾರಿಂದ ದೂರವಿರಬೇಕೆಂದು ಎಚ್ಚರಿಸಿದ್ದಾನೆ?

ಅ) ನಕ್ಷತ್ರಗಳ ಲೆಕ್ಕಾಚಾರದಂತಹ ತಂತ್ರಗಳಿಂದ ಜೀವನ ನಡೆಸುತ್ತಾರೋ ಇವರಿಂದ ದೂರವಿರಬೇಕು.

ಆ) ಒಳಿತು ಕೆಡುಕಗಳ ಬಗ್ಗೆ ಭವಿಷ್ಯ ನುಡಿಯುವಂತವರಿಂದ ದೂರವಿರಬೇಕು.

ಇ) ಶಕುನದ ಆಧಾರದ ಮೇಲೆ ಶುಭ ಅಶುಭವನ್ನು ತಿಳಿಸುವವರಿಂದ ದೂರವಿರಬೇಕು.

ಈ) ಜ್ಯೋತಿಷ್ಯ ಮತ್ತಿತರ ಸಂಗತಿಗಳಿಂದ ದುರ್ಬಲ ಮನಸ್ಸಿನವರಿಂದ ದೂರವಿರಬೇಕು.

7. ಜ್ಯೋತಿಷ್ಯದ ಉಗಮವು ಇಲ್ಲಿ ಕಂಡುಬರುತ್ತದೆ

ಅ) ಶಿಲ್ಪ ಶಾಸ್ತ್ರ ಆ) ಖಗೋಳ ಶಾಸ್ತ್ರ ಇ) ಛಂದಶ್ಯಾಸ್ತ್ರ ಈ) ನಿರುಕ್ತ

8. ಇದು ಹಾಸ್ಯಸ್ಪದ ಸಂಗತಿ

ಅ) ಜ್ಯೋತಿಷ್ಯ ನಂಬುವುದು

ಆ) ಜ್ಯೋತಿಷ್ಯ ನಂಬದಿರುವುದು

ಇ) ಮನುಷ್ಯನ ಎಲ್ಲ ಗುಣಗಳನ್ನು ಗ್ರಹಗಳಿಗೆ ಆರೋಪಿಸದೆ ಇರುವುದು.

ಈ) ಮನುಷ್ಯನ ಎಲ್ಲ ಗುಣಗಳನ್ನು ಗ್ರಹಗಳಿಗೆ ಆರೋಪಿಸುವುದು

9. ಜಾತಕಗಳನ್ನು ಹೇಗೆ ಬರೆಯಲಾಗುತ್ತದೆ?

ಅ) ಜ್ಯೋತಿಷ್ಯದ ಆಧಾರಗಳ ಮೇಲೆ ಆ) ವಿಜ್ಞಾನದ ಆಧಾರಗಳ ಮೇಲೆ

ಇ) ಗಣಿತದ ಆಧಾರಗಳ ಮೇಲೆ ಈ) ಖಗೋಳದ ಆಧಾರಗಳ ಮೇಲೆ

10. ಜ್ಯೋತಿಷಿಗಳ ಭವಿಷ್ಯವಾಣಿ ಓದಲು ಹೀಗಿರುತ್ತದೆ.

ಅ) ದುಃಖದಾಯಕವಾಗಿರುತ್ತದೆ ಆ) ಆನಂದದಾಯಕವಾಗಿರುತ್ತದೆ

ಇ) ತಮಾಷೆಯಾಗಿರುತ್ತದೆ ಈ) ನಿಶ್ಚಿತವಾಗಿರುತ್ತದೆ

11. ಜನ ನಿರಾಶೆ, ಸಮಸ್ಯೆಗಳಲ್ಲಿದ್ದಾಗ ಇವರ ಮೊರೆ ಹೋಗುತ್ತಾರೆ.

ಅ) ಶ್ರೀಮಂತರ ಆ) ಬುದ್ಧಿವಂತರ ಇ) ಜ್ಯೋತಿಷಿಗಳ ಈ) ವೈದ್ಯರ

12. ಜ್ಯೋತಿಷ್ಯ ಮಗ್ಧ ಜನರನ್ನು ಹೇಗೆ ಶೋಷಿಸುತ್ತದೆ ?

ಅ) ಆನಂದದಲ್ಲಿರಿಸಿ ಆ) ದುಃಖದಲ್ಲಿರಿಸಿ ಇ) ಶೋಷಿಸುವುದಿಲ್ಲ ಈ) ಭಯದಲ್ಲಿರಿಸಿ

13. ಮೂಢನಂಬಿಕೆಗಳಿಂದ ಉಂಟಾಗುವ ಅಪಾಯ ಇಂಥದ್ದು.

ಅ) ಸ್ವತಂತ್ರ ಆಲೋಚನೆ ಮತ್ತು ಆತ್ಮವಿಶ್ವಾಸಕ್ಕೆ ಧಕ್ಕೆಯನ್ನು ತರುತ್ತದೆ.

ಆ) ಸ್ವತಂತ್ರ ಆಲೋಚನೆ ಮತ್ತು ಆತ್ಮವಿಶ್ವಾಸಕ್ಕೆ ಧಕ್ಕೆಯನ್ನು ತರುವುದಿಲ್ಲ.

ಇ) ಅತಂತ್ರ ಆಲೋಚನೆ ಮತ್ತು ಆತ್ಮವಿಶ್ವಾಸಕ್ಕೆ ಧಕ್ಕೆಯನ್ನು ತರುತ್ತದೆ.

ಈ) ಯಾವುದೇ ಅಪಾಯ ತರುವುದಿಲ್ಲ.

14. ವಾಯು, ಜಲ ಮಾಲಿನ್ಯಕ್ಕಿಂತ ಯಾವುದು ಹೆಚ್ಚು ಅಪಾಯಕಾರಿಯಾಗಿರುತ್ತದೆ ?

ಅ) ಅತ್ಮವಿಶ್ವಾಸ ಆ) ಅಹಂಕಾರ ಇ) ನಂಬಿಕೆ ಈ) ಮೂಢನಂಬಿಕೆ

15. "ಪ್ರಯೋಗಶಾಲೆಯಲ್ಲಿ ವಿಚಾರವಾದಿಯಾದ ವಿಜ್ಞಾನಿ ಜೀವನದ ಸಮಸ್ಯೆಗಳನ್ನು ಎದುರಿಸುವಾಗ ವಿಚಾರಕ್ಕೆ ಮಂಗಳ ಹಾಡುವುದು ಕಂಡುಬರುತ್ತದೆ" ಈ ಹೇಳಿಕೆಯು ಕೆಳಗಿನ ಯಾವುದಕ್ಕೆ ಪೂರಕವಾಗಿದೆ.

ಅ) ದ್ವಂದ್ವ ವ್ಯಕ್ತಿತ್ವ ಆ) ತಮಾಷೆಯ ವ್ಯಕ್ತಿತ್ವ ಇ) ಸಹಜ ವ್ಯಕ್ತಿತ್ವ ಈ) ದೃಢ ವ್ಯಕ್ತಿತ್ವ

**II. ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪುಗೊಳ್ಳುತ್ತವೆ?
2. ಜ್ಯೋತಿಷ್ಯದ ಪ್ರಕಾರ ಗ್ರಹಗಳೆಷ್ಟು? ಅವುಗಳು ಯಾವುವು?
3. ರಾಹುಕಾಲ, ಗುಳಿಕಕಾಲ, ಯಮಗಂಡಕಾಲಗಳ ಬಗ್ಗೆ ಲೇಖಕರ ಅಭಿಪ್ರಾಯವೇನು?
4. ಬುದ್ಧನು "ವಿನಯ ಪೀಟಿಕಾ" ಗ್ರಂಥದಲ್ಲಿ ಯಾರಿಂದ ದೂರವಿರಬೇಕೆಂದು ಎಚ್ಚರಿಸಿದ್ದಾನೆ?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ರೈಲು ಹೊರಡಲು ಜ್ಯೋತಿಷ್ಯದ ಅನುಮತಿಯನ್ನು ಯಾರೂ ಕೇಳುವುದಿಲ್ಲ
2. ಶೇ.90ಕ್ಕೆ ಹೆಚ್ಚು ಜನರ ಮದುವೆಗಳು ಯಾವುದೇ ಜಾತಕವಿಲ್ಲದೆ ನಡೆಯುತ್ತವೆ
3. ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ
4. ಜ್ಯೋತಿಷ್ಯ ಒಂದು ವಾಣಿಜ್ಯವಾಗಿದೆ
5. ಸಮಾಜದ ಸುಧಾರಣೆ ಶಿಕ್ಷಣದ ಒಂದು ಉದ್ದೇಶ

**IV. ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಪ್ರಕೃತಿಯ ಘಟನೆಗಳು ಆದಿಮಾನವನ ಮನಸ್ಸಿನ ಮೇಲೆ ಉಂಟುಮಾಡಿದ ಪರಿಣಾಮಗಳೇನು?
2. ಜ್ಯೋತಿಷ್ಯ ಏಕೆ ವಿಜ್ಞಾನವಾಗಲಾರದು? ವಿವರಿಸಿ.
3. ಸ್ವಾಮಿ ವಿವೇಕಾನಂದರು ಜ್ಯೋತಿಷ್ಯದ ಬಗ್ಗೆ ತಾಳಿರುವ ಅಭಿಪ್ರಾಯವೇನು?
4. ಶಿಕ್ಷಣದ ಮುಖ್ಯ ಉದ್ದೇಶ ಏನಾಗಬೇಕು?
5. ಜ್ಯೋತಿಷ್ಯವು ಅರ್ಥಪೂರ್ಣವೋ? ಅರ್ಥರಹಿತವೋ? ವಿಶ್ಲೇಷಿಸಿ.

******

# 4. ಶಾಸ್ತ್ರೀ ಮಾಸ್ತರ ಮತ್ತವರ ಮಕ್ಕಳು – ಡಾ.ಚೆನ್ನಣ್ಣ ವಾಲೀಕಾರ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಸೇಂಗಾ ಮಾರುವವನ ದಿನದ ಸಂಪಾದನೆ ಇಷ್ಟು

ಅ) ನಲವತ್ತು– ಐವತ್ತು ರೂಪಾಯಿ ಆ) ಐವತ್ತು – ಅರವತ್ತು ರೂಪಾಯಿ

ಇ) ನೂರು – ಇನ್ನೂರು ರೂಪಾಯಿ ಈ) ನೂರೈವತ್ತು – ಇನ್ನೂರೈವತ್ತು ರೂಪಾಯಿ

2. ಗಾಡಿ ಶಹಬಾದಿಗೆ ಬಂದಾಗ ಸಮಯ ಎಷ್ಟಾಗಿತ್ತು?

ಅ) ರಾತ್ರಿ ಹನ್ನೊಂದು ಆ) ಮಧ್ಯಾಹ್ನ ಹನ್ನೆರಡು

ಇ) ಮುಂಜಾನೆ ಆರು ಈ) ಮಧ್ಯರಾತ್ರಿ ಹನ್ನೆರಡು

3. ಶಾಸ್ತ್ರಿ ಮಾಸ್ತರರ ಹೆಂಡತಿ ಹೆಸರು

ಅ) ಅಂಬವ್ವ ಆ)ಸೀತಾ ಇ) ನಿಂಗಮ್ಮ ಆ) ಅನಸೂಯ

4. ಮಾಸ್ತರರ ಅವಳಿ ಮಕ್ಕಳ ಸಾವು ಹೀಗಾಯಿತು

ಅ) ಕಾರಿಗೆ ಸಿಕ್ಕು ಆಯಿತು ಆ) ಯಾರಿಗೆ ಸಿಕ್ಕುವಾಯಿತು

ಇ) ಬಸ್ಸಿಗೆ ಸಿಕ್ಕು ಆಯಿತು ಈ) ಅನಾರೋಗ್ಯದಿಂದ ಆಯಿತು

5. ಮಾಸ್ತರರಿಗೆ ಇನ್ನೂ ಇಷ್ಟು ವರ್ಷ ಸೇವೆ ಇತ್ತು.

ಅ) ಹದಿನೈದು ವರ್ಷ ಆ) ಇಪ್ಪತ್ತು ವರ್ಷ ಇ) ಐದು ವರ್ಷ ಈ) ಹತ್ತು ವರ್ಷ

6. ಮಾಸ್ತರರು ಮನೆಯ ಮುಂದೆ ಬರೆಸಿ ಹಾಕಿದ ಬೋರ್ಡು ಯಾವುದು ?

ಅ) ಅನಾಥ ಬಾಲಕರಾಶ್ರಮ ಆ) ಅಂಧ ಬಾಲಕರಾಶ್ರಮ ಇ) ವೃದ್ಧಾಶ್ರಮ ಈ) ವಸತಿ ನಿಲಯ

7. ನಿರೂಪಕರನ್ನು ರೂಪಿಸಿದ ಶಿಲ್ಪಿ.

ಅ) ಅಂಬವ್ವ ಆ) ಶಾಸ್ತ್ರಿ ಮಾಸ್ತರರು ಇ) ದೇಶಪಾಂಡೆ ಈ) ಸೂಡಿ

**II. ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ತಾವು ಓದಿದ ಹೈಸ್ಕೂಲ್ ನೆನಪು ಬಂದಾಗ ನಿರೂಪಕರಿಗೆ ಏನನಿಸಿತು?
2. ನಿರೂಪಕರ ಓರೆಕೋರೆಗಳನ್ನು ತಿದ್ದಿದ ಗುರುಗಳು ಯಾರ್ಯಾರು?
3. ನಿರೂಪಕರ ತಂದೆ ಅವರನ್ನು ಯಾರು ಯಾರಿಂದ ಅಗಲಿಸಿ ಊರಿಗೆ ಕರೆತಂದರು?
4. ಪ್ರೈಮರಿ ಶಾಲೆ ಸೇರಿದಾಗ ನಿರೂಪಕರನ್ನು ಅಂಬವ್ವ ಹೇಗೆ ನೋಡಿ ಕೊಳ್ಳುತ್ತಿದ್ದರು?
5. ಮಾಸ್ತರರ ಮಕ್ಕಳ ಶವಯಾತ್ರೆಗೆ ಜನ ಹೇಗೆ ಬಂದಿತ್ತು?
6. ಅವಳಿ ಮಕ್ಕಳ ಸಾವಿನ ನಂತರ ಮಾಸ್ತರ ಮತ್ತು ಅಂಬವ್ವನ ಸ್ಥಿತಿ ಏನಾಯಿತು?
7. ಮಾಸ್ತರರು ಬಾಡಿಗೆ ಮನೆಯನ್ನು ಹೇಗೆ ಖರೀದಿಸಿದ್ದರು?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ನಾನು ಗಡಬಡಿಸಿ ಎದ್ದು ಗಾಡಿ ಹತ್ತಿದೆ
2. ನಾನು ಸಮ್ಮೋಹನಕ್ಕೊಳಗಾದೆ
3. ನೆನಪುಗಳು ಮಳೆಯಂತೆ ಸುರಿಯತೊಡಗಿದವು
4. ನಮ್ಮ ಪಾಲಿಗೆ ನಿತ್ಯ ಹಬ್ಬವಾಗಿರುತ್ತಿತ್ತು
5. ನಾಲ್ಕು ಗೋಡೆಗಳ ಕೋಟೆ ಬಂಧನದಲ್ಲಿ ಬಂಧಿಸಿದರು

6. ಅಕ್ಷರಮಳೆ ಧಾರಾಕಾರಾಗಿ ಸುರಿಯ ತೊಡಗಿತು
7. ಅಲ್ಲಿ ಅಳದವರೆ ಪಾಪಿಗಳಾಗಿದ್ದರು
8. ನನ್ನ ಹಿರೀಮಗ ಬಂದಾ, ನನ್ನ ಹಿರೀಮಗ ಬಂದಾ

**IV. ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ನಿರೂಪಕರ ಬಯಲು ಶಾಲೆಯ ಅನುಭವ ಮತ್ತು ನಂತರದ ಶಾಲೆಯ ಅನುಭವಗಳು ಹೇಗಿದ್ದವು?
2. ಮಾಸ್ತರು ಮತ್ತು ಅಂಬವ್ವರ ಪ್ರೀತಿ ಕಡಲಲ್ಲಿ ಕತೆಗಾರರ ಬಾಲ್ಯ ಹೇಗೆ ಈ ಕಳೆಯಿತು?
3. ಅವಳಿ ಮಕ್ಕಳ ಸಾವು ಮಾಸ್ತರರ ಬದುಕನ್ನೇ ಬದಲಾಯಿಸಿದ್ದು ಹೇಗೆ ವಿವರಿಸಿ.
4. 'ಅನಾಥ ಬಾಲಕರಾಶ್ರಮ'ವನ್ನು ಶಾಸ್ತ್ರಿಮಾಸ್ತರು ಹೇಗೆ ಪ್ರಾರಂಭಿಸಿದರು? ಅದರ ಉದ್ದೇಶವೇನು?
5. ಬದಲಾದ ಶಹಾಬಾದನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ?
6. ಶಾಸ್ತ್ರಿಮಾಸ್ತರರ ವ್ಯಕ್ತಿತ್ವವನ್ನು ನಿರೂಪಿಸಿ.

******

# 5. ಬುದ್ಧ ಬಿಸಿಲೂರಿನವನು – ನಾಗತಿಹಳ್ಳಿ ಚಂದ್ರಶೇಖರ್

**I.** **ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಗೌತಮ ಜನಿಸಿದ್ದು ಎಲ್ಲಿ ?

ಅ) ಕಪಿಲವಸ್ತು ಆ) ಲುಂಬಿನಿ ಉದ್ಯಾನವನ ಇ) ನೇಪಾಳ ಈ) ದೇವದಾಹ

2. ನೇಪಾಳದ ವಿಮಾನ ಹೇಗಿತ್ತು ?

ಅ) ಮೆಟಡರ್ ವ್ಯಾನಿಗೆ ಎರಡು ರೆಕ್ಕೆ ಜೋಡಿಸಿದ ಹಾಗಿತ್ತು.

ಆ) ಬಹಳ ದೊಡ್ಡದಾಗಿತ್ತು.

ಇ) ಶ್ರೀಸಾಮನ್ಯರಿಗೆ ಕೈಗೆಟುಕುತ್ತಿರಲಿಲ್ಲ.

ಈ) ಮೆಟಡರ್ ವ್ಯಾನಿಗೆ ಎರಡು ಚಕ್ರ ಜೋಡಿಸಿದ ಹಾಗಿತ್ತು.

3. ಬುದ್ಧನಿಗೆ ಜ್ಞಾನೋದಯವಾದ ದಿನ ಇದು

ಅ) ಚೈತ್ರಶುದ್ಧ ಪೂರ್ಣಿಮೆ ಆ) ವೈಶಾಖ ಶುದ್ಧ ಪೂರ್ಣಿಮೆ

ಇ) ಚೈತ್ರ ಶುದ್ಧ ಅಮವಾಸ್ಯೆ ಈ) ವೈಶಾಖ ಶುದ್ಧ ಅಮವಾಸ್ಯೆ

4. ಮಾಯಾದೇವಿ ದೇವಾಲಯ ಹೀಗಿದೆ

ಅ) ನೀಲಿ ವರ್ಣದಿಂದ ಚೌಕಾಕಾರದಲ್ಲಿದೆ ಆ) ಶ್ವೇತ ವರ್ಣದಿಂದ ವೃತ್ತಾಕಾರದಲ್ಲಿದೆ

ಇ) ಶ್ವೇತ ವರ್ಣದಿಂದ ಚೌಕಾಕಾರದಲ್ಲಿದೆ ಈ) ನೀಲಿ ವರ್ಣದಿಂದ ವೃತ್ತಾಕಾರದಲ್ಲಿದೆ

5. ಅಶೋಕನ ಸ್ತಂಭ ಎಲ್ಲಿದೆ

ಅ) ಪುಷ್ಕರಣಿಯ ಉತ್ತರ ಬದಿಯಲ್ಲಿದೆ. ಆ) ಪುಷ್ಕರಣಿಯ ದಕ್ಷಿಣ ಬದಿಯಲ್ಲಿದೆ.

ಇ) ಪುಷ್ಕರಣಿಯ ಪೂರ್ವ ಬದಿಯಲ್ಲಿದೆ. ಈ) ಪುಷ್ಕರಣಿಯ ಪಶ್ಚಿಮ ಬದಿಯಲ್ಲಿದೆ.

6. ಇವರ ಪ್ರವಾಸಾನುಭವದಲ್ಲಿ ಲುಂಬಿನಿಯ ಬಗೆಗೆ ವಿವರಗಳಿವೆ

ಅ) ಮೆಗಾಸ್ತನಿಸ್ ಆ) ಕುವೆಂಪು ಇ) ಮೊಜಾರ್ಟ್ ಈ) ಹುಯೆನ್ ತ್ಸಾಂಗ್

7. ಕಪಿಲವಸ್ತುವಿನ ಇಂದಿನ ಹೆಸರೇನು ?

ಅ) ಲಾರ್ ಕೋಟ್ ಆ) ದೇವದಾಹ ಇ) ಪೋರಬಂದರ್ ಈ) ಲುಂಬಿನಿ

8. ಅರಮನೆಯ ಗೈಡ್ ಲೇಖಕರನ್ನು ಏನೆಂದು ಕೇಳಿದನು ?

ಅ) ಕಾಫಿಗೇನಾದ್ರೂ ಕೊಡಿ ಎಂದು ಆ) ನೀವು ಯಾವ ದೇಶದವರು ಎಂದು

ಇ) ಅರಮನೆ ಹೇಗಿತ್ತು ಎಂದು ಈ) ಏನು ಕೇಳಲಿಲ್ಲ

9. ಲೇಖಕರ ಮನಸ್ಸಿನಲ್ಲಿ ಗಾಢವಾಗಿ ಅಚ್ಚೊತ್ತಿದ್ದು ಇದು

ಅ) ಗೌತಮನಿಲ್ಲದ ಅರಮನೆ ಆ) ಸಣ್ಣ ವಿಮಾನ

ಇ) ಮಕ್ಕಳ ವಿನೋದ ಈ) ಮಾಯಾದೇವಿ ದೇವಾಲಯ

**II.** **ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ಮಹಾನ್ ವ್ಯಕ್ತಿಗಳ ದರ್ಶನ ಅರ್ಥವಾಗುವುದು ಹೇಗೆ?

2. ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ?

3. ಗೌತಮನ ಮನೋಲೋಕವನ್ನು ನಿರಂತರವಾಗಿ ದಹಿಸಿದ ಪ್ರಶ್ನೆಗಳು ಯಾವುವು?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಈ ಬಿಸಿಲೇ ಗೌತಮನನ್ನು ಸನ್ಯಾಸಕ್ಕೆ ದೂಡಿರಬೇಕು
2. ಇನ್ನು ಮುಂದೆ ಅನಗತ್ಯವಾಗಿ ಕೋಪಿಸಿಕೊಳ್ಳುವುದಿಲ್ಲ
3. ಗವಾಕ್ಷಿಯಿಂದ ಮಗನನ್ನು ಕೂಗಿರಬಹುದು
4. ಬುದ್ಧನ ಇಲ್ಲದ ಅರಮನೆಗೊಬ್ಬ ಗಾರ್ಡು!

**IV. ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಲುಂಬಿನಿ ಪಯಣದ ಅನುಭವಗಳೇನು?
2. ಗೌತಮನ ಮನಸ್ಸಿನ ಉರಿ ಯಾವ ಬಗೆಯದೆಂದು ಲೇಖಕರು ಊಹಿಸಿದ್ದಾರೆ?
3. ಮಾಯಾದೇವಿ ದೇವಾಲಯದ ಪರಿಸರ ಹೇಗಿತ್ತು?
4. ಕಪಿಲವಸ್ತುವಿನಲ್ಲಿ ಲೇಖಕರ ನಿರಾಸೆಗೆ ಕಾರಣವೇನು?
5. ಇಟ್ಟಿಗೆ ಕಟ್ಟಡಗಳ ಮೇಲೆ ಲೇಖಕರು ಏನೇನು ಚರ್ಚಿಸಿದರು?
6. ಕಪಿಲವಸ್ತುವಿನ ಉದ್ಯಾನವನದ ಬಗ್ಗೆ ಲೇಖಕರು ನೀಡುವ ವಿವರಗಳನ್ನು ಸಂಗ್ರಹಿಸಿ.

******

# 6. ಮಹಾತ್ಮರ ಗುರು – ಮುಗಳವಳ್ಳಿ ಕೇಶವ ಧರಣಿ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಶೋಷಿತ ಜನಾಂಗದವರ ಬಾಳಿನಲ್ಲಿ ನೈತಿಕ ಧೈರ್ಯದ ನಂದಾದೀಪ ಹಚ್ಚಿದವರು ಇವರು

ಅ) ಶ್ರೀಮಂತರು ಆ) ಕುದ್ಮುಲ್ ರಂಗರಾವ್

ಇ) ರಾಜಗೋಪಾಲಾಚಾರ್ಯ ಈ) ಬ್ರಿಟೀಷರು

2. ಬಡವರ ವಕೀಲರೆಂದು ಪ್ರಸಿದ್ಧರಾದವರು ಇವರು

ಅ) ಕುದ್ಮುಲ್ ರಂಗರಾವ್ ಆ) ಬೆಂದೂರು ಬಾಬು

ಇ) ಗೋವಿಂದ ಮಾಸ್ತರ ಈ) ಅಂಗರ ಮಾಸ್ತರ

3. ರಂಗರಾವ್ ಸ್ಥಾಪಿಸಿದ ಸಂಸ್ಥೆಯ ಹೆಸರೇನು?

ಅ) ಎ.ಡಿ.ಎಸ್. ಸಂಸ್ಥೆ ಆ) ಡಿ. ಸಿ. ಸಿ ಸಂಸ್ಥೆ ಇ) ಎ. ಸಿ. ಎಂ. ಸಂಸ್ಥೆ ಈ) ಡಿ.ಸಿ.ಎಂ. ಸಂಸ್ಥೆ

4. ರಂಗರಾವ್ ಕೈಗಾರಿಕಾ ತರಭೇತಿ ಶಾಲೆ ಇಲ್ಲಿ ಸ್ಥಾಪಿಸಿದರು

ಅ) ಶೇಡಿಗುಡ್ಡೆ ಆ) ಬನ್ನಂಜೆ ಇ) ಬಾಬುಗುಡ್ಡೆ ಈ) ಕಂಕನಾಡಿ

5. ರಂಗರಾವ್ ಕೋರ್ಟಹಿಲ್ನಲ್ಲಿ ಯಾವ ಸಂಘ ಸ್ಥಾಪಿಸಿದರು?

ಅ) ಪಂಚಮ ಶಾಲಾ ಸಂಘ ಆ) ಆದಿ ದ್ರಾವಿಡ ಸಹಕಾರ ಸಂಘ

ಇ) ಡಿ.ಸಿ.ಎಂ ಸಂಘ ಈ) ಡಿ. ಸಿ. ಸಿ ಸಂಘ

6. ಸರ್ಕಾರ ರಂಗರಾವ್ ಅವರಿಗೆ ನೀಡಿದ ಬಿರುದು ಯಾವುದು?

ಅ) ರಾವ್ ಸಾಹೇಬ್ ಆ) ಕರ್ನಾಟಕ ರತ್ನ ಇ) ಪದ್ಮಶ್ರೀ ಈ) ರಾವ್ ಬಹದ್ದೂರ್

**II. ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ಸಾಮಾಜಿಕ ಸುಧಾರಣಾ ಚಳವಳಿಯ ಪ್ರಮುಖ ನಾಯಕರನ್ನು ಹೆಸರಿಸಿ.
2. ಮಂಗಳೂರು ಜಿಲ್ಲಾ ಕೋರ್ಟ್‌ನಲ್ಲಿ ನಡೆದ ಘಟನೆ ಯಾವುದು?
3. ರಂಗರಾವ್ ಸಮಾಧಿಯ ಮೇಲೆ ಬರೆದ ಹೇಳಿಕೆ ಯಾವುದು?
4. ರಂಗರಾವ್ ಪ್ರಾರಂಭಿಸಿದ್ದ ಹೆಣ್ಣು ಮಕ್ಕಳ ಹಾಸ್ಟೆಲ್‌ನಿಂದ ಉಂಟಾದ ಪ್ರಯೋಜನವೇನು?
5. ರಂಗರಾವ್ ಅಂತರ್ಜಾತಿ ವಿವಾಹಕ್ಕೆ ನೀಡಿದ ಪ್ರೋತ್ಸಾಹ ಗಾಂಧಿ ಮೇಲೆ ಬೀರಿದ ಪ್ರಭಾವ ಏನು?
6. ರಂಗರಾವ್ ರಾಜಕೀಯ ಮೀಸಲಾತಿಗಾಗಿ ಹೇಗೆ ಪ್ರಯತ್ನಿಸಿದರು?
7. ಡಿ.ಸಿ.ಎಂ. ಸಂಸ್ಥೆಗೆ ಯಾರು ಯಾರು ಭೇಟಿ ನೀಡಿದ್ದರು?
8. ರಂಗರಾವ್ ತಮ್ಮ ಉಯಿಲಿನಲ್ಲಿ ಏನು ಬರೆದಿದ್ದರು?
9. ಗಾಂಧೀಜಿಯವರು ರಂಗರಾವ್ ಬಗ್ಗೆ ಏನು ಹೇಳಿದರು?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಶೋಷಿತ ಜನಾಂಗದವರ ಬಾಳಿನಲ್ಲಿ ನೈತಿಕ ಧೈರ್ಯದ ನಂದಾದೀಪ
2. ಪ್ರಗತಿಗೆ ವಿದ್ಯೆಯೇ ಮೂಲ
3. ಜೀತದ ಕೆಲಸ ಯಾರು ಮಾಡುತ್ತಾರೆ?
4. ಅನ್ಯರ ಮನೆಯ ಅನ್ನಕ್ಕಿಂತ ಆತ್ಮಗೌರವದ ಗಂಜಿ ಊಟವೇ ದೊಡ್ಡದು

5. ರಸ್ತೆಯಿಂದ ಏಳುವ ಧೂಳು ನನ್ನ ತಲೆಗೆ ತಾಗಬೇಕು
6. ರಂಗರಾವ್ ಅವರಿಂದ ಸಾರ್ವಜನಿಕ ಸೇವಾ ನಿಷ್ಠೆಯನ್ನು ಮನಗಾಣಿಸಿಕೊಂಡೆ

**IV. ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ರಂಗರಾವ್ ಅಸ್ಪೃಶ್ಯರ ಶಿಕ್ಷಣಕ್ಕಾಗಿ ನೀಡಿದ ಕೊಡುಗೆಯೇನು? ವಿವರಿಸಿ.
2. ರಂಗರಾವ್ ಅಸ್ಪೃಶ್ಯರನ್ನು ಶಿಕ್ಷಣ ಪಡೆಯಲು ಮನ ಒಲಿಸಿದ ಬಗೆಯನ್ನು ತಿಳಿಸಿ.
3. ರಂಗರಾವ್ ಅವರ ಸಾಮಾಜಿಕ ಸುಧಾರಣೆಯ ಕೊಡುಗೆಗಳೇನು?

******

# 7. ನಿರಾಕರಣೆ – ಡಾ. ವೀಣಾಶಾಂತೇಶ್ವರ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ರಕ್ಷಾ ಕರಂಡವು ಯಾರ ಕೈಯಿಂದ ಕೆಳಗೆ ಬಿದ್ದಿತು?

ಅ) ದುಷ್ಯಂತ ಆ) ಶಾಕುಂತಲೆ ಇ) ಸುವ್ರತೆ ಈ) ಭರತ

2. ಭರತನ ತಂದೆಯ ಹೆಸರು

ಅ) ಮಾರೀಚ ಆ) ವಿಶ್ವಾಮಿತ್ರ ಇ) ದುಷ್ಯಂತ ಈ) ಪಾಂಡು

3. ಶಕುಂತಲೆಯ ತಾಯಿಯ ಹೆಸರೇನು?

ಅ) ಸುವ್ರತೆ ಆ) ಮೇನಕೆ ಇ) ಸಾನುಮತಿ ಈ) ವಸುಮತಿ

4. ಯಾರ ಶ್ರೇಯಸ್ಸಿಗಾಗಿ ಶಕುಂತಲೆ ಅರಮನೆಗೆ ಬಂದಿದ್ದಾಳೆ?

ಅ) ತನ್ನ ಆ) ಭರತನ ಇ) ಪೂಜ್ಯ ಮಾರೀಚರ ಈ) ದುಷ್ಯಂತನ

5. ಶಕುಂತಲೆಯ ಅಂತಃಪುರದಿಂದ ದುಷ್ಯಂತ ಹೊರ ನಡೆದದ್ದು ಹೀಗೆ

ಅ) ಬೇಗ ಬೇಗನೆ ಆ) ಭಾರವಾದ ಹೆಜ್ಜೆಗಳನ್ನಿಡುತ್ತ ನಿಧಾನವಾಗಿ

ಇ) ಸಂತೋಷದಿಂದ ಈ) ಶಕುಂತಲೆ ಜೊತೆಗೆ

**II. ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ಆರ್ಯ ಪುತ್ರ ಬಂದಿದ್ದಾನೆ ಎಂದಾಗ ಶಕುಂತಲೆಯ ಪ್ರತಿಕ್ರಿಯೆ ಏನು?
2. ಅಪರಾಜಿತಾ ಬಳ್ಳಿಯ ಗುಣ ಯಾವುದು?
3. ಶಕುಂತಲೆ ತನ್ನ ಬದುಕು ಏನಾಗಿದೆ ಎಂದು ಯೋಚಿಸುತ್ತಾಳೆ?
4. ಶಕುಂತಲೆ ಕಂಚಿನ ಧ್ವನಿಯಿಂದ ದುಷ್ಯಂತನಿಗೆ ಹೇಳಿದ್ದೇನು?
5. ಅರಮನೆಗೆ ಯಾವ ಕಾರಣಕ್ಕಾಗಿ ಬಂದಿದ್ದೆನೆಂದು ಶಕುಂತಲೆ ಹೇಳುತ್ತಾಳೆ?
6. ದುಷ್ಯಂತರಾಜನು ಶಕುಂತಲೆಯ ಅಂತಃಪುರದಿಂದ ಹೊರ ನಡೆದಾಗ ಆತನ ಮನಃಸ್ಥಿತಿ ಹೇಗಿತ್ತು?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ತಾನು ಅನುಭವಿಸಿದ ಯಾತನೆಗೆ ಎಣೆಯುಂಟೆ?
2. ನಾನು ಪಶ್ಚಾತ್ತಾಪದ ಬೆಂಕಿಯಲ್ಲಿ ಬೆಂದಿರುವೆ
3. ನಮಗಿದು ಅಭ್ಯುದಯ ಕಾಲ, ಮಹಾಸುದಿನ
4. "ಅಮ್ಮಾ, ಈತ ನಿಜವಾಗಿಯೂ ಮಹಾರಾಜ ದುಷ್ಯಂತನೇ? ಈತನೇ ನನ್ನ ತಂದೆಯೆ?"
5. ನಾನು ತಾಯಿಯ ಕರ್ತವ್ಯ ನಿರ್ವಹಿಸಲೇಬೇಕು?
6. "ನೀನಿನ್ನೂ ನನ್ನನ್ನು ಕ್ಷಮಿಸಲಿಲ್ಲವೇ?"
7. ಹೆಣ್ಣಾಗಿ ನಾನು ಆತ್ಮಸಾಕ್ಷಿಗೆ ವಿರುದ್ಧವಾಗಿ ವರ್ತಿಸಲಾರೆ

**IV. ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಶಕುಂತಲೆ ತನ್ನ ಬದುಕನ್ನು ಅರ್ಥೈಸಿಕೊಂಡದ್ದು ಹೇಗೆ? ತಿಳಿಸಿ.
2. ದುಷ್ಯಂತ ಮತ್ತು ಶಕುಂತಲೆ ನಡುವೆ ಅಂತಃಪುರದಲ್ಲಿ ನಡೆದ ಮಾತುಗಳನ್ನು ವಿವರಿಸಿ.

3. ದುಷ್ಯಂತನನ್ನು ನಿರಾಕರಿಸಲು ಶಕುಂತಲೆ ಕೊಡುವ ಕಾರಣಗಳನ್ನು ತಿಳಿಸಿ.
4. ನಿರಾಕರಣೆ ಕತೆಯಲ್ಲಿ ಬರುವ ಶಕುಂತಲೆ ವ್ಯಕ್ತಿತ್ವವನ್ನು ವಿವರಿಸಿ.
5. ಪುರುಷ ಸಮಾಜದ ಬಗ್ಗೆ ಶಕುಂತಲೆಯ ನಿಲುವೇನು?

*****

# 8. ಕೃಷಿಸಂಸ್ಕೃತಿ ಮತ್ತು ಜಾಗತೀಕರಣ – ಸಿ.ಎಚ್.ಹನುಮಂತರಾಯ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಲೇಖಕರು ಸಿಪಾಯಿ ದಂಗೆಯನ್ನು ಏನೆಂದು ಕರೆಯುತ್ತಾರೆ?
ಅ) ಕಾರ್ಮಿಕರ ದಂಗೆ ಆ) ದಲಿತರ ದಂಗೆ ಇ) ರೈತರ ದಂಗೆ ಈ) ಬಡವರ ದಂಗೆ

2. ರೈತರು ಈ ರೂಪದಲ್ಲಿ ತೆರಿಗೆಯನ್ನು ಪಾವತಿಸಬೇಕಾಯಿತು.
ಅ) ಹಣದ ಆ) ಧಾನ್ಯದ ಇ) ಶ್ರಮದ ಈ) ಕೂಲಿ

3. ಬ್ರಿಟಿಷ್ ಸರ್ಕಾರಕ್ಕೆ ತೆರಿಗೆ ಕಟ್ಟಬಾರದೆಂದು ಯಾರು ಹೇಳಿದರು?
ಅ) ಜವಹರಲಾಲ್ ನೆಹರೂ ಆ) ಬಾಲಗಂಗಾಧರ ತಿಲಕ್
ಇ) ಮಹಾತ್ಮ ಗಾಂಧಿ ಈ) ಸರೋಜಿನಿ ನಾಯ್ಡು

4. ರೈತರ ಬದಲಿಗೆ ಸ್ವಾತಂತ್ರ್ಯವು ಯಾರ ಕೈಗೆ ಸಿಕ್ಕಿತು?
ಅ) ಬಂಡವಾಳಶಾಹಿ ಆ) ಅಧಿಕಾರಶಾಹಿ ಇ) ಜಮೀನ್ದಾರರಿಗೆ ಈ) ರಾಜಕಾರಣಿಗಳಿಗೆ

5. ಲೇಖಕರ ದೃಷ್ಟಿಯಲ್ಲಿ ಹಸಿರು ಕ್ರಾಂತಿಯ ಪರಿಣಾಮ ಇದಕ್ಕೆ ಕಾರಣವಾಯಿತು.
ಅ) ಶ್ರೀಮಂತ ರೈತರ ಉದಯ ಆ) ಸರ್ವೋದಯ
ಇ) ಬಡ ರೈತರ ಉದಯ ಈ) ಎಲ್ಲಾ ರೈತರ ಏಳ್ಗೆ

6. ಎಪ್ಪತ್ತರ ದಶಕದಲ್ಲಿ ಭುಗಿಲೆದ್ದ ಚಳವಳಿ.
ಅ) ಬಡವರ ಚಳವಳಿ ಆ) ಕಾರ್ಮಿಕರ ಚಳವಳಿ ಇ) ರೈತ ಚಳವಳಿ ಈ) ವಿದ್ಯಾರ್ಥಿ ಚಳವಳಿ

7. ಜಾಗತಿಕ ಯುದ್ಧಾನಂತರ ವಸಾಹತು ದೇಶಗಳಲ್ಲಿ ಈ ಚಳವಳಿ ಹುಟ್ಟಿಕೊಂಡಿತು.
ಅ) ದೇಶಿಯ ವಿಮೋಚನಾ ಚಳವಳಿ ಆ) ರಾಜ್ಯ ವಿಮೋಚನಾ ಚಳವಳಿ
ಇ) ಪರಿಸರ ಚಳವಳಿ ಈ) ಚಿಪ್ಕೋ ಚಳವಳಿ

8. ಜಾಗತಿಕ ಉತ್ಪನ್ನಗಳ ಗುಣ ನಿಯಂತ್ರಣದ ಸೋಗನ್ನು ಹಾಕಿಕೊಂಡು ಸಾಮ್ರಾಜ್ಯಶಾಹಿ ಈ ಕಾನೂನು ತಂದಿತು.
ಅ) ಗ್ಯಾಟ್ ಒಪ್ಪಂದ ಆ) ಪೇಟೆಂಟ್ ಒಪ್ಪಂದ
ಇ) ಶರಿಯತ್ ಕಾನೂನು ಈ) ಹಿಂದೂ ಪಿನೆಲ್ ಕೋಡ್

9. ರಾಜ್ಯ ಭೂಸುಧಾರಣಾ ಕಾಯ್ದೆ ಪ್ರಕಾರ ರೈತ ಅಥವಾ ರೈತ ಕೂಲಿಕಾರರಲ್ಲದವರು ಇದನ್ನು ಖರೀದಿಸುವಂತಿಲ್ಲ.
ಅ) ನಿವೇಶನ ಆ) ಕಟ್ಟಡ ಇ) ಕೃಷಿ ಜಾಮೀನು ಈ) ಅರಣ್ಯ ಭೂಮಿ

10. ಜಂಕ್ ಫುಡ್ ಹೋಟೆಲ್‌ಗಳೆಂದು ಹೀಯಾಳಿಸಿದ್ದು.
ಅ) ಜರ್ಮನ್ನರು ಆ) ರಷ್ಯನ್ನರು ಇ) ಅಮೇರಿಕನ್ನರು ಈ) ಆಂಗ್ಲರು

11. ಬ್ರಿಟಿಷರು ತಂದ ಹೊಸ ನಮೂನೆಯ ಜಮೀನ್ದಾರಿ ಪದ್ಧತಿಯಿಂದ ರೈತರು ಹಣದ ರೂಪದಲ್ಲಿ ತೆರಿಗೆ ಪಾವತಿಸಬೇಕಾಯಿತು. ಬೆಳೆ ಬೆಳೆಯಲಿ, ಬೆಳೆಯಾಗದಿರಲಿ ತೆರಿಗೆ ಕಡ್ಡಾಯವಾಯಿತು, ಇದರಿಂದ
ಅ) ಜಮೀನ್ದಾರರಿಗೆ ಅನಾನುಕೂಲ ಆ) ಶ್ರೀಮಂತರಿಗೆ ಅನಾನುಕೂಲ
ಇ) ರೈತರಿಗೆ ಅನಾನುಕೂಲ ಈ) ಬ್ರಿಟಿಷರಿಗೆ ಅನಾನುಕೂಲ

**II.** **ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ರೈತರನ್ನು ಶೋಷಣೆ ಮಾಡಿದವರು ಯಾರು?
2. ರೈತ ಚಳವಳಿ ಎಲ್ಲೆಲ್ಲಿ ನಡೆದವು?
3. ಸಾಲ ಕೇಳಲು ಹೋದ ಬಡರಾಷ್ಟ್ರಗಳ ಮೇಲೆ ವಿಧಿಸಿದ ನಿರ್ಬಂಧಗಳಾವುವು?
4. ಕೃಷಿ ಜಮೀನನ್ನು ಯಾರು ಖರೀದಿಸುವಂತಿಲ್ಲ?
5. ರಾಸಾಯನಿಕಗಳನ್ನು ತಿಂದು ಬೆಳೆಯುವ ಪ್ರಾಣಿಗಳಿಗೆ ಯಾವ ರೋಗಗಳು ಬರುತ್ತವೆ?

**III.** **ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಬೆಳೆಯಲಿ ಬೆಳೆಯದಿರಲಿ ತೆರಿಗೆ ಕಡ್ಡಾಯವಾಯಿತು
2. ಶವಗಳನ್ನು ನಾಯಿ ನರಿಗಳು ತಿನ್ನುತ್ತಿದ್ದವು
3. ಸ್ವಾತಂತ್ರ್ಯಕ್ಕಾಗಿ ಸೆಣಸಿದ ಸಾಮಾನ್ಯ ರೈತರ ಬದುಕು ದುಸ್ತರವಾಯಿತು
4. ರೋಗ ನಿರೋಧಕ ಶಕ್ತಿಯೇ ಇರಲಿಲ್ಲ
5. ಹೋಟೆಲ್‌ಗಳು ಆರೋಗ್ಯ ಪ್ರಿಯರ ತಿರಸ್ಕಾರಕ್ಕೆ ಗುರಿಯಾಗಿದ್ದವು

**IV.** **ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಸಿಪಾಯಿ ದಂಗೆಯನ್ನು ರೈತರ ದಂಗೆಯೆಂದು ಲೇಖಕರು ಏಕೆ ಕರೆದಿದ್ದಾರೆ?
2. ಹತ್ತೊಂಭತ್ತನೆಯ ಶತಮಾನದಲ್ಲುಂಟಾದ ಬರದ ಪರಿಣಾಮಗಳೇನು?
3. ರೈತ ಚಳುವಳಿಯ ಬಗ್ಗೆ ಬರೆಯಿರಿ.
4. ಭೂಸುಧಾರಣಾ ಕಾಯ್ದೆ ಎಂದರೇನು? ಅದರ ಪರಿಣಾಮಗಳೇನು?
5. ನಮ್ಮ ಆರೋಗ್ಯದ ಮೇಲೆ ವಿದೇಶಿ ಹೋಟೆಲ್‌ಗಳು ನಡೆಸಿದ ದಾಳಿಗಳೇನು?

******

# 9. ಚತುರನ ಚಾತುರ್ಯ – ಯಾದವ ಕವಿ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ನಾಪಿತನ ಗ್ರಾಮಕ್ಕೆ ಮಹಾದೇವನ ಮಹಾಕ್ಷೇತ್ರ ಎಷ್ಟು ದೂರದಲ್ಲಿತ್ತು?

ಅ) ಮೂರು ಯೋಜನೆ ಆ) ನಾಲ್ಕು ಯೋಜನೆ ಇ) ಮೂರು ಗಾವುದ ಈ) ನಾಲ್ಕು ಗಾವುದ

2. ಹುಲಿ ಕಾಡಿನಲ್ಲಿ ಇವನಿಗ ಎದುರಾಗಿ ಬಂದಿತು.

ಅ) ವಿಪು ಆ) ನಾಪಿತ ಇ) ಬಾಹ್ಮಣ ಈ) ದ್ವಿಜ

3. ಮಹೇಂದ್ರನು ಕೈಗೊಂಡ ಯಜ್ಞ.

ಅ) ಪುತ್ರಕಾಮೇಷ್ಟಿ ಯಾಗ ಆ) ಅಧ್ವಮೇದ ಯಾಗ

ಇ) ವ್ಯಾಘ್ರಯಜ್ಞ ಈ) ರಾಜಸೂಯ ಯಾಗ

4. ನಾಪಿತನ ಹೇಳಿಕೆಯಂತೆ ಭೂಮಿಗೆ ಬಂದ ಗಂಧರ್ವರು.

ಅ) ನಾಲ್ಕು ಜನ ಆ) ಐದು ಜನ ಇ) ಆರು ಜನ ಈ) ಏಳು ಜನ

5. ಹುಲಿ ಕನ್ನಡಿಯಲ್ಲಿ ನೋಡಿದ್ದು.

ಅ) ನಾಪಿತನ ಬಿಂಬ ಆ) ತನ್ನ ಪ್ರತಿಬಿಂಬ ಇ) ಮಹೇಂದ್ರನ ಬಿಂಬ ಈ) ನರಿಯ ಬಿಂಬ

6. ಹುಲಿಯು ನಾಪಿತನಿಗೆ ಏನನ್ನು ನೀಡುತ್ತೇನೆ ಎಂದಿತು?

ಅ) ರತ್ನಭೂಷಣ ದ್ರವ್ಯ ಆ) ಸಿಂಹಾಸನ ಇ) ರಾಜ್ಯಪದವಿ ಈ) ಗಣಪದವಿ

7. ನಾಪಿತನು ತಂದ ದ್ರವ್ಯದಲ್ಲಿ ವಿಪ್ರನಿಗೆ ಕೊಟ್ಟದ್ದು.

ಅ) ಕಾಲುಭಾಗ ಆ) ಅರ್ಧಭಾಗ ಇ) ಮುಕ್ಕಾಲುಭಾಗ ಈ) ಪೂರ್ಣಭಾಗ

8. ಹುಲಿಯ ಹಿಂಡನ್ನು ಕಂಡು ಹೆದರಿದ ನಾಪಿತ ಮತ್ತು ವಿಪ್ರರು ಅಡಗಿಕೊಂಡದ್ದು ಎಲ್ಲಿ?

ಅ) ಮರದ ಮೇಲೆ ಆ) ಬಂಡೆಯ ಮೇಲೆ ಇ) ಬೆಟ್ಟದ ಮೇಲೆ ಈ) ಕೋಟೆಯ ಮೇಲೆ

9. ವಿಪ್ರನು ಮರದಿಂದ ಬಿದ್ದದ್ದು.

ಅ) ವ್ಯಾಘ್ರಗಳ ಮಧ್ಯೆ ಆ) ಸಿಂಹಗಳ ಮಧ್ಯೆ ಇ) ಜನಗಳ ಮಧ್ಯೆ ಈ) ಕರಡಿಗಳ ಮಧ್ಯೆ

10. ನರಿಗೆ ಇದಕ್ಕೆ ಆಶ್ಚರ್ಯ ಉಂಟಾಯಿತು.

ಅ) ಪಲಾಯನ ಮಾಡುವ ನಾಪಿತನ ಕಂಡು ಆ) ಪಲಾಯನ ಮಾಡುವ ಹುಲಿಯ ಕಂಡು

ಇ) ಪಲಾಯನ ಮಾಡುವ ಬ್ರಾಹ್ಮಣನ ಕಂಡು ಈ) ಪಲಾಯನ ಮಾಡುವ ವಿಪ್ರನ ಕಂಡು

11. ಅರಣ್ಯ ಜಂತುಗಳಲ್ಲಿ ಬುದ್ಧಿಶಾಲಿಯಾದ ಪ್ರಾಣಿ ಯಾವುದು?

ಅ) ಹುಲಿ ಆ) ನರಿ ಇ) ಸಿಂಹ ಈ) ಕರಡಿ

12. ನರಿ ಇದರ ಹೊಡೆತಕ್ಕೆ ಪ್ರಾಣ ಬಿಟ್ಟಿತು.

ಅ) ಕಲ್ಲಿನ ಹೊಡೆತಕ್ಕೆ ಆ) ದೊಣ್ಣೆಯ ಹೊಡೆತಕ್ಕೆ

ಇ) ಗುಂಡಿನ ಹೊಡೆತಕ್ಕೆ ಈ) ಕೋಲಿನ ಹೊಡೆತಕ್ಕೆ

**II. ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ಮಹಾದೇವನ ಉತ್ಸವಕ್ಕೆ ನಾಪಿತನು ತೆರಳಿದ ಉದ್ದೇಶವೇನು?
2. ಹುಲಿಯ ಗುಹೆಯಲ್ಲಿ ನಾಪಿತನು ಏನೇನನ್ನು ಕಂಡನು?
3. ಎರಡನೆಯ ಬಾರಿ ಮಹಾದೇವನ ಉತ್ಸವಕ್ಕೆ ನಾಪಿತ ತೆರಳಿದ್ದೇಕೆ?

**III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)**

1. ಪತ್ನಿಪುತ್ರರನಾಥರಾದವರಿಗಿನ್ನೇನು ಗತಿ
2. ಇನ್ನು ಮೂರೊಂದು ದೊರೆಯೆ ತಾ ಕೃತಕೃತ್ಯನೆಂದು
3. ಜನನಿಯುದರದಿಂ ಬಂದೆನೆಂದು ಜವದೊಳಲ್ಲಿಂತೆರಳಿ
4. ಮೊದಲು ತನಗಂತಿತ್ತ ಇವನೆಂತು ತಂದನೋ
5. ಎಲವೋ ಗಂಧರ್ವ, ನೀ ಧುಮುಕಿದುದು ಲೇಸಾಯ್ತು
6. ಇವೆರಡೊಂದಾಗಿ ನಡೆತಂದ ಬಳಿಕ ತಾವು ಉಳಿಯುವುದೆಂತು

**IV. ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)**

1. ಹುಲಿಯಿಂದ ಪಾರಾಗಲು ನಾಪಿತ ಕಲ್ಪಿಸಿದ ಕತೆ ಯಾವುದು?
2. ಹುಲಿಯು ನಾಪಿತನಿಂದ ತಪ್ಪಿಸಿಕೊಂಡ ರೀತಿಯನ್ನು ನಿರೂಪಿಸಿ.
3. ವ್ಯಾಘ್ರಗಳ ಮಧ್ಯೆ ಬಿದ್ದ ವಿಪ್ರನನ್ನು ಉಳಿಸಿಕೊಳ್ಳಲು ನಾಪಿತನು ಮಾಡಿದ ಉಪಾಯವೇನು?
4. ಪಲಾಯನ ಮಾಡುತ್ತಿದ್ದ ಹುಲಿಯನ್ನು ನರಿ ಹೇಗೆ ಸಮಾಧಾನ ಪಡಿಸಿ ಹಿಂದಕ್ಕೆ ಕರೆತಂದಿತು?
5. ಮೂರ್ಛೆ ಹೋದ ವಿಪ್ರನನ್ನು ನಾಪಿತನು ಹೇಗೆ ಸಂತೈಸುತ್ತಾನೆ?

*****

## 2024–25 ನೇ ಸಾಲಿನ ನೂತನ ಪ್ರಶ್ನೆಪತ್ರಿಕೆಯ ಪ್ರಶ್ನೆಸಂಖ್ಯೆ 11 ರಿಂದ 15ರ ವರೆಗಿನ ಬಿಟ್ಟಸ್ಥಳ ತುಂಬಿರಿ ಪ್ರಶ್ನೆಗಳಿಗೆ ಈ ಕೆಳಕಂಡವುಗಳನ್ನು ಗಮನಿಸುವುದು.

**ಬಿಟ್ಟಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ (5 ಅಂಕ)**

### 1. ಗಾಂಧಿ – ಡಾ.ಬೆಸಗರಹಳ್ಳಿ ರಾಮಣ್ಣ

**(ಕಾಕತಾಳ, ನರಸಿಂಹಮೂರ್ತಿ, ಜೋಯಿಸರ ಮನೆಗೆ, ಕರಿಸಿದ್ದೇಗೌಡ, ದೊಡ್ಡಾಸ್ಪತ್ರೆಗೆ, ಇನ್ನೂರೈವತ್ತು.)**

1. ವೈದ್ಯಾಧಿಕಾರಿ ಇಲ್ಲಿಯವರೆಗೆ ರೀತಿಯ ______ ನ್ಯಾಯವನ್ನು ಕಂಡಿರಲಿಲ್ಲ.
2. ಕುಟುಂಬ ಯೋಜನಾ ವಿಸ್ತರಣಾಧಿಕಾರಿಯ ಹೆಸರು __________
3. ಮೊಮ್ಮಗನ ಅಗಲವಾದ ಕಿವಿಗಳ ಕಂಡ ಕರಿಸಿದ್ದೇಗೌಡ __________ ಮನೆಗೆ ಹೋದನು.
4. ಹುಡುಗನಿಗೆ ಮಹಾತ್ಮಗಾಂಧಿ ಎಂಬ ಹೆಸರನ್ನು ಇಟ್ಟವರು ______
5. ಗಾಂಧಿಯನ್ನು ಹೆಚ್ಚಿನ ಪರೀಕ್ಷೆಗಳಿಗೆ ___________ ಆಸ್ಪತ್ರೆಗೆ ಸೇರಿಸಬೇಕೆಂದು ವೈದ್ಯಾಧಿಕಾರಿ ಸೂಚಿಸಿದರು
6. ಹಲಸಿನ ಮರ ಮಾರಿದ್ದರಿಂದ ಕರಿಸಿದ್ದೇಗೌಡನಿಗೆ ಸಿಕ್ಕ ಹಣ _________

### 2. ರಾಗಿಮುದ್ದೆ – ಚ.ಹ.ರಘುನಾಥ

**( ಬಾನಿ, ಸೀಕುಬಾಕು, ಕಸಮುಸುರೆ, ಸಾಲ್ಕುಸಾವಿರ, ನಾಗಮ್ಮ, ಕಾರ್ಬೋಹೈಡ್ರೇಟ್, ಎಂಟುಸಾವಿರ)**

1. ಗ್ರಾಮದ ಅಧಿದೇವತೆ ________
2. ನೀರಿಗಾಗಿ ಕರಿಯ ___________ ತರುತ್ತಿದ್ದ.
3. ರಾಗಿಗೆ __________ ಸಾವಿರ ವರ್ಷಗಳ ಇತಿಹಾಸವಿದೆ.
4. _________ ಬಡಮಕ್ಕಳ ಪಾಲಿಗೆ ಚಾಕಲೇಟ್
5. ರಾಗಿಯಲ್ಲಿನ ಸ್ವಲ್ಪಸ್ವಲ್ಪವೇ ಬಿಡುಗಡೆಯಾಗುವ ಅಂಶ ___________
6. ಹೋಟೆಲಿನಲ್ಲಿ ಕರಿಯ ________ ಕೆಲಸ ಮಾಡುತ್ತಿದ್ದನು.

### 3. ಜ್ಯೋತಿಷ್ಯ ಅರ್ಥಪೂರ್ಣವೋ ಅರ್ಥರಹಿತವೋ – ಡಾ. ಎಚ್ ನರಸಿಂಹಯ್ಯ

(ಖಗೋಳಶಾಸ್ತ್ರ ಗ್ರಹಗತಿಗಳ, ತಮಾಶೆ, ಜ್ಯೋತಿಷಿಗಳ, ಪರಿಸರ ಮಾಲಿನ್ಯವು, ಜ್ಯೋತಿಷ್ಯವನ್ನು)

1. ಜ್ಯೋತಿಷ್ಯದ ಉಗಮವು __________ ದಲ್ಲಿ ಕಂಡುಬರುತ್ತದೆ.
2. ಜಾತಕಗಳನ್ನು __________ ಆಧಾರದಿಂದ ಬರೆಯಲಾಗುತ್ತದೆ.
3. ಜ್ಯೋತಿಷ್ಯಗಳ ಭವಿಷ್ಯ ವಾಣಿ ಓದಲು ________ ಆಗಿರುತ್ತದೆ.
4. ಜನರು ನಿರಾಶೆಯಲ್ಲಿದ್ದಾಗ ಸಮಸ್ಯೆಗಳಲ್ಲಿ ಇದ್ದಾಗ ___________ ಮೊರೆ ಹೋಗುತ್ತಾರೆ.
5. ಮೂಢನಂಬಿಕೆಗಳಿಂದ ಉಂಟಾಗುವ ___________ ವಾಯು ಜಲಮಾಲಿನ್ಯಗಳಿಗಿಂತ ಹೆಚ್ಚು ಅಪಾಯಕಾರಿ.

6. ಶಿಕ್ಷಣವನ್ನು ಪಡೆದವರು ವಿಜ್ಞಾನಿಗಳು ____________ ನಂಬುವುದು ಸೂಚನೆಯ ವಿಚಾರ

## 4. ಶಾಸ್ತ್ರೀ ಮಾಸ್ತರ ಮತ್ತವರ ಮಕ್ಕಳು – ಡಾ.ಚೆನ್ನಣ್ಣ ವಾಲೀಕಾರ

(ಐವತ್ತು–ಅರವತ್ತು ರೂಪಾಯಿ, ಅಂಬವ್ವ, ಹತ್ತು, ಅನಾಥ ಬಾಲಕರಾಶ್ರಮ, ಶಾಸ್ತ್ರಿ ಮಾಸ್ತರು)

1. ಶೇಂಗಾ ಮಾರುವವನ ದಿನದ ಸಂಪಾದನೆ _________
2. ಶಾಸ್ತ್ರೀ ಮಾಸ್ತರರ ಹೆಂಡತಿಯ ಹೆಸರು ____________
3. ಶಾಸ್ತ್ರೀ ಮಾಸ್ತರರಿಗೆ _______ ವರ್ಷ ಸೇವೆ ಇತ್ತು.
4. ಶಾಸ್ತ್ರಿಮಾಸ್ತರರು ಮನೆಯ ಮುಂದೆ __________ ಎಂದು ಬೋರ್ಡು ಹಾಕಿದರು.
5. ನಿರೂಪಕರನ್ನು ರೂಪಿಸಿದ ಶಿಲ್ಪಿ ______

## 5. ಬುದ್ಧ ಬಿಸಿಲೂರಿನವನು – ನಾಗತಿಹಳ್ಳಿ ಚಂದ್ರಶೇಖರ್

(ಲುಂಬಿನಿ ಉದ್ಯಾನವನ, ನೇಪಾಳದ ವಿಮಾನ, ವೈಶಾಖ ಶುದ್ಧ ಪೂರ್ಣಿಮೆ, ಮಾಯಾದೇವಿ, ಪುಷ್ಕರಣಿಯ ಉತ್ತರ ಬದಿಯಲ್ಲಿ, ಹೂಯೆನ್ ತ್ಸಾಂಗ್, ಲಾರ್ ಕೋಟ, ಕಾಫಿಗೇನಾದ್ರೂ ಕೊಡಿ, ಗೌತಮನಿಲ್ಲದ ಅರಮನೆ)

1. ಗೌತಮ ______ ದಲ್ಲಿ ಜನಿಸಿದನು.
2. _______ ಮೆಟಡರ್ ವ್ಯಾನಿಗೆ ಎರಡು ರೆಕ್ಕೆ ಜೋಡಿಸಿದ ಹಾಗೆ ಇತ್ತು.
3. ಬುದ್ಧನಿಗೆ ಜ್ಞಾನೋದಯವಾದದ್ದು __________ ದಿನ.
4. ಶ್ವೇತವರ್ಣದಿಂದ ಚೌಕಾಕಾರದಲ್ಲಿರುವ ದೇವಾಲಯ _________
5. ಅಶೋಕನ ಸ್ತಂಭ _______ ನಲ್ಲಿದೆ?
6. _________ ರ ಪ್ರವಾಸಾನುಭವದಲ್ಲಿ ಲುಂಬಿನಿಯ ಬಗೆಗೆ ವಿವರಗಳಿವೆ?
7. ಕಪಿಲವಸ್ತುವಿನ ಇಂದಿನ ಹೆಸರು __________
8. ಅರಮನೆಯ ಗಾರ್ಡು ಲೇಖಕರನ್ನು ________ ಎಂದು ಕೇಳಿದನು?
9. ಲೇಖಕರ ಮನಸ್ಸಿನಲ್ಲಿ ಗಾಢವಾಗಿ ಅಚ್ಚೊತ್ತಿದ್ದು __________

## 6. ಮಹಾತ್ಮರ ಗುರು – ಮುಗಳವಳ್ಳಿ ಕೇಶವ ಧರಣಿ

(ಕುದ್ಮುಲ್ ರಂಗರಾವ್, ಕುದ್ಮುಲ್ ರಂಗರಾವ್, ಡಿ.ಸಿ.ಎಂ., ಶೇಡಿಗುಡ್ಡೆ, ಆದಿ ದ್ರಾವಿಡ ಸಹಕಾರ ಸಂಘ, ರಾವ್ ಸಾಹೇಬ್)

1. ಶೋಷಿತ ಜನಾಂಗದವರ ಬಾಳಿನಲ್ಲಿ ನೈತಿಕ ಧೈರ್ಯದ ನಂದಾದೀಪ ಹಚ್ಚಿದವರು _______
2. ಬಡವರ ವಕೀಲರೆಂದು ಪ್ರಸಿದ್ಧರಾದವರು ______
3. ರಂಗರಾವ್ ಸ್ಥಾಪಿಸಿದ ಸಂಸ್ಥೆಯ ಹೆಸರು _________
4. ರಂಗರಾವ್ ಕೈಗಾರಿಕಾ ತರಬೇತಿ ಶಾಲೆ _____ ನಲ್ಲಿ ಸ್ಥಾಪಿಸಿದರು
5. ರಂಗರಾವ್ ಕೋರ್ಟ್ ಹಿಲ್ಸ್‌ನಲ್ಲಿ _______ ಸಂಘ ಸ್ಥಾಪಿಸಿದರು.
6. ಸರ್ಕಾರ ರಂಗರಾವ್ ಅವರಿಗೆ ನೀಡಿದ ಬಿರುದು ______

## 7. ನಿರಾಕರಣೆ – ಡಾ. ವೀಣಾಶಾಂತೇಶ್ವರ

(ಭರತನ, ದುಷ್ಯಂತ, ಮೇನಕೆ, ಭರತನ, ಶಕುಂತಲೆಯ)

1. ರಕ್ಷಾ ಕರಂಡವು ________ ಕೈಯಿಂದ ಕೆಳಗೆ ಬಿದ್ದಿತು .
2. ಭರತನ ತಂದೆಯ ಹೆಸರು ____________
3. ಶಕುಂತಲೆಯ ತಾಯಿಯ ಹೆಸರು _________
4. __________ ಶ್ರೇಯಸ್ಸಿಗಾಗಿ ಶಕುಂತಲೆ ಅರಮನೆಗೆ ಬಂದಿದ್ದಾಳೆ.
5. ________ ಅಂತಃಪುರದಿಂದ ದುಷ್ಯಂತ ಭಾರವಾದ ಹೆಜ್ಜೆಗಳನ್ನಿಡುತ್ತ ನಿಧಾನವಾಗಿ ಹೊರ ನಡೆದ.

## 8. ಕೃಷಿಸಂಸ್ಕೃತಿ ಮತ್ತು ಜಾಗತೀಕರಣ – ಸಿ.ಎಚ್.ಹನುಮಂತರಾಯ

(ಅಮೇರಿಕನ್ನರು, ಶ್ರೀಮಂತ ರೈತರ ಉದಯ, ಜಮೀನು, ಹಣದ, ಬಂಡವಾಳಶಾಹಿ, ರೈತ ದಂಗೆ, ಜಮೀನ್ದಾರರ ಉದಯ, ರೈತ ಚಳವಳಿ, ಗಾಂಧೀಜಿ)

1. ಲೇಖಕರು ಸಿಪಾಯಿ ದಂಗೆಯನ್ನು ______ ದಂಗೆ ಎಂದು ಕರೆಯುತ್ತಾರೆ.
2. ರೈತರು _____ ರೂಪದಲ್ಲಿ ತೆರಿಗೆ ಪಾವತಿಸಬೇಕಾಯಿತು.
3. ಬ್ರಿಟಿಷ್ ಸರ್ಕಾರಕ್ಕೆ ತೆರಿಗೆ ಕಟ್ಟಬಾರದೆಂದು _______ ಹೇಳಿದರು.
4. ರೈತರ ಬದಲಿಗೆ ಸ್ವಾತಂತ್ರ್ಯವು _______ ಸಿಕ್ಕಿತು.
5. ಹಸಿರು ಕ್ರಾಂತಿಯ ಪರಿಣಾಮ ______
6. ಎಪ್ಪತ್ತರ ದಶಕದಲ್ಲಿ ಭುಗಿಲೆದ್ದ ಚಳವಳಿ _________
7. ರೈತ ಮತ್ತು ರೈತ ಕೂಲಿಕಾರರಲ್ಲದವರು ______ ಖರೀದಿಸುವಂತಿಲ್ಲ.
8. ____ ಜಂಕ್ ಫುಡ್ ಹೋಟೆಲ್‌ಗಳೆಂದು ಹೀಯಾಳಿಸಿದರು.

## 9. ಚತುರನ ಚಾತುರ್ಯ – ಯಾದವ ಕವಿ

**( ಕಲ್ಲಿನ ಹೊಡೆತ, ನಾಪಿತ, ನಾಲ್ಕು ಯೋಜನ, ವ್ಯಾಘ್ರಯಜ್ಞ, ಐದುಜನ, ತನ್ನ ಪ್ರತಿಬಿಂಬ, ರತ್ನಭೂಷಣ, ಅರ್ಧಭಾಗ, ಮರದ, ನರಿ)**

1. ನಾಪಿತನ ಗ್ರಾಮಕ್ಕೆ ________ ದೂರದಲ್ಲಿ ಮಹಾದೇವನ ಮಹಾಕ್ಷೇತ್ರ ಇತ್ತು.
2. ಹುಲಿ ಕಾಡಿನಲ್ಲಿ _________ ನಿಗೆ ಎದುರಾಗಿ ಬಂದಿತು.
3. ಮಹೇಂದ್ರನು ________ ಯಜ್ಞವನ್ನು ಕೈಗೊಂಡನು.
4. ನಾಪಿತನ ಪ್ರಕಾರ ಭೂಮಿಗೆ ______ ಗಂಧರ್ವರು ಬಂದಿದ್ದರು.
5. ಹುಲಿ ಕನ್ನಡಿಯಲ್ಲಿ ________ ನೋಡಿತು.
6. ನಾಪಿತ ತಂದ ದ್ರವ್ಯದಲ್ಲಿ ವಿಪ್ರನಿಗೆ ______ ಭಾಗ ಕೊಟ್ಟನು.
7. ಹುಲಿಯ ಹಿಂಡನ್ನು ಕಂಡು ಹೆದರಿದ ನಾಪಿತ ಮತ್ತು ವಿಪ್ರ ________ ಮೇಲೆ ಅಡಗಿಕೊಂಡಿದ್ದರು.
8. ವಿಪ್ರನು ಮರದ ಮೇಲಿಂದ ______ ನಡುವೆ ಬಿದ್ದನು.
9. ಅರಣ್ಯ ಜಂತುಗಳಲ್ಲಿ ________ ಬುದ್ಧಿವಂತ ಪ್ರಾಣಿ.
10. ನರಿ ______ ಹೊಡೆತಕ್ಕೆ ಪ್ರಾಣ ಬಿಟ್ಟಿತು.

# ನಾಟಕ:
# ಬೋಳೇಶಂಕರ – ಚಂದ್ರಶೇಖರ ಕಂಬಾರ

**I. ಬಹು ಆಯ್ಕೆಯ ಪ್ರಶ್ನೆಗಳು. (ಒಂದು ಅಂಕ)**

1. ಬೋಳೇಶಂಕರನ ಊರು ಯಾವುದು?
ಅ) ಕೈಲಾಸಪುರ ಆ) ಶಿವಾಪುರ ಇ) ದೇವಾಪುರ ಈ) ಜಯಪುರ

2. ಬೋಳೇಶಂಕರನ ಅಣ್ಣ – ಅತ್ತಿಗೆಯರಿಗೆ ಉಂಟಾದ ಆಸೆ ಇದು.
ಅ) ಮನೆಯಿಂದ ನೆಗೆಯುವುದು ಆ) ಮರದಿಂದ ನೆಗೆಯುವುದು
ಇ) ಬೆಟ್ಟದ ನೆತ್ತಿಯಿಂದ ನೆಗೆಯುವುದು ಈ) ದಡದಿಂಧ ನೆಗೆಯುವುದು

3. ಪಿಶಾಚಿಗಳು ಮನುಷ್ಯರನ್ನು ಯಾವುದರ ಮೂಲಕ ಪ್ರವೇಶಿಸುತ್ತವೆ?
ಅ) ದೇಹದ ಮೂಲಕ ಆ) ದೌರ್ಬಲ್ಯದ ಮೂಲಕ ಇ) ಗಾಳಿಯ ಮೂಲಕ ಈ) ಆಹಾರದ ಮೂಲಕ

4. "ಬದುಕಿನ ಬಗ್ಗೆ ಅವನಿಗೆ ಒಂದೂ ತಕರಾರಿಲ್ಲ" ಎಂದು ಪಿಶಾಚಿಯು ಇವನ ಬಗ್ಗೆ ಹೇಳುತ್ತದೆ.
ಅ) ಸೋಮಣ್ಣ ಆ) ಕಾಮಣ್ಣ ಇ) ಬೋಳೇಶಂಕರ ಈ) ಕೋಡಂಗಿ

5. ಯಾರ ಹೆಸರನ್ನು ಕೇಳಿದರೆ ಪಿಶಾಚಿಗಳು ಹಡೆದರುತ್ತವೆ?
ಅ) ಶಿವ ಆ) ಸೈತಾನ ಇ) ಪಿಶಾಚಿ ಈ) ಬೋಳೇಶಂಕರ

6. ಬೋಳೇಶಂಕರನ ಹೊಟ್ಟೆನೋವು ಇದರಿಂದ ಮಾಯವಾಯಿತು.
ಅ) ಪಾನಕ ಆ) ಹುಲ್ಲು ಇ) ಪಿಶಾಚಿ ಕೊಟ್ಟ ಬೇರು ಈ) ಔಷಧಿ

7. ಬೋಳೇಶಂಕರ ಎಲ್ಲಿ ಕುಳಿತು ಊಟ ಮಾಡಬೇಕೆಂದು ಅವನ ಅತ್ತಿಗೆ ಹೇಳುತ್ತಾಳೆ?
ಅ) ಕುರಿ ಕೊಟ್ಟಿಗೆ ಆ) ದನದ ಕೊಟ್ಟಿಗೆ ಇ) ಎಮ್ಮೆ ಕೊಟ್ಟಿಗೆ ಈ) ಕುದುರೆ ಲಾಯ

8. ಬೋಳೇಶಂಕರನಿಂದ ಬೇರು ಕಿತ್ತು ಕೊಳ್ಳಲು ಪಿಶಾಚಿ ಯಾವ ವೇಷದಲ್ಲಿ ಬರುತ್ತದೆ?
ಅ) ಮುದುಕಿಯ ವೇಷ ಆ) ರಾಜಕುಮಾರಿ ವೇಷ ಇ) ಸೈತಾನನ ವೇಷ ಈ) ಹುಲಿವೇಷ

9. ರಾಜಕುಮಾರಿಗೆ ಬಂದ ರೋಗವಿದು.
ಅ) ತಲೆನೋವು ಆ) ಹೊಟ್ಟೆನೋವು ಇ) ಕಣ್ಣುನೋವು ಈ) ಮೈಕೈನೋವು

10. ಹುಡುಗಿಯರ ಹಾಡಿಗೆ ಬೋಳೇಶಂಕರ ಬಹುಮಾನವಾಗಿ ಇದನ್ನು ಕೊಡುವನು.
ಅ) ಬೆಳ್ಳಿನಾಣ್ಯ ಆ) ಚಿನ್ನದನಾಣ್ಯ ಇ) ಹಿತ್ತಾಳೆನಾಣ್ಯ ಈ) ತಾಮ್ರದನಾಣ್ಯ

11. ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು?
ಅ) ಕೋವಿಗೆ ಅ) ಕತ್ತಿಗೆ ಇ) ಕೊಡಲಿಗೆ ಈ) ಸುತ್ತಿಗೆ

12. ಕತ್ತಲೆಯ ನಿಜ ಜನಕ ಈತ
ಅ) ಭಾಗವತ ಆ) ಸೈತಾನ ಇ) ಪಿಶಾಚಿ ಈ) ದೆವ್ವ

13. ಬೋಳೇಶಂಕರನ ಅಣ್ಣಂದಿರಿಗೆ ಯಾವ ರೋಗ ಹಿಡಿದಿದೆ?
ಅ) ಅತಿ ಆಸೆಯ ರೋಗ ಆ) ದುರಾಸೆಯ ರೋಗ
ಇ) ಮಾನಸಿಕ ರೋಗ ಈ) ಅಧಿಕಾರದ ಆಸೆಯ ರೋಗ

14. ಕೊಳೆತ ಬಲೆ ಹಾಕಿ ಎಳೆದರೂ ಬರುವಂತವರು– ಪಿಶಾಚಿಯ ಈ ಹೇಳಿಕೆ ಇವರಿಗೆ ಸಂಬಂಧಿಸಲಾಗಿದೆ.
ಅ) ಬೋಳೇಶಂಕರನಿಗೆ ಆ) ಬೋಳೇಶಂಕರನ ಅಣ್ಣಂದಿರಿಗೆ ಇ) ಸೈತಾನನಿಗೆ ಈ) ಪಿಶಾಚಿಗೆ

15. "ನನ್ನ ಗಿರಾಕಿ ಇದಾನಲ್ಲ, ಬೆಪ್ಪಕ್ಕಡಿ ಬೋಳೇಶಂಕರ ಮಹಾ ಪಾಕಡಾ, ಆಸ್ತಿ ಭಾಗ ಮಾಡಿಕೊಡುವಾಗ ಅಣ್ಣತಮ್ಮಂದಿರು ಜಗಳಾಡಿ ಕಣ್ಣು ಕಿವಿ ಕಿತ್ತಾಡುತ್ತಾರೆ ಅಂತ ಅಂದುಕೊಂಡಿದ್ದೆವು. ಈ ಬೆಪ್ಪಕ್ಕಡಿ ಅವರು

ಕೇಳಿದ್ದನ್ನೆಲ್ಲಾ ಕೊಟ್ಟುಬಿಟ್ಟನೇ! ಇವನ ಪಂಚೇಂದ್ರಿಯಗಳೋ ಎಲ್ಲರಿಗಿಂಥ ಚುರುಕು" ಈ ಮಾತಿನನ್ವಯ ಪಿಶಾಚಿಯು ಬೋಳೇಶಂಕರನ ಸ್ವಭಾವ ಎಂಥದ್ದೆಂದು ಹೇಳುತ್ತಿದೆ.

ಅ) ಬೋಳೆಶಂಕರ ಸರಳ ಸ್ವಭಾವದವನು ಆ) ಬೋಳೇಶಂಕರ ಕೆಟ್ಟ ಸ್ವಭಾವದವನು

ಇ) ಬೋಳೇಶಂಕರ ಜಗಳದ ಸ್ವಭಾವದವನು ಈ) ಬೋಳೇಶಂಕರ ಸೋಂಬೇರಿ

16. ಜೊತೆ ಕೂತು ಊಟ ಮಾಡಿ ಎಷ್ಟು ದಿನಗಳಾದವು. ಬನ್ನಿ ಅಣ್ಣತಮ್ಮಂದಿರು ಒಟ್ಟಿಗೆ ಕೂತು ಊಟ ಮಾಡೋಣ. ಹೆಣ್ಣಿದ್ದ ಮನೆಯ ಸೌಭಾಗ್ಯವೇ ಬೇರೆ. ಅತ್ತಿಗೆಯವರ ಹಸ್ತಗುಣದಿಂದ ಅಡುಗೆ ಮನೆಯಾಗಲೇ ಪರಿಮಳಭರಿತವಾಗಿದೆ ಬನ್ನಿ – ಎಂಬ ಮಾತಿನನ್ವಯ– ಬೋಳೇಶಂಕರನ ದೃಷ್ಟಿಯಲ್ಲಿ ಒಂದು ಒಳ್ಳೆಯ ಮನೆ ಹೇಗಿರಬೇಕು?

ಅ)ಅಡುಗೆ ಮನೆ ಸುಂದರವಾಗಿರಬೇಕು

ಆ) ಅಣ್ಣತಮ್ಮಂದಿರು ಜಗಳ ಮಾಡಬೇಕು

ಇ) ಅಣ್ಣತಮ್ಮಂದಿರು ಮದುವೆಯಾದ ಮೇಲೆ ಒಂದಾಗಿರಬೇಕು

ಈ) ಅಣ್ಣತಮ್ಮಂದಿರು ಮದುವೆಯಾದ ಮೇಲೆ ಬೇರೆಯಾಗಬೇಕು

17. ನಾನು ರಾಜನಾದರೆ ರಾಜ್ಯದಲ್ಲಿ ಸೈನ್ಯ ಇರೋದಿಲ್ಲ. ನಾಣ್ಯಗಳು ಇರೋದಿಲ್ಲ. ರಾಜಕಾರಣಿಯಿಂದ ಹಿಡಿದು ಎಲ್ಲರೂ ದುಡೀತಾರೆ. ಎಲ್ಲರೂ ಉಣ್ಣುತ್ತಾರೆ. ದುಡಿಯದ ಸೋಂಬೇರಿಗಳಿಗೆ ಖಂಡಿತ ಅವಕಾಶವಿಲ್ಲ– ಇಲ್ಲಿ ಬೋಳೇಶಂಕರನ ನಿಲುವೇನು?

ಅ) ಬೋಳೇಶಂಕರ ಸರಳ ಬದುಕುನ ಸೂತ್ರಧಾರ ಆ) ಬೋಳೇಶಂಕರ ಆಡಂಬರದ ವ್ಯಕ್ತಿ

ಇ) ಬೋಳೇಶಂಕರ ಉದ್ದಟತನ ಈ) ಬೋಳೇಶಂಕರ ಕನಿಷ್ಟ ತಿಳುವಳಿಕೆಯವ

18. ನಾವು ಜಗಳದ ಭಾಷೆ ಆಡಿದರೆ ಅವರು ಸ್ನೇಹದ ಭಾಷೆ ಆಡುತ್ತಾರೆ. ನಿಜ ಹೇಳುತ್ತೇನೆ ಇರುವೆಗೆ ಸಿಟ್ಟಿರಬಹುದು. ಈ ಜನಗಳಲ್ಲಿಲ್ಲಾ ಸ್ವಾಮಿ– ಈ ಮಾತು ಇವರನ್ನು ಕುರಿತದ್ದು.

ಅ) ಸೈತಾನನ ರಾಜ್ಯದ ಜನರು ಆ) ಬೋಳೇಶಂಕರನ ರಾಜ್ಯದ ಜನರು

ಇ) ಸರದಾರ ಸೋಮಣ್ಣನ ರಾಜ್ಯದ ಜನರು ಈ) ಸಾಪ್ಕಾರ ಕಾಮಣ್ಣನ ರಾಜ್ಯದ ಜನರು

19. ಬಂಧುಗಳೇ ಚರಿತ್ರೆ ಮುಂದೆ ಮುಂದೆ ಹೋಗುತ್ತದೆ; ಹಿಂದೆ ಹಿಂದಲ್ಲ – ಈ ಮಾತನ್ನು ಸೈತಾನ ಯಾರನ್ನು ಕುರಿತು ಹೇಳಿದ್ದು.

ಅ) ತನ್ನ ರಾಜ್ಯದ ಜನರನ್ನು ಆ) ಬೋಳೇಶಂಕರನ ಜನರನ್ನು

ಇ) ಸರದಾರ ಸೋಮಣ್ಣನ ಜನರನ್ನು ಈ) ಸಾಪ್ಕಾರ ಕಾಮಣ್ಣನ ಜನರನ್ನು

20. ತಲೆಯಿಂದ ಕೆಲಸ ಮಾಡಬಹುದು ಅನ್ನೋದನ್ನ ಈ ಮನುಷ್ಯ ತೋರಿದ್ದೇನೋ ಸರಿಯೆ. ಆದರೆ ತಲೆಯಿಂದ ಕೆಲಸ ಮಾಡಿದರೆ– ನೀವೇ ನೋಡಿದಿರಲ್ಲ ತಲೆ ಸಿಡಿಯುತ್ತದೆ. ಆದ್ದರಿಂದ ನಾವು ಮೊದಲಿನ ಹಾಗೆ ಕೈ ಮತ್ತು ಬೆನ್ನುಗಳಿಂದ ಕೆಲಸ ಮಾಡೋದೇ ವಾಸಿ – ಈ ಮಾತಿನಲ್ಲಿ

ಅ) ಬೌದ್ಧಿಕ ಶ್ರಮಕ್ಕೆ ಆದ್ಯತೆ ಆ) ದೈಹಿಕ ಶ್ರಮಕ್ಕೆ ಆದ್ಯತೆ

ಇ) ದೇಹ– ಮನಸ್ಸಿನ ಶ್ರಮಕ್ಕೆ ಆದ್ಯತೆ ಈ) ದೇಹದ ಆಯಾಸಕ್ಕೆ ಆದ್ಯತೆ

**II. ಎರಡು ಅಂಕದ ಪ್ರಶ್ನೆಗಳು (ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ)**

1. ಬೆಟ್ಟದ ಮೇಲಿನ ದೇವತೆಯು ಬೋಳೇಶಂಕರ ಅಣ್ಣ– ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ?
2. ಸಾಪ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದ.
3. ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಸಿದ್ದು ಏಕೆ?
4. ಕೋಡಂಗಿಯು ತಾನು ಬೆಳಗ್ಗೆಯಿಂದ ಏನೇನು ಕೆಲಸ ಮಾಡಿದನೆಂದು ಹೇಳುತ್ತಾನೆ?

5. ರಾಜಕುಮಾರಿಯ ಹೊಟ್ಟೆನೋವು ವಾಸಿಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಡಂಗುರ ಸಾರಿಸುತ್ತಾರೆ?
6. ಪಿಶಾಚಿಗಳು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿಕೊಡುತ್ತವೆ?
7. ಬೋಳೇಶಂಕರ ಹುಡುಗಿಯರಿಗೆ ಚಿನ್ನ ಕೊಟ್ಟಿದ್ದಕ್ಕೆ ಸಾಹ್ಕಾರಣ್ಣನು ಏನು ಹೇಳುತ್ತಾನೆ?
8. ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?
9. ಸೈತಾನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ?
10. ಬೋಳೇಶಂಕರ ಏನೆಂದು ಡಂಗುರ ಸಾರಿಸುತ್ತಾನೆ?

## III. ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು/ಸಾಲುಗಳು. (ಮೂರು ಅಂಕ)

1. ಬ್ಯಾಂಕಿನಲ್ಲಿ ಕೂಡಿಸಿಟ್ಟು ಮದುವೆ ಆದ ಮೇಲೆ ಹೆಂಡತಿಗೆ ಕೊಡ್ತೀನಿ
2. ಇವನಿಗೇನು ಹೆಂಡತೀನೇ? ಮಕ್ಕಳೇ?
3. ಕೊಳೆತ ಬಲೆ ಹಾಕಿ ಎಳೆದರೂ ಬರುವಂಥವರು
4. ಒಂದು ಹೊತ್ತು ರೊಟ್ಟಿ ತಿನ್ನದಿದ್ದರೆ ನಾನೇನು ಸಾಯುವುದಿಲ್ಲ
5. ನಾನೇನಾದರೂ ರಾಜನಾದರೆ ನಿಮ್ಮಂಥ ಸೋಂಬೇರಿಗಳಿಗೆ ಊಟ ಹಾಕೋದೆ ಇಲ್ಲ
6. ಹೆಣ್ಣಿದ್ದ ಮನೆಯ ಸೌಭಾಗ್ಯವೇ ಬೇರೆ
7. ಹಸಿರು ಸಾಮ್ರಾಜ್ಯದ ನಮ್ರ ಪ್ರಜೆ ಕಾಣಯ್ಯ ನಾನು
8. ರಾಜಕುಮಾರಿಗೆ ಬಂದಿರೋದು ರಾಜರೋಗ
9. ರಾಜರಾಣಿಯರಿಂದ ಹಿಡಿದು ಎಲ್ಲರೂ ದುಡಿಯುತಾರೆ
10. ದಾರಿ ತಪ್ಪಿದವರಿಗೆ ಗಾದೆ ಬಲ್ಲವರು ಬುದ್ದಿ ಹೇಳುತ್ತಾರೆ
11. ಚಿನ್ನ ತಿಂದು ಬದುಕಲಾಗುತ್ತಾ!
12. ಜನ ಎಲ್ಲಿ ಸೇರಿದರೆ ಅಲ್ಲೇ ದರ್ಬಾರು
13. ನಾವು ಜನಗಳ ಭಾಷೆ ಆಡಿದರೆ ಅವರು ಸ್ನೇಹದ ಭಾಷೆ ಆಡುತ್ತಾರೆ
14. ಕೆಲಸ ಮಾಡಿದವರು ಊಟ ಮಾಡಿದ ನಂತರ ಸೋಮಾರಿಗಳ ಊಟ
15. ತಲೆಯಿಂದ ಕೆಲಸ ಮಾಡುವುದು ಹೇಗೆಂದು ನಿಮಗೆ ಹೇಳಿಕೊಡುತ್ತೇನೆ
16. ಬಂಧುಗಳೇ ಚರಿತ್ರೆ ಮುಂದೆ ಮುಂದೆ ಹೋಗುತ್ತದೆ ಹಿಂದೆ ಹಿಂದಲ್ಲ

## IV. ಐದು – ಆರು ವಾಕ್ಯಗಳ ಉತ್ತರ ಬಯಸುವ ಪ್ರಶ್ನೆಗಳು. (ನಾಲ್ಕು ಅಂಕ)

1. ಬೋಳೆಶಂಕರ ಮತ್ತು ಅವನ ಅಣ್ಣಂದಿರನ್ನು ಭಾಗವತರು ಹೇಗೆ ಪರಿಚಯಿಸುತ್ತಾರೆ?
2. ಬೋಳೇಶಂಕರ ಅಣ್ಣಂದಿರೇ ವಾಸಿ ಎಂದು ಪಿಶಾಚಿ ಹೇಳಲು ಕಾರಣವೇನು?
3. ಬೋಳೇಶಂಕರ ನಾಣ್ಯ ಹಾಗೂ ಸೈನಿಕರನ್ನು ಪಡೆದ ಪ್ರಸಂಗವನ್ನು ವಿವರಿಸಿ.
4. ರಾಜಕುಮಾರಿಯ ಹೊಟ್ಟೆನೋವು ಪ್ರಸಂಗದಿಂದ ಬೋಳೇಶಂಕರ ರಾಜನಾದ ಕಥೆಯನ್ನು ತಿಳಿಸಿ.
5. ತನ್ನ ಆದರ್ಶ ರಾಜ್ಯ ಕುರಿತು ಬೋಳೇಶಂಕರ ಮಂತ್ರಿಗೆ ಹೇಳಿದ್ದೇನು?
6. ಸೈನಿಕರು ಹಾಡಿದ ಸಿಟಿಯ ಹಾಡಿನ ಸಾರಾಂಶವೇನು?
7. ಸೈತಾನನು ತನ್ನ ಪರಿಚಯ ಮಾಡಿಕೊಂಡ ಬಗೆ ಹಾಗೂ ಬಂದಂಥ ಕಾರಣವನ್ನು ತಿಳಿಸಿ.
8. ಬೋಳೇಶಂಕರ ತನ್ನ ಅಣ್ಣಂದಿರಿಗೆ ಸಿಪಾಯಿ ಮತ್ತು ನಾಣ್ಯಗಳನ್ನು ಮಾಡಿಕೊಡಲು ಏಕೆ ನಿರಾಕರಿಸುತ್ತಾನೆ?
9. ಯುದ್ಧ ಮಾಡಲು ಸೈನಿಕರು ಏಕೆ ನಿರಾಕರಿಸುತ್ತಾರೆ?

10. ಸೈನಿಕರು ಏನೇನು ನಾಶ ಮಾಡಿದರೆಂದದು ಶಿವಪುರದ ಜನ ಹೇಳುತ್ತಾರೆ?

11. ಚಿನ್ನ ತೆಗೆದುಕೊಂಡು ಅನ್ನ ಕೊಡಿ ಎಂದ ಸೈತಾನನಿಗೆ ಶಿವಪುರದ ಜನರು ಹೇಗೆ ಪ್ರತಿಕ್ರಿಯಿಸಿದರು?

12. ತಲೆಯಿಂದ ಕೆಲಸ ಮಾಡಬೇಕೆಂಬ ಸೈತಾನನ ಭಾಷಣದ ಸ್ವಾರಸ್ಯವನ್ನು ವಿವರಿಸಿ.

13. "ಶ್ರಮಜೀವನ ಮತ್ತು ಸರಳ ಬದುಕನ್ನು ರೂಢಿಸಿಕೊಂಡವರಿಗೆ ಪಿಶಾಚಿಗಳು ಏನು ಮಾಡಲಾರವು" ಎಂಬುದು ನಾಟಕದಲ್ಲಿ ಹೇಗೆ ಮೂಡಿ ಬಂದಿದೆ?

14. 'ಹಸಿರೇ ಉಸಿರು' ಎಂಬುದನ್ನು ಬೋಳೇಶಂಕರನ ಪಾತ್ರದ ಮೂಲಕ ನಾಟಕಕಾರರು ಹೇಗೆ ಸ್ಪಷ್ಟ ಪಡಿಸಿದ್ದಾರೆ? ವಿಮರ್ಶಿಸಿ.

*****

# ಭಾಷಾಭ್ಯಾಸ

## ಸಮಾನಾರ್ಥಕ ವಿಭಾಗದ ಪದಗಳು

| | | | | |
|---|---|---|---|---|
| ಅಗ್ನಿ | ಅಣ್ಣ | ಅರಸ | ಅಲಗು | ಅಹಿ |
| ಅಂಗನೆ | ಅಂಘ್ರೀ | ಇಳೆ | ಈಶ | ಕಡಲು |
| ಕಣ್ಣು | ಕತ್ತಿ | ಕನ್ನಡಿ | ಕಪಿ | ಕಮರು |
| ಕರಿ | ಕಲ್ಯಾಣ | ಕಾಡು | ಕೈ | ಖನಿ |
| ಗಜ | ಗಾಳಿ | ಗಿರವಿ | ಚಕ್ರ | ಚಿನ್ನ |
| ಚಂದ್ರ | ಜಗತ್ತು | ತನು | ತಾಯಿ | ತುರಗ |
| ತಿಂಗಳು | ದಿನಕರ | ದೇಗುಲ | ದೈತ್ಯ | ಧನು |
| ನಕ್ಷತ್ರ | ನಾವೆ | ನಾಚಿಕೆ | ನಿಗೂಢ | ನೀರು |
| ನೃಪ | ಪತಾಕೆ | ಬಾಣ | ಭುಜ | ಭೂಮಿ |
| ಮಗ | ಮಗು | ಮನ | ಮನೆ | ಮರ |
| ಮಲೆ | ಮಸ್ತಕ | ಮಾರಕ | ಮುಖ | ಯುದ್ಧ |
| ರಕ್ತ | ರಾಜ | ರೋಮ | ಲೋಕ | ಲೋಚನ |
| ವಾರಿಧಿ | ವಿಭು | ಶರೀರ | ಸಾವು | ಹಣೆ |
| ಹಯನು | ಹುಲಿ | ಹೂವು | | |

## ನಾನಾರ್ಥಕ ವಿಭಾಗದ ಪದಗಳು

| | | | | |
|---|---|---|---|---|
| ಅಡಿ | ಅರಸು | ಅಲೆ | ಆಳು | ಉಡಿ |
| ಊರು | ಎರಗು | ಒರಗು | ಕರ | ಕರೆ |
| ಕರ್ಣ | ಕಲ್ಯಾಣ | ಕಾಡು | ಕಾರು | ಕಾಲ |
| ಕಾಲು | ಕೂಡಿ | ಕೊಬ್ಬು | ಗತಿ | ಹಿಂಡ |
| ಗಾಬರಿ | ಗುಡಿ | ಗುರು | ಗಂಡ | ಗುಂಡಿ |
| ಚೀಟಿ | ಜವ | ತಾಳಿ | ತಿರಿ | ತುಂಬಿ |
| ತೊಡೆ | ದಳ | ದೊರೆ | ನಗ | ನಡು |
| ನರ | ನೆರೆ | ನೋಡು | ಪಡೆ | ಪತಿ |
| ಪಕ್ಷ | ಪಾತ್ರ | ಪಾಶ | ಪಾಷಾಣ | ಪುಂಡರೀಕ |
| ಬಗೆ | ಬಟ್ಟೆ | ಬೇಡ | ಮತ | ಮಾಗಿ |
| ಮುತ್ತು | ಮೃಗ | ಮೋರಿ | ಮಂಡಲ | ಹೊರೆ |
| ವರ್ಗ | ಶಿಖಿ | ಶಿವ | ಶೇಷ | ಸತ್ತೆ |
| ಸುಕ್ಕು | ಸುತ್ತು | ಸುಳಿ | ಸೋಮ | ಸೇರು |
| ಹತ್ತು | ಹರಿ | ಹೊತ್ತು | | |

## ತತ್ಸಮ – ತದ್ಭವಗಳ ವಿಭಾಗದ ಪದಗಳು

| | | | | |
|---|---|---|---|---|
| ಆಕಾಶ | ಅಮೃತ | ಆಶ್ವರ್ಯ | ಅಕ್ಷರ | ಉದ್ಯೋಗ |
| ರಿಷಿ | ಕಾವ್ಯ | ಕೀರ್ತಿ | ಗ್ರಹ | ಚೀರೆ |
| ಚಂದ್ರ | ಫಲ | ಜನ್ಮ | ತ್ಯಾಗ | ದೀಕ್ಷ |
| ದೃಷ್ಟಾ | ದೇಶ | ಧ್ವನಿ | ನರಕ | ನಕ್ಷೆ |
| ನಿತ್ಯ | ಪರ್ವ | ಪರೀಕ್ಷಿಸು | ಪಕ್ಷಿ | ಪ್ರಸಾದ |
| ಪ್ರಯಾಣ | ಪ್ರಾಯ | ಪ್ರಾಣ | ಪ್ರೀತಿ | ವನ |
| ವರ್ಣ | ವೀಧಿ | ಬ್ರಹ್ಮ | ಮನುಷ್ಯ | ಮುಖ |
| ಮುಕ್ತಿ | ಮೃಗ | ಮೃದು | ಮೃಡ | ಯುಗ |
| ಯುವನಿಕೆ | ಯಾತ್ರೆ | ಯಂತ್ರ | ರಕ್ತ | ರಾಜ |
| ರತ್ನ | ರಾಕ್ಷಸ | ಲಕ್ಷ | ವಿದ್ಯೆ | ವರ್ತಿ |
| ವಸತಿ | ವರ್ಷ | ಶಕ್ತಿ | ಶಯ್ಯಾ | ಶಿರ |
| ಶಿಲೆ | ಶಿಶು | ಶೃಂಕೋಲೆ | ಸುಖ | ಸಂಘ |
| ಸಂಧ್ಯಾ | ಸಂತೋಷ | ಸಂಸ್ಥೆ | ಸಹಸ್ರ | ಸುಧೆ |
| ಸ್ಥಾನ | ಶೃಂಗಾರ | | | |

## ವಿರುದ್ಧಾರ್ಥಕ ವಿಭಾಗದ ಪದಗಳು

| | | | |
|---|---|---|---|
| ನಿರೀಕ್ಷಿತ | ಆಡಂಬರ | ಅಪರಿಚಿತ | ಆರೋಗ್ಯ |
| ಉನ್ನತಿ | ಉಚಿತ | ಕನಸು | ಕತ್ತಲು |
| ಕ್ರಾಂತಿ | ಖಂಡ | ಗುಣ | ಜಾತ |
| ಜೀವ | ಟೊಳ್ಳು | ದುರ್ಬಲ | ನಂಬಿಕೆ |
| ಬೀಳು | ಮಾನವ | ಮುಳುಗು | ಲೌಕಿಕ |
| ವಿದೇಶ | ವ್ಯವಸ್ಥೆ | ವಂದ್ಯಾ | ಶುಭ |
| ಸತ್ಯ | ಸತ್ವ | ಸ್ವದೇಶಿ | ಸಹಕಾರಿ |
| ಸಾಹುಕಾರ | ಸುಖ | ಸಂಗಾತಿ | ಹರೆಯ |
| ಹಳೆಯ | | | |

## ಜೋಡುನುಡಿ /ಜೋಡಿಪದ ವಿಭಾಗದ ಪದಗಳು

| | | | | |
|---|---|---|---|---|
| ಅಟ್ಟಬೆಟ್ಟ | ಎಡಬಲ | ಒಲವಬಲವ | ಕಸಮುಸುರೆ | ಹಳ್ಳಕೊಳ್ಳ |
| ಕುಳ್ಳುಕಟ್ಟಿಗೆ | ಕಾಯಿಪಲ್ಯೆ | ಗಿಡಮರ | ಗುಡುಗುಮಿಂಚು | ಗೆಡ್ಡೆಗೆಣಸು |
| ತಿಂಡಿತಿನಿಸು | ದಿಕ್ಕುದೆಸೆ | ನೂರಾರು | ಬೆಟ್ಟಗುಡ್ಡ | ಬೈಗುಬೆಳಗು |
| ಭಯಭಕ್ತಿ | ಮೈಕೈ | ವಧುವರ | ಸಾವಿರಾರು | ಸಾವುನೋವು |
| ಸೀಕುಬಾಕು | ಹಣ್ಣುಹಂಪಲು | ಹತ್ತಾರು | ಹಮ್ಮುಬಿಮ್ಮು | ಹಾಲುತುಪ್ಪ |
| ಹೊಟ್ಟೆಬಟ್ಟೆ | ಹೊಳೆಹಳ್ಳ | ಹೋಟೆಲಂಗಡಿ | | |

## ಬಿಡಿಸಿ ಬರೆಯಬೇಕಾದ ಪದಗಳು

| | | | | |
|---|---|---|---|---|
| ಅದರಿಚ್ಚೆ | ಅಪವಾದಮಾವರಿಸೆ | ಅಲ್ಲಿಗೊಯ್ಯದೆ | ಅಸದಳಮೆಂಬ | ಅಕ್ಷರಗಳಭ್ಯಾಸ |
| ಇಡಿದಿರುತಿರ್ದುದು | ಇಪ್ಪತ್ತು | ಉದ್ದಗಲ | ಉಂಡೆಗಟ್ಟುವ | ಎಷ್ಟೊತ್ತು |
| ಎಂಟ್ಟತ್ತು | ಎಂದಷ್ಟೆ | ಎಂದಿಗಯ್ಯ | ಏಕೈಕ | ಒಂದೈದು |
| ಕಟ್ಟೋಗರ | ಕಣ್ಣರಳಿಸು | ಕಣ್ಣೆದುರಿಗೆ | ಕಣ್ಣೊರೆಸಿಕೊ | ಕಣ್ಮಲರ್ |
| ಕತ್ತಿಡಿದು | ಕತ್ತೆತ್ತಿ | ಕಳೆವುದೆಂದಿಗೆ | ಕಂಪೊಗೆದ | ಕಾಲಾವಧಿ |
| ಕಾಳ್ಗಟ್ಟೆ | ಕಾವೇರಿ | ಕಾಳೋರಗ | ಕೂಗಾಟ | ಕೆಂಬಣ್ಣ |
| ಕೆಂಡಗಣ್ಣು | ಗೆಳೆಯರಿಬ್ಬರೂ | ಗುಪ್ತಾರಾಧನೆ | ಜಗದೊಳುತ್ತಮರ | ಜಲಾಂಜಲಿ |
| ತಣ್ಣೀರ್ದಳೆದು | ತಲೆಗೊಡಹು | ತಿಳಿಯದಾಯಿತು | ದಡಿಗವೆಣ | ದಿಕ್ಕೆಟ್ಟು |
| ದಿಕ್ಕೂಚಿ | ದಿಗ್ದೇಶ | ದಿವ್ಯಾನ್ನ | ನಾಲ್ವಡಿ | ನ್ಯಾಯಾಲಯ |
| ನೂರಾರು | ನಿನಗೆನ್ನೆಗಂ | ನಿನ್ನನೊಲ್ಲದೆ | ಪನ್ನಗಾಭರಣ | ಪುಲ್ಮೇವು |
| ಪುರಿಗಣೆ | ಪೊಗೆದಳೆದಗ್ನಿಹೋತ್ರ | | ಪೋಗದಿರ್ದೊಡೆ | ಬನದೊಳಿರಿಸಿ |
| ಬಾಯೆಂದೆನೆಗೆ | ಬಾಲಕರಾಶ್ರಮ | ಬಿದ್ದಳಂಗನೆ | ಬೆಳ್ಗೊಡೆ | ಭವದ್ವಿಕ್ರಮ |
| ಭುಜಾಸ್ಫೋಟ | ಮಹಾಟವಿ | ಮಹಾಟ್ಟಹಾಸ | ಮಹಾತ್ಮ | ಮಹೋನ್ನತಿ |
| ಮಹೋಗ್ರ | ಮಹೋತ್ಸಾಹ | ಮಿಡಿದಾರ್ತೆಯಾಗಿ | ಮೀರಲರಿಯದೆ | |
| ಮುನಿಪೋತ್ತಮ | ಮೂಲೋತ್ಪಾಟನೆ | ಮೆಳ್ಳಗಣ್ಣು | ಮೈಯೆಲ್ಲ | |
| ರಘುಕುಲೋದ್ಭವಂ | ರಣಾಜಿರ | ರಸಾನುಭವ | ಲಕ್ಷಾಂತರ | |
| ಲಿಂಗಾರ್ಚನೆ | ಲಿಂಗಾಭಿಮಾನ | ಲೋಕಾಧಿಪತಿ | ವದನಾರವಿಂದ | |
| ವಿನಯೋಲ್ಲಂಘನ | ವಿಭುವಿನಾಜ್ಞೆ | ವೈದ್ಯಾಧಿಕಾರಿ | ಶಿವಾವಾಸ | |
| ಸಸ್ಯಾಳಿ | ಸರ್ವಾಂಗ | ಸಹಸ್ರಾಕ್ಷ | ಸುಮ್ಮನಿರುವರೆ | |
| ಸೋಮಾರ್ಕ | ಸೋಮಾಮೃತ | ಸೋವೇರಿ | ಸಿಂಹಾಸನ | |
| ಹಣ್ಣಿನಂಗಡಿ | ಹತ್ತಾರು | ಹಾಸ್ಯಾಸ್ಪದ | ಹೊಡೆವರ್ರೈವರು | |
| ಹೊಳೆವುದೆಂದಿಗೆ | | | | |

## ದ್ವಿರುಕ್ತಿಗಳು

| | | | |
|---|---|---|---|
| ಅಕಟಕಟ | ಅಡಿಗಡಿಗೆ | ಇಲ್ಲಇಲ್ಲ | ಊರಿಗೆಊರೇ |
| ಊರೂರು | ಒಳಗೊಳಗೆ | ಒರೋರ್ವರು | ಕೋಟಿಕೋಟಿ |
| ತುಂಡುತುಂಡು | ತಂಡತಂಡ | ದಳದಳ | ಹನಿಹನಿ |
| ದಾಂಟಿದಾಂಟಿ | ದಾರುದಾರುಣ | ದೇಶದೇಶ | ನಡುನಡುಗು |
| ನಮೂನಮೂನೆ | ನೂರುನೂರು | ಪಿಡಿಪಿಡಿ | ಬಗೆಬಗೆ |
| ಬಣ್ಣಬಣ್ಣ | ಸಿಹಿಸಿಹಿ | ಸಿಲ್ಕಿಸಿಲ್ಕಿ | ಮೂಲೆಮೂಲೆ |
| ಮಣಿಮಣಿ | ಮೆಲ್ಲಮೆಲ್ಲನೆ | ಯುಗಯುಗ | ಯೋಚಿಸಿಯೋಚಿಸಿ |
| ರಾಶಿರಾಶಿ | | | |

## ಸ್ವಂತವಾಕ್ಯ ರಚಿಸಬೇಕಾದ ನುಡಿಗಟ್ಟುಗಳು:

| | | | |
|---|---|---|---|
| ಅಜಗಜಾಂತರ | ಅಡಿಪಾಯ | ಕರುಳಕುಡಿ | ಕನಸುಗಣ್ಣು |
| ಕೈಗಂಟಿಕೊಳ್ಳು | ಕೋಲುಮುರಿ | ಚಾಟಿಏಟು | ತೊಟ್ಟಿಲುತೂಗು |
| ಪಿಸುಮಾತು | ಮೊರೆಹೋಗು | ಮುಖವಾಡ | ಮುಗಿಲು ಹರಿದು ಬೀಳು |
| ಮೊರೆಯಿಡು | ಮುಗಿಬೀಳು | ಹುಳಿಗಟ್ಟು | ಕಣ್ಣರಳಿಸು |

## ಅನುಕರಣವಾಚಿಗಳು:

| | | | | |
|---|---|---|---|---|
| ಪಿಸಕ್ಕನೆ | ಕುರುಂಕುರುಂ | ಗಡಗಡನೆ | ಗರಗರ | ಗಹಗಹಿಸು |
| ಗಳಗಳನೆ | ಗಿರ್ರನೆ | ತೊಳತೊಳಿಸು | ಥಳಥಳ | ದಳದಳ |
| ದಡಕ್ಕನೆ | ಧೋಧೋ | ಪಿಳಪಿಳನೆ | ರಗರಗನೆ | ಲವಲವಿಸು |
| ಸರಸರನೆ | ಹನಿಹನಿ | ಗುಜುಗುಜಿಸು | | |

# ಪತ್ರಲೇಖನ:

**ಅ. ವೈಯಕ್ತಿಕ ಪತ್ರಲೇಖನ**

1. ಸಂಜನಾ / ವಿಜಯ್, ಪ್ರಥಮ ಪಿಯುಸಿ, ಶ್ರೀ ಗೀತಂ ಪದವಿಪೂರ್ವ ಕಾಲೇಜು, ದಾವಣಗೆರೆ, ದಾವಣಗೆರೆ ಜಿಲ್ಲೆ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ಪವಿತ್ರ/ಪೃಥ್ವಿ, ಪ್ರಥಮ ಪಿಯುಸಿ, ಸರ್ಕಾರಿ ಪದವಿಪೂರ್ವ ಕಾಲೇಜು, ಶಿವಮೊಗ್ಗ, ಶಿವಮೊಗ್ಗ ಜಿಲ್ಲೆ ಈ ವಿಳಾಸದಲ್ಲಿ ವ್ಯಾಸಂಗ ಮಾಡುತ್ತಿರುವ ನಿಮ್ಮ ಗೆಳೆಯ/ಗೆಳತಿಗೆ ತಾವು ಮಾಡಿರುವ ಪ್ರವಾಸಾನುಭವವನ್ನು ತಿಳಿಸಿ ಪತ್ರ ಬರೆಯಿರಿ.

2. ಅನುಷಾ / ಅಭಿಷೇಕ್, ಪ್ರಥಮ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಕೊಡಗು ಜಿಲ್ಲೆ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ರಾಜು/ರಾಧ ಲಕ್ಷ್ಮೀಪುರ ಬ್ರಹ್ಮಾವರ ತಾಲ್ಲೂಕು, ಉಡುಪಿ ಜಿಲ್ಲೆ ಈ ವಿಳಾಸದಲ್ಲಿ ವಾಸವಿರುವ ನಿಮ್ಮ ತಂದೆಗೆ ಪ್ರವಾಸಕ್ಕೆ ಹೋಗಲು ಹಣ ಮತ್ತು ಅನುಮತಿಯನ್ನು ಕೋರಿ ಪತ್ರ ಬರೆಯಿರಿ.

3. ರಾಮು/ ರಜನಿ, ಪ್ರಥಮ ಪಿಯುಸಿ, ಕುವೆಂಪು ಪದವಿ ಪೂರ್ವ ಕಾಲೇಜು, ವಿದ್ಯಾನಗರ, ತುಮಕೂರು. ಈ ವಿಳಾಸದಲ್ಲಿರುವವರು ನೀವೆಂದು ತಿಳಿದು ಸುಮ/ವಿನಯ್, ಪ್ರಥಮ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಜಯನಗರ, ಬೆಂಗಳೂರು ಈ ವಿಳಾಸದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ ವಾರ್ಷಿಕ ಪರೀಕ್ಷೆಗೆ ನೀವು ಮಾಡಿಕೊಂಡಿರುವ ಸಿದ್ಧತೆಯನ್ನು ಕುರಿತು ಪತ್ರ ಬರೆಯಿರಿ.

5. ಮಾನಸ/ ಮನೋಜ್ ಪ್ರಥಮ ಪಿಯುಸಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಸಾಗರ, ಶಿವಮೊಗ್ಗ ಜಿಲ್ಲೆ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ಸಂಧ್ಯಾ/ಭಾಸ್ಕರ್ ವಿನೋಭನಗರ, ಹುಬ್ಬಳ್ಳಿ, ಜಿಲ್ಲಾ ಧಾರವಾಡ ಈ ವಿಳಾಸದಲ್ಲಿ ವಾಸವಿರುವ ನಿಮ್ಮ ಗೆಳೆಯ/ಗೆಳತಿಗೆ ನಿಮ್ಮ ಪ್ರವಾಸದ ಅನುಭವವನ್ನು ಕುರಿತು ಒಂದು ಪತ್ರ ಬರೆಯಿರಿ.

6. ಚೈತ್ರ/ಚಿರಂತ್, ಕೆ.ಎಲ್.ಇ ಪದವಿ ಪೂರ್ವ ಕಾಲೇಜು, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ, ಇದನ್ನು ನಿಮ್ಮ ವಿಳಾಸವೆಂದು ಭಾವಿಸಿ ನಿಮ್ಮ ಗೆಳೆಯ/ಗೆಳತಿಯಾದ ವರುಣ್/ರಾಧಿಕಾ ವಿಶ್ವಚೇತನಾ ಪದವಿ ಪೂರ್ವ ಕಾಲೇಜು, ಆದರ್ಶನಗರ, ಕಲಬುರಗಿ ಇವರಿಗೆ ನಿಮ್ಮ ಕಾಲೇಜಿನ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಒಂದು ಪತ್ರ ಬರೆಯಿರಿ.

7. ರಕ್ಷಿತ್/ಸುಷ್ಮಾ ಪ್ರಥಮ ಪಿ.ಯು.ಸಿ. ಆನಂದ ಪದವಿಪೂರ್ವ ಕಾಲೇಜು, ಶಿವಮೊಗ್ಗ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ಮಲ್ಲಿಕಾರ್ಜುನ, ನೆಹರೂರಸ್ತೆ, ಹೊಸಹಳ್ಳಿ, ಸಕಲೇಶಪುರ ತಾಲ್ಲೂಕು. ಹಾಸನಜಿಲ್ಲೆ ಈ ವಿಳಾಸದಲ್ಲಿ ವಾಸವಿರುವ ನಿಮ್ಮ ತಂದೆಗೆ ಕಾಲೇಜಿನಲ್ಲಿ ನಡೆದ ವಾರ್ಷಿಕೋತ್ಸವ ಕುರಿತು ಪತ್ರ ಬರೆಯಿರಿ.

8. ಅರುಣ್/ಇಬ್ಬನಿ ಪ್ರಥಮ ಪಿ.ಯುಸಿ. ನಳಂದ ಪದವಿ ಪೂರ್ವ ಕಾಲೇಜು, ವಿವೇಕನಗರ, ಮಂಡ್ಯ, ಈ ವಿಳಾಸದಲ್ಲಿರುವವರು ನೀವೆಂದು ತಿಳಿದು. ಲಿಂಗರಾಜ/ರುಕ್ಮಿಣಿ, ಪ್ರಥಮ ಪಿ.ಯುಸಿ. ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆಂಗೇರಿ, ಬೆಂಗಳೂರು ಈ ವಿಳಾಸದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ 'ಗಾಂಧಿಜಯಂತಿ'ಯ ಅಂಗವಾಗಿ ಹಮ್ಮಿಕೊಂಡ ಸ್ವಚ್ಛತಾ ಕಾರ್ಯಕ್ರಮದ ಬಗ್ಗೆ ಪತ್ರ ಬರೆಯಿರಿ.

9. ಶಾಮ್/ಸುಪ್ರಿಯಾ ಪ್ರಥಮ ಪಿ.ಯು.ಸಿ. ರಾಘವೇಂದ್ರ ಪದವಿಪೂರ್ವ ಕಾಲೇಜು, ಹುಬ್ಬಳ್ಳಿ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ಮಲ್ಲಿಕಾರ್ಜುನ, ನೆಹರೂರಸ್ತೆ, ಹೊಸಹಳ್ಳಿ, ಸಕಲೇಶಪುರ ತಾಲ್ಲೂಕು. ಹಾಸನಜಿಲ್ಲೆ ಈ ವಿಳಾಸದಲ್ಲಿ ವಾಸವಿರುವ ನಿಮ್ಮ ತಂದೆಗೆ ಕಾಲೇಜಿನಲ್ಲಿ ನಡೆದ ವಾರ್ಷಿಕೋತ್ಸವ ಕುರಿತು ಪತ್ರ ಬರೆಯಿರಿ.

## ಅ. ವೈಯಕ್ತಿಕ ಪತ್ರಲೇಖನ

1. ಶೈಕ್ಷಣಿಕ ಪ್ರವಾಸಕ್ಕೆ ಅನುಮತಿ ಕೋರಿ ತಂದೆ/ತಾಯಿ/ಪೋಷಕರಿಗೆ ಪತ್ರ ಬರೆಯಿರಿ.
2. ಪರೀಕ್ಷಾ ಸಿದ್ಧತೆಯನ್ನು ತಿಳಿಸಿ ಪೋಷಕರಿಗೆ ಪತ್ರ ಬರೆಯಿರಿ
3. ಮೆಚ್ಚಿದ ಪುಸ್ತಕ/ವ್ಯಕ್ತಿಗಳನ್ನು ಕುರಿತು ಸ್ನೇಹಿತರಿಗೆ ಪತ್ರ ಬರೆಯಿರಿ.
4. ಕಾಲೇಜಿನ ವಾರ್ಷಿಕೋತ್ಸವ/ಕ್ರೀಡಾ ಚಟುವಟಿಕೆಗಳನ್ನು ವಿವರಿಸಿ ಸ್ನೇಹಿತರಿಗೆ/ಸಂಬಂಧಿಕರಿಗೆ ಪತ್ರ ಬರೆಯಿರಿ.
5. ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ/ನಾಡಹಬ್ಬಗಳ ವಿವರ ನೀಡಿ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.
6. ತಾವು ಮಾಡಿರುವ ಪ್ರವಾಸಾನುಭವವನ್ನು ತಿಳಿಸಿ ಗೆಳೆಯ / ಗೆಳತಿಗೆ ಪತ್ರ ಬರೆಯಿರಿ.
7. ನಿಮ್ಮೂರಿನಲ್ಲಿ ನಡೆಯುವ ಜಾತ್ರೆ, ಸಮ್ಮೇಳನಗಳಿಗೆ ಇಷ್ಟಮಿತ್ರರನ್ನು ಆಹ್ವಾನಿಸಿ ಪತ್ರ ಬರೆಯಿರಿ.

## ಆ. ವ್ಯವಹಾರಿಕ ಪತ್ರಲೇಖನ

1. ವಿದ್ಯುಚ್ಛಕ್ತಿಯ ಸಮರ್ಪಕ ಸರಬರಾಜನ್ನು ಕೋರಿ ಕಾರ್ಯನಿರ್ವಾಹಕ ಅಭಿಯಂತರರಿಗೆ ಬರೆಯುವ ಪತ್ರ.
2. ವರ್ಗಾವಣೆ ಪ್ರಮಾಣ ಪತ್ರ ಮತ್ತು ಅಂಕಪಟ್ಟಿ ಕೋರಿ ಕಾಲೇಜಿನ ಪ್ರಾಚಾರ್ಯರಿಗೆ ಪತ್ರ ಬರೆಯಿರಿ.
3. ನಾಲ್ಕು ದಿನಗಳ ರಜೆ ಕೋರಿ ನಿಮ್ಮ ತರಗತಿ ಉಪನ್ಯಾಸಕರಿಗೆ ಪತ್ರ ಬರೆಯಿರಿ.
4. ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆಯಲು ಕೋರಿ ಸಂಬಂಧಪಟ್ಟ ಬ್ಯಾಂಕಿನ ವ್ಯವಸ್ಥಾಪಕರಿಗೆ ಪತ್ರ ಬರೆಯಿರಿ.
5. ಶೈಕ್ಷಣಿಕ ಸಾಲ ಸೌಲಭ್ಯವನ್ನು ಕೋರಿ ಸಂಬಂಧಪಟ್ಟ ಬ್ಯಾಂಕಿನ ವ್ಯವಸ್ಥಾಪಕರಿಗೆ ಪತ್ರ ಬರೆಯಿರಿ.

6. ನಿಮ್ಮ ಊರಿನ ರಸ್ತೆ ದುರಸ್ತಿ, ಸೂಕ್ತ ಬಸ್ ಸಂಪರ್ಕ ವ್ಯವಸ್ಥೆಯನ್ನು ಕೋರಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಪತ್ರ ಬರೆಯಿರಿ.

7. ನಿಮ್ಮ ಮೆಚ್ಚಿನ ಪುಸ್ತಕಗಳನ್ನು ಅಂಚೆಮೂಲಕ ತರಿಸಿಕೊಳ್ಳಲು ಯಾವುದಾದರೂ ಪುಸ್ತಕಾಲಯಕ್ಕೆ ಪತ್ರ ಬರೆಯಿರಿ.

**ಆ. ವ್ಯವಹಾರಿಕ ಪತ್ರಲೇಖನ**

1. ಆಯಿಷಾ/ರಾಕೇಶ ಪ್ರಥಮ ಪಿಯುಸಿ ದೇವಿಕಾ ಪದವಿ ಪೂರ್ವ ಕಾಲೇಜು ಹಾವೇರಿ ಜಿಲ್ಲೆ ಇದು ನಿಮ್ಮ ವಿಳಾಸವೆಂದು ತಿಳಿದು ಹುಬ್ಬಳ್ಳಿಯಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ವ್ಯವಸ್ಥಾಪಕರಿಗೆ ನಿಮ್ಮ ಉಳಿತಾಯ ಖಾತೆ ತೆರೆಯುವಂತೆ ಕೋರಿ ಪತ್ರ ಬರೆಯಿರಿ.

2. ಶಾರದ / ಸ್ವರೂಪ್, ಸರಸ್ವತಿನಗರ, ಕಲಬುರಗಿ, ಇಲ್ಲಿ ನೀವು ವಾಸವಿದ್ದೀರೆಂದು ಭಾವಿಸಿ ವಿದ್ಯುಚ್ಛಕ್ತಿಯ ಸಮರ್ಪಕ ಸರಬರಾಜನ್ನು ಕೋರಿ ಹುಬ್ಬಳ್ಳಿಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಪತ್ರ ಬರೆಯಿರಿ.

3. ಗಗನ/ಭೀರೇಶ್, ಪ್ರಥಮ ಪಿಯುಸಿ ಸಪ್ತಗಿರಿ ಪಿಯು ಕಾಲೇಜು, ಹಾಸನ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಅಂಕಪಟ್ಟಿ ಮತ್ತು ವರ್ಗಾವಣೆ ಪತ್ರ ಕೋರಿ ಪತ್ರ ಬರೆಯಿರಿ.

4. ಗಾನವಿ/ಸಿದ್ಧಾರ್ಥ್, ಪ್ರಥಮ ಪಿಯುಸಿ ಕೆ.ವಿ.ಎಸ್ ಪಿಯು ಕಾಲೇಜು, ಶಿಕಾರಿಪುರ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ನಾಲ್ಕು ದಿನಗಳ ರಜೆ ಕೋರಿ ನಿಮ್ಮ ತರಗತಿ ಉಪನ್ಯಾಸಕರಿಗೆ ಪತ್ರ ಬರೆಯಿರಿ.

5. ಪ್ರಸನ್ನ/ಸುನೀತ, ಪ್ರಥಮ ಪಿಯುಸಿ ಜೆ.ಎಸ್.ಎಸ್ ಪದವಿ ಪೂರ್ವ ಕಾಲೇಜು, ಮಂಗಳೂರು. ಇದು ನಿಮ್ಮ ವಿಳಾಸ ಎಂದು ತಿಳಿದು ಮಣಿಪಾಲದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ವ್ಯವಸ್ಥಾಪಕರಿಗೆ ನಿಮ್ಮ ಉಳಿತಾಯ ಖಾತೆ ತೆರೆಯುವಂತೆ ಕೋರಿ ಪತ್ರ ಬರೆಯಿರಿ.

6. ಪ್ರದೀಪ್/ಸುನೀತ, ಪ್ರಥಮ ಪಿಯುಸಿ ಜೆ.ಎಸ್.ಎಸ್ ಪದವಿ ಪೂರ್ವ ಕಾಲೇಜು, ಮಣಿಪಾಲ್,ಉಡುಪಿ. ಇದು ನಿಮ್ಮ ವಿಳಾಸ ಎಂದು ತಿಳಿದು ಮಣಿಪಾಲದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ವ್ಯವಸ್ಥಾಪಕರಿಗೆ ಶೈಕ್ಷಣಿಕ ಸಾಲ ಸೌಲಭ್ಯವನ್ನು ಕೋರಿ ಪತ್ರ ಬರೆಯಿರಿ.

7. ಸವಿತಾ/ಅರವಿಂದ್, ಇಂಗಳಗಿ ಗ್ರಾಮ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. ಇಲ್ಲಿ ನೀವು ವಾಸವಿದ್ದೀರೆಂದು ಭಾವಿಸಿ ನಿಮ್ಮ ಊರಿಗೆ ಒಂದು ಸುಸಜ್ಜಿವಾದ ಗ್ರಂಥಾಲಯವನ್ನು ನಿರ್ಮಿಸಿಕೊಡುವಂತೆ ವಿನಂತಿಸಿ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

## ಪ್ರಬಂಧ ರಚನೆ :

**ಈಕೆಳಗಿನ ಯಾವುದಾದರೂ 2 ವಿಷಯಗಳನ್ನು ಆರಿಸತಕ್ಕದ್ದು**

1. ಅತಿವೃಷ್ಟಿ ಅನಾವೃಷ್ಟಿ
2. ಕೃಷಿ ಪದ್ಧತಿ
3. ಚಲನಚಿತ್ರ
4. ಜಾಗತೀಕರಣ
5. ಜಾಹೀರಾತುಗಳು
6. ಪುಸ್ತಕಗಳ ಮಹತ್ವ
7. ಫ್ಯಾಷನ್ ಪ್ರಪಂಚ
8. ಬದುಕುವ ಕಲೆ
9. ಬರಗಾಲ
10. ಯೋಗಾಭ್ಯಾಸ
11. ರಾಜಕಾರಣ
12. ಹದಿ ಹರೆಯ

**************